# ಅನುಬಂಧ

## ಉತ್ತರ ಕನ್ನಡ ಜಿಲ್ಲಾ ಪಂಚಾಯತಿಯ 2017–18 ನೇ ಸಾಲಿನ ವಾರ್ಷಿಕ ವರದಿ

| | | |
|---|---|---|
| **I** | **ಜಿಲ್ಲಾ ಪಂಚಾಯತಿ ವ್ಯಾಪ್ತಿ (ಪ್ರಕರಣ 158) :** | |
| | (1) ಪ್ರದೇಶ | : ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ, ಜೊಯಡಾ ತಾಲೂಕುಗಳ ಗ್ರಾಮಾಂತರ ಪ್ರದೇಶಗಳು ಅಧಿಕಾರ ವ್ಯಾಪ್ತಿಗೆ ಬರುತ್ತದೆ. |
| | (2) ಜನಸಂಖ್ಯೆ | : 14,36,847 (2011ರ ಜನಗಣತಿ ಪ್ರಕಾರ) |
| | **(3) ಒಟ್ಟು ಸ್ಥಾನಗಳ ಸಂಖ್ಯೆ (ಪ್ರಕರಣ 159) :**<br>(ಅ) ಚುನಾಯಿತ ಸದಸ್ಯರ ಸಂಖ್ಯೆ<br>(ಆ) ಲೋಕಸಭಾ ಸದಸ್ಯರ ಸಂಖ್ಯೆ<br>(ಇ) ವಿಧಾನ ಸಭಾ ಸದಸ್ಯರ ಸಂಖ್ಯೆ<br>(ಈ) ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ<br>(ಉ) ಸದಸ್ಯರಿಗೆ ಪ್ರಯಾಣ ಭತ್ಯೆ<br>(ಊ) ಸದಸ್ಯರಿಗೆ ದಿನಭತ್ಯೆ<br>(ಋ) ಸಭಾ ಭತ್ಯೆ<br>(ಎ) ಸದಸ್ಯರ ಗೌರವಧನ | <br>: 39<br>: 1<br>: 6<br>: 3<br>: ರೂ. 19,330–00<br>: ರೂ. 14,850–00<br>: ರೂ. 18,000–00<br>: ರೂ. 22,20,000–00 |
| **II** | **ಪ್ರಕರಣ 177, 178 ಮತ್ತು 186 ರನ್ವಯ ಮಾಹಿತಿ** | ದಿ : 01–04–2018 ರಿಂದ 31–03–2019 |
| | (1) ಅಧ್ಯಕ್ಷರ ಹೆಸರು | **ಶ್ರೀಮತಿ ಜಯಶ್ರೀ ಗುರುದಾಸ ಮೊಗೇರ**<br>ದಿ : 27–04–2016 ರಿಂದ ಈವರೆಗೆ |
| | (1) (i) ಆಡಳಿತಾಧಿಕಾರಿ ಹೆಸರು | -- |
| | (ಅ) ಅಧ್ಯಕ್ಷರ ವೇತನ, ಮನೆ ಬಾಡಿಗೆ ಮತ್ತು ಅತಿಥಿ ಭತ್ಯೆ<br>(ಆ) ಅಧ್ಯಕ್ಷರ ಪ್ರಯಾಣ ಭತ್ಯೆ<br>(ಇ) ಅಧ್ಯಕ್ಷರ ದಿನಭತ್ಯೆ | ರೂ. 8,59,200–00<br>ರೂ. 4,01,060–00<br>-- |
| | (2) ಉಪಾಧ್ಯಕ್ಷರ ಹೆಸರು | **ಶ್ರೀ ಸಂತೋಷ ಶಂಕರ ರೇಣಕೆ**<br>ದಿ : 27–04–2016 ರಿಂದ ಈವರೆಗೆ |
| | (ಅ) ಉಪಾಧ್ಯಕ್ಷರ ವೇತನ, ಮನೆಬಾಡಿಗೆ ಮತ್ತು ಅತಿಥಿ ಭತ್ಯೆ<br>(ಆ) ಉಪಾಧ್ಯಕ್ಷರ ಪ್ರಯಾಣ ಭತ್ಯೆ<br>(ಇ) ಉಪಾಧ್ಯಕ್ಷರ ದಿನಭತ್ಯೆ | ರೂ. 3,24,996–00<br>ರೂ. 55,768–00<br>-- |
| | (3) ಉಪಾಧ್ಯಕ್ಷರಿಗೆ ನಿಯೋಜಿಸಲಾದ ಯಾವುದೇ ಕರ್ತವ್ಯ | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ ರಾಜ್ ಅಧಿನಿಯಮದಂತೆ |
| | (4) ಅವಿಶ್ವಾಸ ನಿರ್ಣಯ ಏನಾದರೂ ಇದ್ದಲ್ಲಿ<br>(ಅ) ಅಧ್ಯಕ್ಷರ ವಿರುದ್ಧ<br>(ಆ) ಉಪಾಧ್ಯಕ್ಷರ ವಿರುದ್ಧ | <br>ಇಲ್ಲ<br>ಇಲ್ಲ |
| | (5) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ವ್ಯಾಜ್ಯಗಳಿವೆಯೇ? | ಹೌದು, ಅಧ್ಯಕ್ಷ/ಉಪಾಧ್ಯಕ್ಷರ ಹುದ್ದೆಯ ಕುರಿತು ರಾಜ್ಯ ಸರ್ಕಾರವು ಹೊರಡಿಸಿರುವ ಮೀಸಲಾತಿ ಅಧಿಸೂಚನೆಯ ವಿರುದ್ಧ ಕರ್ನಾಟಕ ಉಚ್ಛನ್ಯಾಯಾಲಯ, ಧಾರವಾಡ ಪೀಠದಲ್ಲಿ W.P. No. 103653/ 2016 (LB-RES) ದಾಖಲಾಗಿರುತ್ತದೆ. |

| | | |
|---|---|---|
| **III** | **ಚುನಾವಣೆಗಳು (ಪ್ರಕರಣ 160)** | |
| | (1) ಸಾಮಾನ್ಯ ಚುನಾವಣೆಯ ದಿನಾಂಕ | : ದಿ. 13-02-2016 |
| | (2) ಉಪಚುನಾವಣೆಗಳೇನಾದರೂ ಆಗಿದ್ದಲ್ಲಿ ದಿನಾಂಕ, ಕಾರಣ ಮತ್ತು ಫಲಿತಾಂಶಗಳು | : ಇಲ್ಲ |
| | (3) ಜಿಲ್ಲಾ ಪಂಚಾಯತಿಯ ಅವಧಿ ವಿಸ್ತರಣೆಗೊಂಡಿದ್ದಲ್ಲಿ | : ಇಲ್ಲ |
| | (4) ಚುನಾವಣೆ ವೆಚ್ಚ | : ಇಲ್ಲ |
| | (5) ಚುನಾವಣಾ ವಾಜ್ಯಗಳು ಇದ್ದಲ್ಲಿ | : ಇಲ್ಲ |
| **IV** | **ಜಿಲ್ಲಾ ಪಂಚಾಯತಿ ಸಭೆಗಳು ಮತ್ತು ಹಾಜರಾತಿ (ಪ್ರಕರಣ 180)** | |
| | **(ಅ) ಸಭೆಗಳು** | |
| | (1) ಸಾಮಾನ್ಯ ಸಭೆಗಳ ಸಂಖ್ಯೆ | : 5 |
| | (2) ವಿಶೇಷ ಸಭೆಗಳ ಸಂಖ್ಯೆ | : ಇಲ್ಲ |
| | (3) ಮುಂದೂಡಲಾದ ಸಭೆಗಳ ಸಂಖ್ಯೆ | : ಇಲ್ಲ |
| | (4) ಸಭೆಗಳನ್ನು ನಿಯಮಿತವಾಗಿ ನಡೆಸುವುದು | : ಸಭೆಗಳನ್ನು ನಿಯಮಿತವಾಗಿ ನಡೆಸಲಾಗುತ್ತಿದೆ. |
| | (5) ಸಭೆಯಲ್ಲಿ ಸದಸ್ಯರ ಹಾಜರಾತಿ | : ಇರುತ್ತದೆ |
| | (6) ಕೋರಂಗಾಗಿ ಮುಂದೂಡಲಾದ ಸಭೆಗಳು | : ಇಲ್ಲ |
| | (7) ಕಾರ್ಯನಿರ್ವಹಣೆ ನಿಯಮಗಳ ಕ್ರಮ | : ಕ್ರಮ ಜರುಗಿಸಲಾಗುತ್ತದೆ |
| | **(ಬ) ನಿರ್ಣಯಗಳ ಸಂಖ್ಯೆ** | |
| | (1) ಮಂಡಿಸಿದ್ದು | : 22 |
| | (2) ಅಂಗೀಕರಿಸಿದ್ದು | : 22 |
| | (3) ಚರ್ಚಿಸಿದ್ದು | : 22 |
| | (4) ಹಿಂಪಡೆದಿದ್ದು | : – |
| | (5) ಕೈಬಿಟ್ಟಿದ್ದು | : – |
| **V** | **ಸ್ಥಾಯಿ ಸಮಿತಿಗಳು ಮತ್ತು ಇತರ ಸಮಿತಿಗಳು (ಪ್ರಕರಣ 186, 187 ಮತ್ತು 188)** | |
| | (1) ರಚಿಸಲಾದ ಸ್ಥಾಯಿ ಸಮಿತಿ ಹಾಗೂ ಇತರ ಸಮಿತಿಗಳ ಸಂಖ್ಯೆ | : 5 |
| | (2) ಸಮಿತಿಗಳಿಗೆ ಚುನಾವಣೆ ನಡೆದ ದಿನಾಂಕ | : ದಿ. 14-06-2018 (ಎರಡನೇ ಅವಧಿ) |
| | (3) ಸ್ಥಾಯಿ ಸಮಿತಿಗಳ ಸದಸ್ಯರುಗಳ ಸಂಖ್ಯೆ | : ಪ್ರತಿ ಸಮಿತಿಗೆ 7 ಸದಸ್ಯರು (ಅಧ್ಯಕ್ಷರನ್ನು ಒಳಗೊಂಡು) |
| | (4) ಪ್ರತಿ ಸಮಿತಿಯ ಕಾರ್ಯಗಳ ಬಗ್ಗೆ ಸಂಕ್ಷಿಪ್ತ ವರದಿ | : ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಅಡಿಯಲ್ಲಿ ಸೂಚಿಸಿದ ಪ್ರಕಾರ |
| | (5) ಇತರೆ ಸಮಿತಿಗಳಿದ್ದಲ್ಲಿ ಅವುಗಳ ನಿರ್ವಹಿಸಿದ ಕಾರ್ಯಗಳು | : ಇಲ್ಲ |

| VI | ಪ್ರಕರಣ ರನ್ವಯ ಆಡಳಿತ : | |
|---|---|---|
| | (1) ಜಿಲ್ಲಾ ಪಂಚಾಯತಿ ಸಿಬ್ಬಂದಿ ಒಟ್ಟಾರೆ ಮಂಜೂರಾದ ಹುದ್ದೆಗಳ ಸಂಖ್ಯೆ | : 103 |
| | (2) ಖಾಲಿ ಇರುವ ಹುದ್ದೆಗಳು ಹಾಗೂ ಭರ್ತಿ ಮಾಡದಿರುವುದಕ್ಕೆ ಕಾರಣಗಳು | : 71 ಸರ್ಕಾರದಿಂದ ಭರ್ತಿಗೊಳಿಸಬೇಕಾಗಿದೆ. |
| | (3) ಅಧಿಕಾರಿ ಹಾಗೂ ಸಿಬ್ಬಂದಿಗಳ ತರಬೇತಿ | : ಕಾಲಕಾಲಕ್ಕೆ ತರಬೇತಿಗೆ ನಿಯೋಜಿಸಲಾಗುತ್ತಿದೆ |
| | (4) ಸಿಬ್ಬಂದಿಯೇತರರ ತರಬೇತಿ | : -- |
| | (5) ನಡೆಸಲಾದ ಸಮ್ಮೇಳನ ಮತ್ತು ನೀಡಲಾದ ಕೊಡುಗೆ | : -- |
| | (6) ದಂಡನೆಗಳು | : -- |
| | (7) ಅಧಿಕಾರಿ ಹಾಗೂ ನೌಕರರ ಮನವಿಗಳು | : -- |
| | (8) ಹೆಸರು ಮತ್ತು ನೇಮಕವಾದ ದಿನಾಂಕ<br>(ಅ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | **1. ಶ್ರೀ ಎಂ. ರೋಶನ್,** ಭಾ.ಆ.ಸೇ (ಸಮವರ್ತಿತ)<br>ದಿ: 29.07.2018 ತೊ 31.12.2018<br>**2. ಶ್ರೀ ಎಂ. ರೋಶನ್,** ಭಾ.ಆ.ಸೇ<br>ದಿ: 01.01.2019 ರಿಂದ 31.03.2019 |
| | (ಆ) ಉಪಕಾರ್ಯದರ್ಶಿ (ಆಡಳಿತ) | **1. ಶ್ರೀ ಆರ್.ಜಿ.ನಾಯಕ**<br>ದಿ:01.08.2016 ರಿಂದ 31.08.2018 ರವರೆಗೆ<br>**2. ಶ್ರೀಮತಿ ಶ್ಯಾಮಲಾ ವಿ. ಮಹಾಲೆ (ಪ್ರಭಾರ)**<br>ದಿ:01.09.2018 ರಿಂದ 31.03.2019 |
| | (ಇ) ಉಪಕಾರ್ಯದರ್ಶಿ (ಅಭಿವೃದ್ಧಿ) | **1. ಶ್ರೀ ವಿ.ಎಂ.ಹೆಗಡೆ (ಪ್ರಭಾರ)**<br>ದಿ: 01.11.2017 ರಿಂದ 28.07.2018<br>**2. ಶ್ರೀ ಎಂ. ರೋಶನ್, ಭಾ.ಆ.ಸೇ**<br>ದಿ: 29.07.2018 ರಿಂದ31.12.2018<br>**3. ಶ್ರೀ ವಿ.ಎಂ. ಹೆಗಡೆ (ಪ್ರಭಾರ)**<br>ದಿ: 01.01.2019 ರಿಂದ 31.03.2019 |
| | (ಈ) ಮುಖ್ಯ ಯೋಜನಾಧಿಕಾರಿ | **1. ಶ್ರೀ ವಿ.ಎಂ. ಹೆಗಡೆ**<br>ದಿ: 19.06.2017 ರಿಂದ 31.03.2019 |
| | (ಉ) ಯೋಜನಾ ನಿರ್ದೇಶಕರು (ಡಿಆರ್‌ಡಿಎ) | **1. ಶ್ರೀಮತಿ ಶ್ಯಾಮಲಾ ವಿ. ಮಹಾಲೆ**<br>ದಿ:16.06.2017 ರಿಂದ 31.03.2019 |
| | (ಊ) ಮುಖ್ಯ ಲೆಕ್ಕಾಧಿಕಾರಿ | **1. ಡಾ. ಸಂಗೀತಾ ಗಜಾನನ ಭಟ್ಟ**<br>ದಿ. 16-09-2013 ರಿಂದ 31-03-2019 |

| | | |
|---|---|---|
| VII | **ಜಿಲ್ಲಾ ಪಂಚಾಯತಕ್ಕೆ ಸಂಬಂಧಿಸಿದಂತೆ, ವಸ್ತು ಪ್ರದರ್ಶನ, ಕಾರ್ಯಾಗಾರ ಮತ್ತು ಸಮ್ಮೇಳನಗಳಿಗೆ ಕೊಡುಗೆ** | |
| | (1) ಅಖಿಲ ಭಾರತ ಮಟ್ಟದ ಸಂಘ ಸಂಸ್ಥೆಗಳು | ರೂ. 2.62 ಲಕ್ಷ |
| | (2) ರಾಜ್ಯಮಟ್ಟದ ಸಂಘ ಸಂಸ್ಥೆಗಳು | |
| | (3) ಅಂತರ ರಾಜ್ಯ ಮಟ್ಟದ ಸಂಘ ಸಂಸ್ಥೆಗಳು | |
| | (4) ಆರ್ಥಿಕ ಸಂಘ ಸಂಸ್ಥೆಗಳು | |
| | (5) ಇತರೆ ಸಂಘ ಸಂಸ್ಥೆಗಳು | |
| VIII | **ಜಿಲ್ಲಾ ಪಂಚಾಯತಿಯಿಂದ ತೆಗೆಯಲಾದ ಸಾಲಗಳು** | : ಇರುವುದಿಲ್ಲ |
| IX | **ಸಿಂಕಿಂಗ್ ಫಂಡ್ ರೂಪಿಸಿರುವುದು** | : ಇರುವುದಿಲ್ಲ |

*****

# ಜಿಲ್ಲಾ ಪಂಚಾಯತ ಸ್ಥಾಯಿ ಸಮಿತಿಗಳು

ಜಿಲ್ಲಾ ಪಂಚಾಯತ ಕಾರ್ಯಾಲಯದ ಚುನಾವಣಾ ನೋಟೀಸು ಸಂಖ್ಯೆ:ಉಕ/ ಜಿಪಂ/ ಸಮಿತಿ/ವಿವ/ ಸ್ಥಾ.ಸಮಿತಿ/ಚುನಾವಣೆ/2018-19 ಕಾರವಾರ, ದಿನಾಂಕ: 04-06-2018 ರಂತೆ ಚುನಾವಣಾ ವೇಳಾಪಟ್ಟಿ ನಿಗದಿಪಡಿಸಿ, ದಿನಾಂಕ: 14-06-2018 ರಂದು ಪೂರ್ವಾಹ್ನ: 9.00 ರಿಂದ 11.00 ಗಂಟೆಗೆ ನಾಮಪತ್ರಗಳನ್ನು ಸ್ವೀಕರಿಸಿ, ನಾಮಪತ್ರಗಳ ಪರಿಶೀಲನೆ ನಡೆಸಿ, ನಾಮಪತ್ರಗಳನ್ನು ಹಿಂಪಡೆಯಲು ಸಮಯ: ಅಪರಾಹ್ನ: 12.30ಕ್ಕೆ ನಿಗದಿಪಡಿಸಲಾಗಿದ್ದು, ಯಾವುದೇ ಅಭ್ಯರ್ಥಿಯು ನಾಮಪತ್ರ ಹಿಂಪಡೆದಿರುವುದಿಲ್ಲ. ಸದಸ್ಯರು ಸಲ್ಲಿಸಿದ ನಾಮಪತ್ರಗಳ ಬಗ್ಗೆ ಯಾವುದೇ ಸದಸ್ಯರಿಂದ ಆಕ್ಷೇಪಣೆ ಬಂದಿಲ್ಲವಾದ ಕಾರಣ ಉತ್ತರ ಕನ್ನಡ ಜಿಲ್ಲಾ ಪಂಚಾಯತದ ಎರಡನೇ ಅವಧಿಯ ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಿ ಘೋಷಿಸಲಾಯಿತು.

ಆದ್ದರಿಂದ, ಎರಡನೇ ಅವಧಿಗೆ ಈ ಕೆಳಕಂಡಂತೆ ಐದು (5) ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷ ಮತ್ತು ಸದಸ್ಯರುಗಳನ್ನು ಆಯ್ಕೆ ಮಾಡಿ ಆದೇಶ ಹೊರಡಿಸಲಾಗಿದೆ.

## I. ಹಣಕಾಸು, ಲೆಕ್ಕ ಪರಿಶೋಧನೆ ಹಾಗೂ ಯೋಜನೆ ಸ್ಥಾಯಿ ಸಮಿತಿ

| | | |
|---|---|---|
| 1. | ಶ್ರೀಮತಿ ಜಯಶ್ರೀ ಗುರುದಾಸ ಮೊಗೇರ | ಅಧ್ಯಕ್ಷರು |
| 2. | ಶ್ರೀ ಜಗದೀಶ ಗಿರಿಯಣ್ಣ ನಾಯಕ | ಸದಸ್ಯರು |
| 3. | ಶ್ರೀ ಬಸವರಾಜ ದೊಡ್ಮನಿ | ಸದಸ್ಯರು |
| 4. | ಶ್ರೀ ಗಜಾನನ ನಾಗೇಶ ಪೈ | ಸದಸ್ಯರು |
| 5. | ಶ್ರೀಮತಿ ಗಾಯತ್ರಿ ಮಂಜುನಾಥ ಗೌಡ | ಸದಸ್ಯರು |
| 6. | ಶ್ರೀ ರಮೇಶ ಜೊಂಜು ನಾಯ್ಕ | ಸದಸ್ಯರು |
| 7. | ಶ್ರೀ ಪಂಡರಿನಾಥ (ಕೃಷ್ಣಾ) ಮೇಥಾ | ಸದಸ್ಯರು |

## II. ಸಾಮಾನ್ಯ ಸ್ಥಾಯಿ ಸಮಿತಿ :

| | | |
|---|---|---|
| 1. | ಶ್ರೀ ಸಂತೋಷ ಶಂಕರ ರೇಣಕೆ | ಅಧ್ಯಕ್ಷರು |
| 2. | ಶ್ರೀ ಕೃಷ್ಣಾ ನಾರಾಯಣ ಗೌಡಾ | ಸದಸ್ಯರು |
| 3. | ಶ್ರೀಮತಿ ರೂಪಾ ನಾಯ್ಕ | ಸದಸ್ಯರು |
| 4. | ಶ್ರೀ ಶಿವಾನಂದ ಆರ್. ಹೆಗಡೆ | ಸದಸ್ಯರು |
| 5. | ಶ್ರೀ ಎಲ್. ಟಿ. ಪಾಟೀಲ್ | ಸದಸ್ಯರು |
| 6. | ಶ್ರೀಮತಿ ಸುಮಂಗಲಾ ವಸಂತ ನಾಯ್ಕ | ಸದಸ್ಯರು |
| 7. | ಶ್ರೀ ಪ್ರದೀಪ ದಯಾನಂದ ನಾಯಕ | ಸದಸ್ಯರು |

## III. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ :

| | | |
|---|---|---|
| 1. | ಶ್ರೀಮತಿ ಜಯಮ್ಮ ಕೃಷ್ಣ ಹಿರಳ್ಳಿ | ಅಧ್ಯಕ್ಷರು |
| 2. | ಶ್ರೀಮತಿ ಚೈತ್ರಾ ಚಂದ್ರಹಾಸ ಕೊಠಾರಕರ | ಸದಸ್ಯರು |
| 3. | ಶ್ರೀಮತಿ ಉಷಾ ಉದಯ ನಾಯ್ಕ | ಸದಸ್ಯರು |
| 4. | ಶ್ರೀಮತಿ ಉಷಾ ಆರ್. ಹೆಗಡೆ, | ಸದಸ್ಯರು |
| 5. | ಶ್ರೀ ದೀಪಕ ಗಣೇಶ ನಾಯ್ಕ | ಸದಸ್ಯರು |
| 6. | ಶ್ರೀಮತಿ ಲಕ್ಷ್ಮೀ ಸುಭಾಸ ಕೊರ್ವೇಕರ | ಸದಸ್ಯರು |
| 7. | ಶ್ರೀ ಶಾಂತಾ ಬಿ. ಬಾಂದೇಕರ | ಸದಸ್ಯರು |

## IV. ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ

| | | |
|---|---|---|
| 1. | ಶ್ರೀ ರತ್ನಾಕರ ಮಹಾದೇವ ನಾಯ್ಕ | ಅಧ್ಯಕ್ಷರು |
| 2. | ಶ್ರೀ ಆಲ್ಬರ್ಟ ಬರ್ನಲ್ ಡಿ'ಕೊಸ್ತ | ಸದಸ್ಯರು |
| 3. | ಶ್ರೀಮತಿ ಸಿಂಧು ಭಾಸ್ಕರ ನಾಯ್ಕ | ಸದಸ್ಯರು |
| 4. | ಶ್ರೀ ಜಿ. ಎನ್. ಹೆಗಡೆ ಮುರೇಗಾರ | ಸದಸ್ಯರು |
| 5. | ಶ್ರೀಮತಿ ನಾಗಮ್ಮಾ ಮಾಸ್ತಿ ಗೊಂಡ | ಸದಸ್ಯರು |
| 6. | ಶ್ರೀಮತಿ ಶ್ರೀಕಲಾ ಸುಬ್ರಹ್ಮಣ್ಯ ಶಾಸ್ತ್ರೀ | ಸದಸ್ಯರು |
| 7. | ಶ್ರೀಮತಿ ವೀಣಾ ಸೂರಜ್ ನಾಯ್ಕ, ಸೋನಿ | ಸದಸ್ಯರು |

## V. ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ :

| | | |
|---|---|---|
| 1. | ಶ್ರೀ ಸಂಜಯ ಮಾರುತಿ ಹಣಬರ | ಅಧ್ಯಕ್ಷರು |
| 2. | ಶ್ರೀಮತಿ ಸರಳಾ ದಿಕ್ಷಿತ ನಾಯಕ | ಸದಸ್ಯರು |
| 3. | ಶ್ರೀಮತಿ ಪುಷ್ಪಾ ಗೋವಿಂದ ನಾಯ್ಕ | ಸದಸ್ಯರು |
| 4. | ಶ್ರೀಮತಿ ಪ್ರಭಾವತಿ ಪರಮೇಶ್ವರ ಗೌಡ | ಸದಸ್ಯರು |
| 5. | ಶ್ರೀಮತಿ ಸವಿತಾ ಕೃಷ್ಣಾ ಗೌಡ | ಸದಸ್ಯರು |
| 6. | ಶ್ರೀಮತಿ ಮಹೇಶ್ರೀ ಸಂಜು ಮಿಶಾಳಿ | ಸದಸ್ಯರು |
| 7. | ಶ್ರೀ ನಾಗರಾಜ ನಾಯ್ಕ, ಬೇಡ್ಕಣಿ | ಸದಸ್ಯರು |

| ಕ್ರ. ಸಂ. | 2018–19 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಉ.ಕ. ಜಿಲ್ಲಾ ಪಂಚಾಯತ ಕಾರವಾರ, ಅಧ್ಯಕ್ಷರು/ಉಪಾಧ್ಯಕ್ಷರು/ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಹೆಸರು ಹಾಗೂ ಜಿಲ್ಲಾ ಪಂಚಾಯತ ಕ್ಷೇತ್ರಗಳ ವಿವರ | |
|---|---|---|
| 1. | ಶ್ರೀಮತಿ ಜಯಶ್ರೀ ಜಿ. ಮೊಗೇರ<br>25–ಹೆಬಳೆ | ಅಧ್ಯಕ್ಷರು,<br>ಉತ್ತರಕನ್ನಡ ಜಿಲ್ಲಾ ಪಂಚಾಯತ, ಕಾರವಾರ |
| 2. | ಶ್ರೀ ಸಂತೋಷ ಶಂಕರ ರೇಣಕೆ<br>3–ತೇರಗಾಂವ | ಉಪಾಧ್ಯಕ್ಷರು,<br>ಉತ್ತರಕನ್ನಡ ಜಿಲ್ಲಾ ಪಂಚಾಯತ, ಕಾರವಾರ |
| 3. | ಶ್ರೀ ರತ್ನಾಕರ ಮಹಾದೇವ ನಾಯ್ಕ<br>14–ಹೆಗಡೆ | ಅಧ್ಯಕ್ಷರು,<br>ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ |
| 4. | ಶ್ರೀ ಸಂಜಯ ಮಾರುತಿ ಹಣಬರ<br>1–ರಾಮನಗರ | ಅಧ್ಯಕ್ಷರು,<br>ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ |
| 5. | ಶ್ರೀಮತಿ ಜಯಮ್ಮ ಕೃಷ್ಣ ಹಿರಳಿ<br>37–ಪಾಳಾ | ಅಧ್ಯಕ್ಷರು,<br>ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ |
| 6. | ಶ್ರೀ ರಮೇಶ ಜೊಂಜು ನಾಯ್ಕ<br>2–ಜೋಯಿಡಾ | ಜಿಲ್ಲಾ ಪಂಚಾಯತ ಸದಸ್ಯರು |
| 7. | ಶ್ರೀಮತಿ ಮಹೇಶ್ರೀ ಸಂಜು ಮಿಶಾಳಿ<br>4–ಮುರ್ಕವಾಡ | ” |
| 8. | ಶ್ರೀ ಕೃಷ್ಣಾ ನಾರಾಯಣ ಗೌಡಾ<br>5–ಅಂಬಿಕಾನಗರ | ” |
| 9. | ಶ್ರೀ ಲಕ್ಷ್ಮೀ ಸುಭಾಸ ಕೊರ್ವೇಕರ<br>6–ಕಾವಲವಾಡಾ | ” |
| 10. | ಶ್ರೀ ಪಂಡರಿನಾಥ (ಕೃಷ್ಣ) ಮೇಥಾ<br>7–ಚಿತ್ತಾಕುಲಾ | ” |
| 11. | ಶ್ರೀ ಶಾಂತಾ ಬಿಕ್ಕು ಬಾಂದೇಕರ<br>8–ಮಲ್ಲಾಪುರ | ” |
| 12. | ಶ್ರೀಮತಿ ಚೈತ್ರಾ ಚಂದ್ರಹಾಸ ಕೋಠಾರಕರ<br>9–ಚೆಂಡಿಯಾ | ” |
| 13. | ಶ್ರೀ ಜಗದೀಶ ಗಿರಿಯಣ್ಣ ನಾಯಕ<br>10–ಅಗಸೂರು | ” |
| 14. | ಶ್ರೀಮತಿ ಸರಳಾ ದಿಕ್ಷಿತ ನಾಯಕ<br>11–ಶೇಟಗೇರಿ | ” |

| ಕ್ರ. ಸಂ. | 2018–19 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಉ.ಕ. ಜಿಲ್ಲಾ ಪಂಚಾಯತ ಕಾರವಾರ, ಅಧ್ಯಕ್ಷರು/ಉಪಾಧ್ಯಕ್ಷರು/ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಹೆಸರು ಹಾಗೂ ಜಿಲ್ಲಾ ಪಂಚಾಯತ ಕ್ಷೇತ್ರಗಳ ವಿವರ | |
|---|---|---|
| **15.** | ಶ್ರೀಮತಿ ಉಷಾ ಉದಯ ನಾಯ್ಕ<br>**12**–ಅವರ್ಸಾ | ಜಿಲ್ಲಾ ಪಂಚಾಯತ ಸದಸ್ಯರು |
| **16.** | ಶ್ರೀಮತಿ ಗಾಯತ್ರಿ ಮಂಜುನಾಥ ಗೌಡ<br>**13**–ಗೋಕರ್ಣ | ” |
| **17.** | ಶ್ರೀ ಪ್ರದೀಪ ದಯಾನಂದ ನಾಯಕ<br>**15**–ಮಿರ್ಜಾನ | ” |
| **18.** | ಶ್ರೀ ಗಜಾನನ ನಾಗೇಶ ಪೈ<br>**16**–ಮೂರೂರು | ” |
| **19.** | ಶ್ರೀಮತಿ ವೀಣಾ ಸೂರಜ್ ನಾಯ್ಕ, ಸೋನಿ<br>**17**–ದೇವಗಿರಿ | ” |
| **20.** | ಶ್ರೀ ಶಿವಾನಂದ ಆರ್. ಹೆಗಡೆ<br>**18**–ಹಳದೀಪುರ | ” |
| **21.** | ಶ್ರೀಮತಿ ಶ್ರೀಕಲಾ ಸುಬ್ರಹ್ಮಣ್ಯ ಶಾಸ್ತ್ರೀ<br>**19**–ಮುಗ್ವಾ | ” |
| **22.** | ಶ್ರೀಮತಿ ಸವಿತಾ ಕೃಷ್ಣ ಗೌಡ<br>**20**–ಮಾವಿನಕುರ್ವಾ | ” |
| **23.** | ಶ್ರೀಮತಿ ಪುಷ್ಪಾ ಗೋವಿಂದ ನಾಯ್ಕ<br>**21**–ನಗರಬಸ್ತಿಕೇರಿ | ” |
| **24.** | ಶ್ರೀ ದೀಪಕ ಗಣೇಶ ನಾಯ್ಕ<br>**22**–ಮಂಕಿ | ” |
| **25.** | ಶ್ರೀಮತಿ ಸಿಂಧು ಭಾಸ್ಕರ ನಾಯ್ಕ<br>**23**–ಮಾವಳ್ಳಿ | ” |
| **26.** | ಶ್ರೀಮತಿ ನಾಗಮ್ಮ ಮಾಸ್ತಿ ಗೊಂಡ<br>**24**–ಶಿರಾಲಿ | ” |
| **27.** | ಶ್ರೀ ಆಲ್ಬರ್ಟ ಬರ್ನಲ್ ಡಿಕೊಸ್ತಾ<br>**26**–ಬೆಳಕೆ | ” |
| **28.** | ಶ್ರೀಮತಿ ರೂಪಾ ನಾಯ್ಕ<br>**27**–ಬನವಾಸಿ | ” |

| ಕ್ರ. ಸಂ. | 2018–19 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಉ.ಕ. ಜಿಲ್ಲಾ ಪಂಚಾಯತ ಕಾರವಾರ, ಅಧ್ಯಕ್ಷರು/ಉಪಾಧ್ಯಕ್ಷರು/ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಹೆಸರು ಹಾಗೂ ಜಿಲ್ಲಾ ಪಂಚಾಯತ ಕ್ಷೇತ್ರಗಳ ವಿವರ | |
|---|---|---|
| 29. | ಶ್ರೀ ಬಸವರಾಜ ದೊಡ್ಮನಿ<br>28–ಬದನಗೋಡ | ಜಿಲ್ಲಾ ಪಂಚಾಯತ ಸದಸ್ಯರು |
| 30. | ಶ್ರೀ ಗಜಾನನ ನಾರಾಯಣ ಹೆಗಡೆ, ಮುರೇಗಾರ್<br>29–ಹುಲೇಕಲ್ | ” |
| 31. | ಶ್ರೀಮತಿ ಪ್ರಭಾವತಿ ಪರಮೇಶ್ವರ ಗೌಡ<br>30–ಜಾನ್ಮನೆ | ” |
| 32. | ಶ್ರೀಮತಿ ಉಷಾ ಹೆಗಡೆ<br>31–ದೊಡ್ನಳ್ಳಿ | ” |
| 33. | ಶ್ರೀ ಗೆಜ್ಜೆ ಎಂ.ಜಿ.ಹೆಗಡೆ ಕಿಬ್ಬಳ್ಳಿ<br>32–ಅಣಲೇಬೈಲ್ | ” |
| 34. | ಶ್ರೀಮತಿ ಸುಮಂಗಲಾ ವಸಂತ ನಾಯ್ಕ<br>33–ಹಲಗೇರಿ | ” |
| 35. | ಶ್ರೀ ನಾಗರಾಜ ನಾಯ್ಕ, ಬೇಡ್ಕಣಿ<br>34–ದೊಡ್ಮನೆ | ” |
| 36. | ಶ್ರೀಮತಿ ಶ್ರುತಿ ಗಣಪತಿ ಹೆಗಡೆ<br>35–ಇಡಗುಂದಿ | ” |
| 37. | ಶ್ರೀಮತಿ ರೂಪಾ ಗಜಾನನ ಬೂರಮನೆ<br>36–ಕಂಪ್ಲಿ (ಮಂಚಿಕೇರಿ) | ” |
| 38. | ಶ್ರೀ ಲಕ್ಷ್ಮಣ ತಿಪ್ಪಣ್ಣ ಪಾಟೀಲ್<br>38–ಚಿಗಳ್ಳಿ | ” |
| 39. | ಶ್ರೀ ರವಿ ಸಿದ್ದನಗೌಡ ಪಾಟೀಲ್<br>39–ಇಂದೂರು | ” |

*****

ಮಾಹಿತಿ ಮೂಲ : ಸಮಿತಿ ಶಾಖೆ, ಉ.ಕ. ಜಿ.ಪಂ. ಕಾರವಾರ

# ಗ್ರಾಮೀಣ ಅಭಿವೃದ್ಧಿ ಯೋಜನೆಗಳು (2018-19)

## 1) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ. (M.G.N.R.E.G.S)

ಉತ್ತರ ಕನ್ನಡ ಜಿಲ್ಲೆಯಲ್ಲಿ 3ನೇ ಹಂತದಡಿ ದಿನಾಂಕ: 01-04-2008 ರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಜಾರಿಗೆ ಬಂದಿರುತ್ತದೆ. ಸ್ವಇಚ್ಛೆಯಿಂದ ಅರ್ಜಿ ಸಲ್ಲಿಸುವ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ಒದಗಿಸುವುದು, ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಹಾಗೂ ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯಲ್ಲಿ ಜಲಸಂರಕ್ಷಣೆ ಮತ್ತು ಮಳೆನೀರು ಕೊಯ್ಲು, ಬರಗಾಲ ತಡೆಗಟ್ಟುವಿಕೆ, ವೈಯಕ್ತಿಕ, ನೀರಾವರಿ ಸೌಲಭ್ಯ ಒದಗಿಸುವುದು. ನೀರಿನ ಮೂಲಗಳ ಪುನಶ್ಚೇತನ, ಜಮೀನು ಅಭಿವೃದ್ಧಿ ಹಾಗೂ ನೆರೆ (ಪ್ರವಾಹ) ನಿಯಂತ್ರಣ ತಡೆ ನಿರ್ಮಾಣ ಮತ್ತು ಸರ್ವಋತು ಗ್ರಾಮೀಣ ರಸ್ತೆ ನಿರ್ಮಾಣ ಕೃಷಿ ಆಧಾರಿತ ಚಟುವಟಿಕೆಗಳು, ಜಾನುವಾರಗಳಿಗೆ ಶೆಡ್ ನಿರ್ಮಾಣ, ಮೀನುಗಾರಿಕೆಗೆ ಜಲಾಗಾರ ನಿರ್ಮಾಣ, ಕೃಷಿ ಹೊಂಡ, ಭಾರತ ನಿರ್ಮಾಣ ರಾಜೀವ ಗಾಂಧಿ ಸೇವಾ ಕೇಂದ್ರ ಕಾಮಗಾರಿಗಳನ್ನು ಕೈಗೊಳ್ಳಬಹುದು.

ಈ ಯೋಜನೆಯಡಿ ನಿಗದಿಪಡಿಸಿದ ಒಟ್ಟು ಅನುದಾನದ ಶೇಕಡಾ 90 ರಷ್ಟು ಕೇಂದ್ರದ ಪಾಲು ಹಾಗೂ ಶೇಕಡಾ 10 ರಷ್ಟು ರಾಜ್ಯದ ಪಾಲು ಇರುತ್ತದೆ.

2018-19 ನೇ ಸಾಲಿನಲ್ಲಿ ಬಿಡುಗಡೆಯಾದ ಹಾಗೂ ಶಿಲ್ಕು ಉಳಿದ ಅನುದಾನ ಸೇರಿ ಒಟ್ಟು ರೂ.46.69 ಕೋಟಿ ಅನುದಾನದಲ್ಲಿ ರೂ. 46.69 ಕೋಟಿ ವಿನಿಯೋಗ ಮಾಡಲಾಗಿದೆ. ಒಟ್ಟು 160667 ಕುಟುಂಬಗಳು ನೊಂದಣಿಯಾಗಿದ್ದು, 159692 ಕುಟುಂಬಗಳಿಗೆ ಉದ್ಯೋಗ ಚೀಟಿ ವಿತರಿಸಲಾಗಿದೆ ಹಾಗೂ ರೂ. 15.05 ಲಕ್ಷ ಮಾನವ ದಿನ ಉತ್ಪಾದಿಸಲಾಗಿದೆ ಮತ್ತು 5900 ಕಾಮಗಾರಿಗಳೂ ಪೂರ್ಣವಾಗಿದ್ದು 16803 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

## 2) ಪ್ರಧಾನ ಮಂತ್ರಿ ಆವಾಸ್ ಯೋಜನೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪೂರ್ಣ ಪ್ರಮಾಣದ ಸಹಾಯಧನ ಯೋಜನೆಯಾಗಿರುತ್ತದೆ. 2016-17 ನೇ ಸಾಲಿನಿಂದ ಜಾರಿಗೆ ಬಂದಿದೆ. ಘಟಕದ ವೆಚ್ಚ ರೂ. 1,20,000/- ಲಕ್ಷ ಮಾಡಲಾಗಿದೆ. ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತದೆ. ಫಲಾನುಭವಿಯ ಸ್ವಂತ ನಿವೇಶನ ಹೊಂದುವುದು ಕಡ್ಡಾಯವಾಗಿರುತ್ತದೆ. ಫಲಾನುಭವಿಗಳು 2011-SECC ವಸತಿ/ ನಿವೇಶನ ರಹಿತರ ಪಟ್ಟಿಯಿಂದಲೇ ಆಯ್ಕೆ ಮಾಡಬೇಕು. ಈ ಯೋಜನೆಯಡಿಯಲ್ಲಿ ಫಲಾನುಭವಿಗಳು ಡಿ.ಐ.ಆರ್ ಯೋಜನೆಯಡಿಯಲ್ಲಿ ಬ್ಯಾಂಕ್ ಸಾಲ ರೂ. 30,000/- ಪಡೆಯಬಹುದಾಗಿದೆ. MGNREGA

ಯೋಜನೆಯಡಿ ಮನೆಯ ವಿವಿಧ ಹಂತಗಳಲ್ಲಿ ಒಟ್ಟು 90 ಮಾನವ ದಿನದ ಮೊತ್ತ ನೀಡಲಾಗುವುದು. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಸಾಮಾಜಿಕ ಆರ್ಥಿಕ ಜಾತಿ ಗಣತಿ 2011 ರ ಪಟ್ಟಿಯಲ್ಲಿರುವ ಎಲ್ಲಾ ಅರ್ಹ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ಎಲ್ಲಾ ಫಲಾನುಭವಿಗಳಿಗೆ ಮನೆಯನ್ನು ಮಂಜೂರು ಮಾಡಲಾಗುತ್ತದೆ. ಸಹಾಯಧನ ಮೊತ್ತವನ್ನು 4 ಹಂತಗಳಲ್ಲಿ (ನೆಲಗಟ್ಟು, ಕಿಟಕಿ, ಛಾವಣಿ ಮತ್ತು ಪೂರ್ಣ) ಪಾವತಿಸಲಾಗುತ್ತದೆ. ಪ್ರತಿಯೊಂದು ಹಂತದಲ್ಲಿ ಫಲಾನುಭವಿಯು ಮನೆ ಮುಂದೆ ನಿಂತು ಭಾವ ಚಿತ್ರ ತೆಗೆಯುವುದು ಕಡ್ಡಾಯವಾಗಿರುತ್ತದೆ.

2017–18 ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಜಿಲ್ಲೆಗೆ 512 ಭೌತಿಕ ಗುರಿ ನೀಡಲಾಗಿದ್ದು, 251 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. 83 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, 119 ಮನೆಗಳು ವಿವಿಧ ಹಂತದಲ್ಲಿವೆ. 261 ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ. 2018–19 ನೇ ಸಾಲಿಗೆ ಗುರಿ ನಿಗದಿಪಡಿಸಿರುವುದಿಲ್ಲ.

### 3) ಬಸವ ವಸತಿ ಯೋಜನೆ

2017–18 ನೇ ಸಾಲಿಗೆ ಜಿಲ್ಲೆಗೆ ಒಟ್ಟು 12128 ಗುರಿ ನಿಗದಿಪಡಿಸಲಾಗಿದೆ. ಫಲಾನುಭವಿಗಳ ಆಯ್ಕೆಯನ್ನು ಮಾಡುವಾಗ 40% ಪ.ಜಾತಿ, ಪ.ವರ್ಗಕ್ಕೆ 10%, ಸಾಮಾನ್ಯ ವರ್ಗದವರಿಗೆ 50%, ಅಂಗವಿಕಲರಿಗೆ 5% ಹಾಗೂ ಮಾಜಿ ಸೈನಿಕರಿಗೆ ಹಾಗೂ ಹಿರಿಯ ನಾಗರಿಕರಿಗೆ ತಲಾ 1% ರಂತೆ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. ವಾರ್ಷಿಕ ಆದಾಯವು ರೂ.32000.00 ಮೀರದಂತೆ ಇರಬೇಕಾಗಿದ್ದು ಫಲಾನುಭವಿಯ ಹೆಸರು ವಸತಿ ರಹಿತರ ಸಮೀಕ್ಷೆಯ ಪಟ್ಟಿಯಲ್ಲಿ ಸೇರಿರುವುದು ಅವಶ್ಯವಿರುತ್ತದೆ. ಫಲಾನುಭವಿಗಳನ್ನು ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಬೇಕಾಗಿದೆ.

ಘಟಕದ ಬೆಲೆಯು ರೂ.1.50 ಲಕ್ಷ ಇದ್ದು, ಅದರಲ್ಲಿ ರೂ. 1.20 ಲಕ್ಷ ಸಹಾಯಧನವಾಗಿದ್ದು, ಉಳಿದ 30,000–00 ಫಲಾನುಭವಿ ವಂತಿಕೆ ಅಥವಾ ಸಾಲ ಪಡೆಯಬಗುದಾಗಿದೆ. MGNREGA ಯಡಿ ವಿವಿಧ ಹಂತಗಳಲ್ಲಿ 90 ಮಾನವ ದಿನ ನೀಡಲಾಗುವುದು.

ಒಟ್ಟು 12128 ಮನೆಗಳ ಗುರಿಯಲ್ಲಿ 11843 ಮನೆಗಳಿಗೆ ಫಲಾನುಭವಿ ಆಯ್ಕೆ ಮಾಡಲಾಗಿದೆ. 1967 ಮನೆ ಪೂರ್ಣಗೊಂಡಿದ್ದು, 6170 ಮನೆಗಳು ವಿವಿಧ ಹಂತದಲ್ಲಿರುತ್ತದೆ. ಸಹಾಯಧನವು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ. 2018–19 ನೇ ಸಾಲಿಗೆ ಒಟ್ಟು 4620 ಗುರಿ ನಿಗದಿಪಡಿಸಲಾಗಿದೆ.

### 4) ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ:–

ಈ ಯೋಜನೆಯಡಿ ವಸತಿ ರಹಿತ ಪ.ಜಾತಿ, ಪ.ಪಂಗಡ ಜನರಿಗೆ ಘಟಕ ವೆಚ್ಚ ರೂ. 1.50 ಲಕ್ಷ ನಗದಿಪಡಿಸಲಾಗಿದೆ. MGNREGA ಯಡಿ ವಿವಿಧ ಹಂತದಲ್ಲಿ 90 ಮಾನವ ದಿನ ನೀಡಲಾಗುವುದು. ಈ

ಯೋಜನೆಯಡಿ ಪ.ಜಾತಿ ರವರಿಗೆ 70% ಪ.ಪಂಗಡರವರಿಗೆ 30% ಮನೆಗಳನ್ನು ಮೀಸಲಿಡಲಾಗಿದೆ. MGNREGAಯಡಿ ವಿವಿಧ ಹಂತದಲ್ಲಿ 90 ಮಾನವ ದಿನ ನೀಡಲಾಗುವುದು. ಗ್ರಾಮ ಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಗೆ ಜಿಲ್ಲಾ ಪಂಚಾಯತಿಯಿಂದ ಶಿಫಾರಸ್ಸು ಮಾಡಿ ಅನುಮೋದನೆಗಾಗಿ RGRHCL ನಿಗಮಕ್ಕೆ ಕಳುಹಿಸಿ ಅನುಮೋದನೆ ಪಡೆಯಲಾಗುವುದು.

ಈ ಯೋಜನೆಯಡಿ ಸಾಮಾಜಿಕ ಹಾಗೂ ಆರ್ಥಿಕ ಜಾತಿ ಗಣತಿ 2011 ರಲ್ಲಿ ಸಂಗ್ರಹಿಸಿದ ಮಾಹಿತಿಯಲ್ಲಿನ ನಿವೇಶನ ರಹಿತರ ಫಲಾನುಭವಿಗಳನ್ನು ಆಯ್ಕೆ ಮಾಡಲು ನಿರ್ದೇಶಿಸಲಾಗಿದೆ. ಇದರಲ್ಲಿ

1) ವಸತಿಹೀನರು (ಸಾರ್ವಜನಿಕ ಸ್ಥಳಗಳಲ್ಲಿ ವಾಸಿಸುತ್ತಿರುವುರು)
2) ಗುಡಿಸಲು ವಾಸಿಗಳು
3) ತಾತ್ಕಾಲಿಕ ಶೆಡ್ಡುಗಳಲ್ಲಿ ವಾಸಿಸುತ್ತಿರುವವರು
4) ಶಿಥಿಲಗೊಂಡ ಮನೆಗಳಲ್ಲಿ ವಾಸಿಸುತ್ತಿರುವವರು
5) ಕಚ್ಚಾ ಮನೆಗಳಲ್ಲಿ ವಾಸಿಸುತ್ತಿರುವವರನ್ನು ಆದ್ಯತೆ ಮೇಲೆ ಆಯ್ಕೆ ಮಾಡಲು ತಿಳಿಸಲಾಗಿದೆ.

ಈ ಯೋಜನೆಯಡಿ ಭೌತಿಕ ಗುರಿಗೆ ನಿರ್ಬಂಧವಿರುವುದಿಲ್ಲ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳು ಗ್ರಾಮ ಪಂಚಾಯತಕ್ಕೆ ಸಲ್ಲಿಸಿದ ಅರ್ಜಿಗಳು ಗುರಿಗಳಾಗಿರುತ್ತದೆ.

2017-18 ನೇ ಸಾಲಿನಲ್ಲಿ ಜಿಲ್ಲೆಯ 11 ತಾಲೂಕುಗಳಿಗೆ ಪರಿಶಿಷ್ಟ ಜಾತಿಯ ಜನರಿಗಾಗಿ ಮತ್ತು ಪರಿಶಿಷ್ಟ ಪಂಗಡ ಜನರಿಗಾಗಿ ಒಟ್ಟು 2310 ಮನೆಗಳ ಗುರಿ ನಿಗದಿಪಡಿಲಾಗಿದೆ. ಪರಿಶಿಷ್ಟ ಜಾತಿ 887 ಮತ್ತು ಪರಿಶಿಷ್ಟ ಪಂಗಡ 318 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. 178 ಮನೆಗಳನ್ನು ಪೂರ್ಣಗೊಳಿಸಲಾಗಿದೆ. 674 ಮನೆಗಳು ವಿವಿಧ ಹಂತದಲ್ಲಿದೆ. 2018-19 ನೇ ಸಾಲಿಗೆ ಗುರಿ ನಿಗದಿಪಡಿಸಿರುವುದಿಲ್ಲ.

## 5) ಗ್ರಾಮ ವಿಕಾಸ ಯೋಜನೆ

ಗ್ರಾಮ ವಿಕಾಸ ಯೋಜನೆ 2014-15 ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಘೋಷಣೆ ಮಾಡಿರುತ್ತದೆ. ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ.ಜಾತಿ, ಪ.ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮ ಸೇರಿ ಒಟ್ಟು 5 ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೊಳಿಸಲು 3 ವರ್ಷದ ಯೋಜನೆ ತೆಗೆದುಕೊಳ್ಳಲಾಗಿದೆ.

2011 ರ ಜನಸಂಖ್ಯೆಯನ್ನು ಆಧರಿಸಿ ಆಯ್ಕೆಯಾಗುವ ಪ್ರತಿ ಗ್ರಾಮದ ಜನಸಂಖ್ಯೆ ಸುಮಾರು 1000 ಇರುವಂತೆಯೂ ಮತ್ತು ಆಯ್ಕೆಯಾದ ಗ್ರಾಮದ ಅಭಿವೃದ್ಧಿ ತಲಾನುದಾನ ರೂ.7500/- ರಂತೆ ಪ್ರತಿ ಗ್ರಾಮಕ್ಕೆ ರೂ.0.75 ಕೋಟಿ ಅನುದಾನ ದೊರಕುವಂತೆ ಮತ್ತು ಪ್ರತಿ ಗ್ರಾಮೀಣ ಮತ ಕ್ಷೇತ್ರಕ್ಕೆ ಒಟ್ಟು ಗರಿಷ್ಟ 5 ಸಾವಿರ ಜನಸಂಖ್ಯೆಯುಳ್ಳ ಗರಿಷ್ಟ 5 ಗ್ರಾಮಗಳಿಗೆ ಗರಿಷ್ಟ ರೂ. 3.75 ಕೋಟಿ ಹಂಚಿಕೆ ಮಾಡಲಾಗಿರುತ್ತದೆ. ಗ್ರಾಮ ವಿಕಾಸ ಯೋಜನೆಯಡಿ ಸರಕಾರವು ಅನುಮೋದನೆ ನೀಡಿದ ಗ್ರಾಮಗಳ ಅಭಿವೃದ್ಧಿ ಮಾಡುವ ಅನುಷ್ಠಾನದ ಹೊಣೆ ಗ್ರಾಮ ಪಂಚಾಯತಿಗೆ ವಹಿಸಿಕೊಡಲು ಮಂಜೂರಾತಿ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿರುವ 6 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಗ್ರಾಮ ವಿಕಾಸ ಯೋಜನೆಯಡಿ 38 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಸರಕಾರದಿಂದ ರೂ. 2924.890 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಸದ್ರಿ ಅನುದಾನವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಗಳಿಗೆ ಗುರಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. (ರೂ. 1886.89 ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.)

## 6) ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ.

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ 2017-18 ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಘೋಷಣೆ ಮಾಡಿರುತ್ತದೆ. ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮ ಸೇರಿ ಒಟ್ಟು ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೊಳಿಸಲು 3 ವರ್ಷದ ಯೋಜನೆ ತೆಗೆದುಕೊಳ್ಳಲಾಗಿದೆ.

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಜಿಲ್ಲೆಗೆ 35 ಗ್ರಾಮಗಳನ್ನು 6 ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆ ಮಾಡಲು ಮಾನ್ಯ ಶಾಸಕರಿಗೆ ಅಧಿಕಾರ ನೀಡಲಾಗಿದೆ. ಮಾನ್ಯ ಶಾಸಕರು ಜಿಲ್ಲೆಯಲ್ಲಿ 35 ಗ್ರಾಮಗಳನ್ನು ಆಯ್ಕೆ ಮಾಡಿದ್ದು ಪ್ರತಿ ಗ್ರಾಮಕ್ಕೆ ಗ್ರಾಮದ ಅಭಿವೃದ್ಧಿಗಾಗಿ ತಲಾ 1 ಕೋಟಿ ಅನುದಾನ ನಿಗದಿಪಡಿಸಲಾಗಿದೆ.

2018-19 ಸಾಲಿನಲ್ಲಿ ಒಟ್ಟು ರೂ. 1142.44 ಲಕ್ಷ ಬಿಡುಗಡೆಯಾಗಿದ್ದು, ರೂ. 558.43 ಲಕ್ಷ ಖರ್ಚು ಮಾಡಲಾಗಿರುತ್ತದೆ.

## 7) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ :

ಈ ಯೋಜನೆಯು ರಾಜ್ಯವಲಯ ಯೋಜನೆಯಾಗಿದೆ. ಪಶ್ಚಿಮ ಘಟ್ಟದ ಪ್ರದೇಶದಲ್ಲಿ ವಿವಿಧ ಜಲಾನಯನ ಕಾರ್ಯಕ್ರಮಗಳು, ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಫಲಾನುಭವಿ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸಿ ಜನರ ಆರ್ಥಿಕ ಮಟ್ಟವನ್ನು ಸಮಗ್ರ ರೀತಿಯಲ್ಲಿ ಉತ್ತಮಪಡಿಸುವದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪಶ್ಚಿಮ ಘಟ್ಟದ ಪ್ರದೇಶದ ಪರಿಸರ ಹಾಗೂ ಜೀವ ವೈವಿಧ್ಯತೆಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಪಶ್ಚಿಮ ಘಟ್ಟದ ಅಭಿವೃದ್ಧಿ ಯೋಜನೆಯ ಕೆಲವು ಮುಖ್ಯ ಕಾರ್ಯಕ್ರಮಗಳು:**

1) ಜೀವ ವೈವಿಧ್ಯತೆಯನ್ನು ಕಾಪಾಡುವುದು.
2) ವನ್ಯಜೀವಿಗಳ ಬಗ್ಗೆ ಅಧ್ಯಯನ ಕೈಗೊಳ್ಳುವುದು.
3) ಕೃಷಿ, ಅರಣ್ಯ ಮತ್ತು ತೋಟಗಾರಿಕಾ ವಲಯವನ್ನು ಅಭಿವೃದ್ಧಿಪಡಿಸುವುದು.
4) ಔಷಧೀಯ ಸಸ್ಯ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವುದು.

5) ಪರಿಸರ, ಜೀವ ವೈವಿಧ್ಯತೆ ಸಂರಕ್ಷಣೆ ಬಗ್ಗೆ ಜನರಿಗೆ ಶಿಕ್ಷಣ ನೀಡುವುದು.

6) ಜಲಾನಯನ ಪ್ರದೇಶದ ಸಮಗ್ರ ಅಭಿವೃದ್ಧಿ ಬಗ್ಗೆ ಹೆಚ್ಚಿನ ಒತ್ತು ನೀಡುವುದು.

ಈ ಮೇಲಿನ ಕಾರ್ಯಕ್ರಮಗಳನ್ನು ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸಾಮಾನ್ಯ ಮಾರ್ಗಸೂಚಿಗಳು ಪರಿಷ್ಕೃತ ಆವೃತ್ತಿ–2011 ರನ್ವಯ ಸಮಗ್ರ ಜಲಾನಯನ ಅಭಿವೃದ್ಧಿಯ ದೃಷ್ಠಿಕೋನದಲ್ಲಿ ಅರಣ್ಯ, ತೋಟಗಾರಿಕೆ, ಪಶುಪಾಲನೆ, ರೇಷ್ಮೆ, ಅಸಂಪ್ರದಾಯ ಇಂಧನಶಕ್ತಿ ಮೂಲಗಳು, ಕೃಷಿ ಮತ್ತು ಭೂಸಾರ ಸಂರಕ್ಷಣೆ ಮುಂತಾದ ವಲಯಗಳಲ್ಲಿ ಅಭಿವೃದ್ಧಿಪಡಿಸಬೇಕಾಗಿದೆ.

2018–19 ಹಿಂದಿನ ಶಿಲ್ಕು ಸೇರಿ ಒಟ್ಟು ರೂ. 83.20 ಲಕ್ಷಗಳ ಅನುದಾನ ಪೈಕಿ ರೂ. 35.06 ಲಕ್ಷಗಳನ್ನು ವಿನಿಯೋಗಿಸಿ ಶೇ. 42% ಪ್ರಗತಿ ಸಾಧಿಸಲಾಗಿದೆ.

## 8) ಜೈವಾನಿಲ ಅಭಿವೃದ್ಧಿ ಯೋಜನೆ

ಗ್ರಾಮೀಣ ಪ್ರದೇಶದಲ್ಲಿ ಜಾನುವಾರುಗಳ ತ್ಯಾಜ್ಯ ವಸ್ತುಗಳನ್ನು ಉಪಯೋಗಿಸುವ ಮೂಲಕ ಅರಣ್ಯ ನಾಶವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು, ಅಡಿಗೆ ಮನೆಯಲ್ಲಿ ಹೊಗೆ ರಹಿತ ವಾತಾವರಣ ಕಲ್ಪಿಸಲು ಮಹಿಳೆ ಮತ್ತು ಆರೋಗ್ಯ ರಕ್ಷಣೆ ಹಾಗೂ ಪರಿಸರ ಮಾಲಿನ್ಯ ತಡೆಗಟ್ಟಲು 1982–83 ನೇ ಸಾಲಿನಿಂದ ರಾಷ್ಟ್ರೀಯ ಜೈವಿಕ ಅನಿಲ ಯೋಜನೆಯನ್ನು ಜಾರಿಗೊಳಿಸಲಾಗಿದೆ. 2018–19 ನೇ ಸಾಲಿನಲ್ಲಿ 350 ಭೌತಿಕ ಗುರಿ ನೀಡಿದ್ದು, 350 ಅನಿಲ ಸ್ಥಾವರಗಳನ್ನು ನಿರ್ಮಿಸಿ 100% ರಷ್ಟು ಪ್ರಗತಿ ಸಾಧಿಸಲಾಗಿದೆ. ರೂ. 30.475 ಲಕ್ಷಗಳು ಕೇಂದ್ರ ಸಹಾಯಧನ ಮತ್ತು ರೂ. 16.38 ಲಕ್ಷಗಳು ರಾಜ್ಯ ಸಹಾಯಧನವನ್ನು ಪಾವತಿಸಿ ಪ್ರಗತಿ ಸಾಧಿಸಲಾಗಿದೆ.

## 9) ತಾಲೂಕ ಪಂಚಾಯತ ಅನಿರ್ಭಂದಿತ ಅನುದಾನ

ಸರಕಾರದ ಆದೇಶ ಸಂಖ್ಯೆ:ಗ್ರಾಅಪ:127:ಜಿಪಸ:2011:ದಿನಾಂಕ:15–07–2011 ಹಾಗೂ 06–02–2012 ರನ್ವಯ ಜಿಲ್ಲಾ ಪಂಚಾಯತ ಕಾರ್ಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತಾಲೂಕ ಪಂಚಾಯತಗಳಿಗೆ ವಾರ್ಷಿಕವಾಗಿ ಒದಗಿಸಲಾಗಿರುವ ಒಂದು ಕೋಟಿ ರೂಪಾಯಿಗಳ ಅನಿರ್ಭಂದಿತ ಅನುದಾನವನ್ನು ಈ ಕೆಳಗಿನ ಉದ್ದೇಶಗಳಿಗೆ ಬಳಸಲಾಗುತ್ತಿದೆ.

1) ಸಾಮಾಜಿಕ ಅರಣ್ಯ, ಅರಣ್ಯದಲ್ಲಿ ಭೂಸಾರ ಸಂರಕ್ಷಣೆ, ನಡುತೋಪು ನಿರ್ಮಾಣ.

2) ಕುಡಿಯುವ ನೀರಿನ ತೆರೆದ ಬಾವಿಗಳ ನಿರ್ಮಾಣ.

3) ಶಾಲೆಗಳಿಗೆ ಮತ್ತು ಅಂಗನವಾಡಿಗಳಿಗೆ ನೀರು ಸರಬರಾಜು ಮತ್ತು ಶೌಚಾಲಯಗಳು ಹಾಗೂ ಅಡುಗೆ ಕೋಣೆ ನಿರ್ಮಾಣ.

4) ಆಹಾರ ಧಾನ್ಯ ಸಂಗ್ರಹಣೆ, ದಾಸ್ತಾನು ಮಳಿಗೆ ಹಾಗೂ ಮಳಿಗೆಗಳು.

5) ಸರಕಾರಿ ಶಿಕ್ಷಣ ಸಂಸ್ಥೆಗಳ ಕಟ್ಟಡಗಳ ದುರಸ್ತಿ.

6) ತಾಲೂಕ ಪಂಚಾಯತಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವ ಕಡೆಗಳಲ್ಲಿ ತಾಲೂಕ ಪಂಚಾಯತ ಕಚೇರಿ ಕಟ್ಟಡಗಳ ನಿರ್ಮಾಣ ಪೀಠೋಪಕರಣಗಳ ಖರೀದಿ ಮತ್ತು ತಾಲೂಕ ಪಂಚಾಯತ ವಸತಿ ಕಟ್ಟಡಗಳ ನಿರ್ಮಾಣ.

7) ಸಾರ್ವಜನಕ ಗ್ರಂಥಾಲಯ ಮತ್ತು ವಾಚನಾಲಯಗಳ ನಿರ್ಮಾಣ.

8) ಅಧಿಕೃತವಾಗಿ ಮಂಜೂರಾದ ಹಾಗೂ ದಾಖಲೆಗಳನ್ನು ಹೊಂದಿರುವ ರುದ್ರಭೂಮಿ/ ಸ್ಮಶಾನ ಜಾಗದ ಅಭಿವೃದ್ಧಿ.

9) ಸರಕಾರಿ ಶಾಲೆಗಳ ಶಾಲಾವನ, ಶಾಲಾ ಕೈತೋಟ, ಔಷಧಿ ವನ ನಿರ್ಮಾಣ.

10) ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕಟ್ಟಡ ನಿರ್ಮಾಣ, ನಿರ್ವಹಣೆ, ಸೇರ್ಪಡೆ, ಮಾರ್ಪಾಡುಗಳನ್ನು ತಾಲೂಕ ಪಂಚಾಯತದಿಂದ ಕೈಗೊಳ್ಳಬಹುದು.

ಈ ಪ್ರಯುಕ್ತ 2018-19 ನೇ ಸಾಲಿನ ಉತ್ತರ ಕನ್ನಡ ಜಿಲ್ಲೆಯ ಪ್ರತಿ ತಾಲೂಕ ಪಂಚಾಯತಗಳಿಗೆ ತಲಾ ರೂ. 1.00 ಕೋಟಿಯಂತೆ ಬಿಡುಗಡೆಯಾದ ಒಟ್ಟು ರೂ. 1100.00 ಲಕ್ಷ ಅನುದಾನದಲ್ಲಿ ರೂ. 1064.64 ಲಕ್ಷ ವಿನಿಯೋಗಿಸಲಾಗಿದೆ.

## 10) ಜಿಲ್ಲಾ ಪಂಚಾಯತ ಅಭಿವೃದ್ಧಿ ಅನುದಾನ

ಜಿಲ್ಲಾ ಪಂಚಾಯತ ಅಭಿವೃದ್ಧಿ ಅನುದಾನವನ್ನು ಆಸ್ತಿ ಸೃಜಿಸುವಲ್ಲಿ ಅಂದರೆ, ಸ್ವಂತ ಕಟ್ಟಡಗಳು, ಮಳಿಗೆಗಳು, ಶಾಲಾ ಮತ್ತು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸುವಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ.

ಲೆಕ್ಕ ಶೀರ್ಷಿಕೆ: "2515-00-101-0-31" ಲಿಂಕ್ ಡೊಕ್ಯುಮೆಂಟ ಪ್ರಕಾರ 2018-19 ನೇ ಸಾಲಿಗೆ ರೂ. 50.00 ಲಕ್ಷ ಜಿಲ್ಲಾ ಪಂಚಾಯತ ಅಭಿವೃದ್ಧಿ ಅನುದಾನ ಸರಕಾರದಿಂದ ಬಿಡುಗಡೆಯಾಗಿರುವಂತೆ ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರವಾರ/ ಶಿರಸಿ ರವರಿಗೆ ಬಿಡುಗಡೆಗೊಳಿಸಲಾಗಿದೆ. ಮಾರ್ಚ್ 2018 ರ ಅಂತ್ಯಕ್ಕೆ ರೂ. 48.63 ಲಕ್ಷ ಅನುದಾನವನ್ನು ವಿನಿಯೋಗಿಸಲಾಗಿದೆ.

## 11) 14 ನೇ ಹಣಕಾಸು ಆಯೋಗದ ಅನುದಾನ :

ಸರಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/75/ಗ್ರಾಪಸ/2015. ದಿನಾಂಕ: 08-02-2016 ರಂತೆ 14 ನೇ ಹಣಕಾಸು ಆಯೋಗದ ಅನುದಾನವನ್ನು ಬಳಸಿಕೊಳ್ಳಲು ಮಾರ್ಗಸೂಚಿಯನ್ನು ನೀಡಿರುತ್ತಾರೆ.

14 ನೇ ಹಣಕಾಸು ಆಯೋಗದ ಅನುದಾನದಲ್ಲಿ ಶೇ 90% ರಷ್ಟು ಅನುದಾನವನ್ನು ಮೂಲಭೂತ ಅನುದಾನವಾಗಿ ಆಸ್ತಿ ಸೃಜನೆ ಕಾಮಗಾರಿಗಳಿಗೆ ಮೀಸಲಿಟ್ಟು ಶೇ. 10% ಅನುದಾನವನ್ನು ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಮಗಾರಿಗಳಗೆ ಉಪಯೋಗಿಸಬಹುದಾಗಿದೆ.

ಕಾಮಗಾರಿಗಳಿಗೆ ಅನುದಾನ ಉಪಯೋಗಿಸಲು ಈ ಕೆಳಗಿನಂತೆ ಅವಕಾಶ ನೀಡಲಾಗಿದೆ.

1) ಕುಡಿಯುವ ನೀರು ಸರಬರಾಜು ಕನಿಷ್ಠ ಶೇ 20%.

2) ಸೆಪ್ಟಿಕ್ ಟ್ಯಾಂಕ್ ನಿರ್ವಹಣೆಯನ್ನು ಒಳಗೊಂಡಂತೆ ನೈರ್ಮಲ್ಯ ಕಾಮಗಾರಿ } ಶೇ.10%

3) ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ.

4) ಸಮುದಾಯ ಆಸ್ತಿಗಳ ನಿರ್ವಹಣೆ ಗರಿಷ್ಠ. ಶೇ.15%

5) ಗ್ರಾಮ ಪಂಚಾಯತಿ ರಸ್ತೆಗಳ ನಿರ್ವಹಣೆ.

6) ಪಾದಾಚಾರಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ ಶೇ. 15%

7) ಮಳೆ ನೀರಿನ ಚರಂಡಿ ನಿರ್ಮಾಣ ಶೇ. 15%.

8) ಬೀದಿ ದೀಪಗಳ ಶೇ. 10%

9) ಸ್ಮಶಾನಗಳು ಶೇ.5%

10) ಜೀವ ವೈವಿಧ್ಯತೆ ರಕ್ಷಣೆ

11) ಕಾರ್ಯಚರಣೆ ಮತ್ತು ನಿರ್ವಹಣೆ ಶೇ.10%

ಶೇ.25% ಅನುದಾನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಕಾಮಗಾರಿಗಳಿಗೆ ಮೀಸಲಿಡತಕ್ಕದ್ದು.

**ಶೇ.10% ಅನುದಾನ ಬಳಕೆ ಬಗ್ಗೆ.**

1) ಗಣಕಯಂತ್ರ ಲಭ್ಯವಿಲ್ಲದ ಗ್ರಾಮ ಪಂಚಾಯತಗಳಿಗೆ ಗಣಕಯಂತ್ರ/ ಬಿಡಿಭಾಗ.

2) ಇಂಟರ್ನೆಟ್ ಸಂಪರ್ಕ.

3) ಹೊಸ ಗ್ರಾಮ ಪಂಚಾಯತಗಳಿಗೆ ಪಿಠೋಪಕರಣ.

4) ಡಾಟಾ ಎಂಟ್ರಿ ವೆಚ್ಚ.

5) ಬೀದಿ ದೀಪ/ ನೀರಿನ ಸರಬರಾಜು ವೆಚ್ಚ.

6) ಜಮಾಬಂದಿ ವೆಚ್ಚ.

7) ನಕ್ಷೆಗಳ ತಯಾರಿಕೆ

8) ಗ್ರಾಮ ಪಂಚಾಯತ ಸೌರ ದೀಪಗಳ ಅಳವಡಿಕೆ.

9) ಘನ ತ್ಯಾಜ್ಯ ಹಾಗೂ ದ್ಯವ್ರ ತ್ಯಾಜ್ಯ.

10) ಲೋಕಲ್ ಅಡಿಟ್ ಸರ್ಕಲ್ ಸನ್ನದ್ದು ಶುಲ್ಕ ಇತರೆ.

2018–19 ನೇ ಸಾಲಿಗೆ ರೂ. 408.973 ಲಕ್ಷ ಗ್ರಾಮ ಪಂಚಾಯತಗಳಿಗೆ ಬಿಡುಗಡೆಯಾಗಿದ್ದು, ರೂ. 5.048 ಲಕ್ಷ ವಿನಿಯೋಗಿಸಲಾಗಿದೆ.

*****

ಮಾಹಿತಿ ಮೂಲ : ಅಭಿವೃದ್ಧಿ ಶಾಖೆ, ಉ.ಕ. ಜಿ.ಪಂ. ಕಾರವಾರ

# ಸ್ವಚ್ಛ ಭಾರತ ಮಿಷನ್

## ಉತ್ತರಕನ್ನಡ ಜಿಲ್ಲಾ ಪಂಚಾಯತ

ಈ ಹಿಂದೆ ಜಾರಿಯಲ್ಲಿದ್ದ **ನಿರ್ಮಲ ಭಾರತ ಅಭಿಯಾನ** ಯೋಜನೆಯನ್ನು ದಿನಾಂಕ : 02–10–2014 ರಿಂದ **ಸ್ವಚ್ಛ ಭಾರತ ಮಿಷನ್** ಎಂದು ಪುನರ್ ನಾಮಕರಣದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ತ್ಯಾಜ್ಯಗಳ ಅಸಮರ್ಪಕ ವಿಲೇವಾರಿ, ಅಸ್ವಚ್ಛತೆ, ಬಯಲು ಮಲವಿಸರ್ಜನೆಯೆಂಬ ಕೆಟ್ಟ ಪದ್ಧತಿಯನ್ನು ತೊಲಗಿಸಿ, ಜನರಿಗೆ ಉತ್ತಮ ಆರೋಗ್ಯ ನೀಡುವ ಮೂಲಕ ಜನರ ಜೀವನ ಮಟ್ಟ ಸುಧಾರಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

**ಕಾರ್ಯಕ್ರಮದಲ್ಲಿ ದೊರೆಯುವ ಸೌಲಭ್ಯಗಳು :**

ಬೇಸ್‌ಲೈನ್ ಸರ್ವೆ 2012ರಲ್ಲಿ ಬಿಟ್ಟು ಹೋದ (LOB) ಶೌಚಾಲಯ ರಹಿತರೆಂದು ನಮೂದಾಗಿರುವ ಅರ್ಹ ಬಿ.ಪಿ.ಎಲ್. ಹಾಗೂ ನಿರ್ಬಂಧಿತ ಎ.ಪಿ.ಎಲ್. (ಎಸ್.ಸಿ./ಎಸ್.ಟಿ., ಸಣ್ಣ ಮತ್ತು ಅತಿ ಸಣ್ಣ ರೈತರು, ಮಹಿಳಾ ಪ್ರಧಾನ ಕುಟುಂಬ, ಅಂಗವಿಕಲ ಕುಟುಂಬ ಹಾಗೂ ಭೂರಹಿತ ಕಾರ್ಮಿಕ ಕುಟುಂಬಗಳು) ಕುಟುಂಬಗಳು ವೈಯಕ್ತಿಕ ಶೌಚಾಲಯಕ್ಕೆ ಪ್ರೋತ್ಸಾಹ ಧನವನ್ನು ಸ್ವಚ್ಛ ಭಾರತ ಮಿಷನ್‌ನಡಿ ಪಡೆಯಲು ಅರ್ಹರಾಗಿರುತ್ತಾರೆ.

* ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೌಚಾಲಯ ನಿರ್ಮಾಣ ಹಾಗೂ ನಿರಂತರ ನೀರಿನ ಸೌಲಭ್ಯ ಅಳವಡಿಸಿಕೊಂಡರೆ ಒಟ್ಟೂ ರೂ.12,000–00.
* ಅನುಸೂಚಿತ ಜಾತಿ/ಪಂಗಡದ ಕುಟುಂಬಗಳಿಗೆ ಶೌಚಾಲಯ ನಿರ್ಮಾಣ, ನೀರಿನ ಸೌಲಭ್ಯ ಮತ್ತು ಶೌಚಾಲಯಕ್ಕೆ ಟೈಲ್ಸ್ ಅಳವಡಿಸಿದ್ದರೆ ರೂ.15,000–00.
* ಸಮುದಾಯ ಶೌಚಾಲಯಕ್ಕೆ ರೂ.1,80,000–[illegible] ಭವಿ ವಂತಿಗೆ ರೂ.20,000–00 ಸೇರಿ ಒಟ್ಟೂ ರೂ.2,00,000–00.
* ಘನ ಮತ್ತು ದ್ರವ್ಯ ತ್ಯಾಜ್ಯ ವಿಲೇವಾರಿಯ[illegible]ಣವಾಗಿ ರೂ.7.00 ಲಕ್ಷದಿಂದ ರೂ.20.00 ಲಕ್ಷಗಳವರೆಗೆ ಗ್ರಾಮ ಪಂಚಾಯ[illegible]

**ವಿಶೇಷ ಸಾಧನೆ :**

- 2017–18ನೇ ಸಾಲಿನಲ್ಲಿ ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತ (ODF) ಜಿಲ್ಲೆ ಎಂದು ಘೋಷಿಸಲಾಗಿದೆ.
- ಜಿಲ್ಲೆಯಲ್ಲಿ **CLTS** ಸಮುದಾಯದ ಸಹಭಾಗಿತ್ವದೊಂದಿಗೆ ಸಂಪೂರ್ಣ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.
- ಪ್ರಾಥಮಿಕ/ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಕುರಿತು ಅರಿವು ಮೂಡಿಸಲು ಸ್ವಚ್ಛ ಗ್ರಾಮ ವಿಷಯದಡಿ ಚಿತ್ರಕಲಾ ಸ್ಪರ್ಧೆಯನ್ನು ಹಾಗೂ ಬಯಲು ಬಹಿರ್ದೆಸೆ ಮುಕ್ತ ಹಾಗೂ ತ್ಯಾಜ್ಯಗಳ ಸುರಕ್ಷಿತ ವಿಲೇವಾರಿ ಕುರಿತು ಪ್ರಬಂಧ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು.
- ಶೌಚಾಲಯ ಬಳಕೆ ಹಾಗೂ ಗ್ರಾಮಗಳಲ್ಲಿ ತ್ಯಾಜ್ಯಗಳ ಸುರಕ್ಷಿತ ವಿಲೇವಾರಿಗೆ ಅರಿವು ಮೂಡಿಸಲು ಸಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ "ಸ್ವಚ್ಛತಾ ಹೀ ಸೇವಾ" ಯೋಜನೆಯಡಿ ಬೃಹತ ಶ್ರಮದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

# Uttar Kannada Zilla Panchayat
# Swachha Bharat Mision 2018-19

| S. No. | Name of the Taluka | 2018-19 LOB IHHL Target | Physical Complete in IMIS Entry | IHHL Financial Expenditure |
|---|---|---|---|---|
| 1. | Ankola | 660 | 52 | 10.26 |
| 2. | Bhatkal | 1512 | 309 | 63.14 |
| 3. | Haliyal | 666 | 29 | 2.57 |
| 4. | Honavar | 946 | 343 | 50.19 |
| 5. | Karwar | 507 | 102 | 10.95 |
| 6. | Kumta | 1312 | 288 | 34.65 |
| 7. | Mundgod | 881 | 37 | 2.19 |
| 8. | Siddapur | 608 | 100 | 15.89 |
| 9. | Sirsi | 1431 | 192 | 8.1 |
| 10. | Supa | 877 | 97 | 0.96 |
| 11. | Yellapur | 1132 | 168 | 4.29 |
| | **TOTAL** | **10532** | **1717** | **203.19** |

*** Total Release** — **₹ 804.84 Lakhs**

*** Total Expenditure** — **₹ 375.05 Lakhs**

*** Total Balance** — **₹ 429.79 Lakhs**

*****

ಮಾಹಿತಿ ಮೂಲ : ಆಡಳಿತ ಶಾಖೆ, ಉ.ಕ. ಜಿ.ಪಂ. ಕಾರವಾರ

# “ಸಂಜೀವಿನಿ”–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ

ಭಾರತ ಸಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ತನ್ನ ಪ್ರಮುಖ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ ಮೂಲಕ ಪುನರ್ ರಚನೆ ಮಾಡಿದೆ. ಗ್ರಾಮೀಣ ಬಡತನದ ನಿವಾರಣೆ ಈ ಅಭಿಯಾನದ ಮುಖ್ಯ ಗುರಿಯಾಗಿದೆ.

**ಅಭಿಯಾನದ ಧ್ಯೇಯ:**

“ಲಾಭಯುತ ಆದಾಯವನ್ನು ಒದಗಿಸುವುದರ ಮೂಲಕ ಬಡತನದ ತೀವ್ರತೆಯನ್ನು ಕಡಿಮೆಗೊಳಿಸುವುದು ಮತ್ತು ಸಮುದಾಯ ಸಂಸ್ಥೆಗಳ ಮೂಲಕ ಸ್ವ–ಉದ್ಯೋಗ ಅವಕಾಶವನ್ನು ಕಲ್ಪಿಸುವುದರಿಂದಾಗಿ ಗ್ರಾಮೀಣ ಜನರ ಜೀವನಮಟ್ಟದಲ್ಲಿ ಸಮರ್ಥನೀಯವಾದ ಅಭಿವೃದ್ಧಿಯನ್ನು ಕಾಣುವುದು.”

* ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟೂ 13004 ಸ್ವಸಹಾಯ ಗುಂಪುಗಳ ಮೂಲ ಮಾಹಿತಿಯನ್ನು ಎನ್‌ಆರ್‌ಎಲ್‌ಎಂ ತಂತ್ರಾಂಶದಲ್ಲಿ ಅಳವಡಿಸಲಾಗಿದೆ.

* 231 ಗ್ರಾಮ ಪಂಚಾಯತ ಮಟ್ಟದ ಒಕ್ಕೂಟಗಳಲ್ಲಿ ಇಲ್ಲಿಯವರೆಗೆ ಒಟ್ಟೂ 9262 ಸ್ವಸಹಾಯ ಸಂಘಗಳು ಸದಸ್ಯತ್ವ ಪಡೆದುಕೊಂಡಿವೆ.

* ಜಿಲ್ಲೆಯಲ್ಲಿ 2013–14 ರಿಂದ 2018–19 ರ ವರೆಗೆ ಒಟ್ಟೂ 4568 ಸ್ವಸಹಾಯ ಗುಂಪುಗಳಿಗೆ ಸಾಮರ್ಥ್ಯ ಬಲವರ್ಧನೆ ತರಬೇತಿ ನೀಡಲಾಗಿದೆ.

* ಜಿಲ್ಲೆಯ ಯೋಜನೆಯಡಿ ಎಲ್ಲ 231 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯತ ಹಂತದ ಒಕ್ಕೂಟಗಳನ್ನು ರಚಿಸಲಾಗಿದೆ.

* ಜಿಲ್ಲೆಯಲ್ಲಿ 2013–14 ರಿಂದ 2018–19 ರವರೆಗೆ 1777 ಸ್ವಸಹಾಯ ಗುಂಪುಗಳಿಗೆ ರೂ. 2195 ಲಕ್ಷಗಳನ್ನು ಸಮುದಾಯ ಬಂಡವಾಳ ನಿಧಿ ನೀಡಲಾಗಿದೆ

* ಜಿಲ್ಲೆಯಲ್ಲಿ 2013–14 ರಿಂದ 2018–19 ರ ವರೆಗೆ 1204 ಸ್ವಸಹಾಯ ಗುಂಪುಗಳಿಗೆ ಪ್ರತಿ ಗುಂಪಿಗೆ ರೂ. 15000 ರಂತೆ ಸುತ್ತು ನಿಧಿ ನೀಡಲಾಗಿದೆ
* ಜಿಲ್ಲೆಯಲ್ಲಿ 2013–14 ರಿಂದ 2018–19 ರ ವರೆಗೆ 16879 ಸ್ವಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸಲಾಗಿದೆ.

*****

ಮಾಹಿತಿ ಮೂಲ: ಎನ್.ಆರ್.ಎಲ್.ಎಂ. ಶಾಖೆ, ಉ.ಕ. ಜಿ.ಪಂ. ಕಾರವಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉತ್ತರ ಕನ್ನಡ, ಕಾರವಾರ ಇಲಾಖೆಯ ಕಾರ್ಯಕ್ರಮ/ಯೋಜನೆಗಳ ಮುಖ್ಯ ಉದ್ದೇಶ

## ಇಲಾಖೆಯ ಕಾರ್ಯಕ್ರಮ/ಯೋಜನೆಗಳ ಮುಖ್ಯ ಉದ್ದೇಶ

- ಗ್ರಾಮೀಣ ಜನತೆಗೆ ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರಿಗೆ ಗುಣಾತ್ಮಕ ಆರೋಗ್ಯ ಸೇವೆಯನ್ನು ನೀಡುವುದು.
- ಶಿಶು ಮರಣ ದರ ಮತ್ತು ತಾಯಂದಿರ ಮರಣ ದರವನ್ನು ಕಡಿಮೆಗೊಳಿಸುವುದು.
- ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು.
- ಒಟ್ಟೂ ಫಲವತ್ತತೆಯ ದರವನ್ನು ತಗ್ಗಿಸಿ ಜನಸಂಖ್ಯಾ ಸ್ಥಿರತೆಯನ್ನು ಸಾಧಿಸುವದು.

**ಅನುಷ್ಠಾನಗೊಳಿಸಿರುವ ಪ್ರಮುಖ ಯೋಜನೆಗಳು:–**

1) **ಜನನಿ ಸುರಕ್ಷಾ ಯೋಜನೆ:** ಹೆರಿಗೆಗಾಗಿ ನೀಡುವ ಆರ್ಥಿಕ ಸಹಾಯ.

2) **ಜನನಿ ಶಿಶು ಸುರಕ್ಷಾ ಕಾರ್ಯಕ್ರಮ: 09–09–2011 ರಿಂದ ಕರ್ನಾಟಕದಲ್ಲಿ ಜಾರಿಯಲ್ಲಿದೆ.** ಸರಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಎ.ಪಿ.ಎಲ್/ ಬಿ.ಪಿ.ಎಲ್. ಗರ್ಭಿಣಿಯರಿಗೆ/ಬಾಣಂತಿಯರಿಗೆ/ನವಜಾತ ಶಿಶುಗಳಿಗೆ/ಮಕ್ಕಳಿಗೆ ಸಂಪೂರ್ಣವಾದ ಉಚಿತ ಸೇವೆ.

3) **24/7 ಪ್ರಾಥಮಿಕ ಆರೋಗ್ಯ ಕೇಂದ್ರ:** ಗ್ರಾಮೀಣ ಪ್ರದೇಶದಲ್ಲಿ ಹೆರಿಗೆ ಸೇವೆಗಳನ್ನು ನಿರಂತರವಾಗಿ ಒದಗಿಸುವ ಉದ್ದೇಶದಿಂದ ಆಯ್ದ ಪ್ರಾ. ಆ. ಕೇಂದ್ರಗಳಲ್ಲಿ ವಾರದ 7 ದಿನಗಳಲ್ಲಿ ಗುಣಮಟ್ಟದ ಸೇವೆ ಒದಗಿಸಲು ಈ ಯೋಜನೆ ಜಾರಿಗೊಳಿಸಲಾಗಿದೆ.

4) **ಆರೋಗ್ಯ ಕವಚ: 108:** 01–11–2008 ರಿಂದ ಕರ್ನಾಟಕದಲ್ಲಿ ಅನುಷ್ಠಾನಗೊಂಡಿದೆ. ತುರ್ತು ಪರಿಸ್ಥಿತಿಯಲ್ಲಿ ಸ್ಥಿರ ದೂರವಾಣಿ ಅಥವಾ ಮೊಬೈಲ್ ಮೂಲಕ ಯಾವುದೇ ಕೋಡ್ ನಂಬರ ಬಳಸದೇ 108ಕ್ಕೆ ಕರೆ ಮಾಡಿದ್ದಲ್ಲಿ ತುರ್ತು ಸ್ಥಿತಿ ಇರುವ ಸ್ಥಳದಲ್ಲಿ ಅಂಬುಲೆನ್ಸ ಹಾಜರಾಗುವದು.

5) **ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ:** 1) ಎಲ್ಲಾ ಸರಕಾರಿ/ಅನುದಾನಿತ/ಅನುದಾನ ರಹಿತ ಶಾಲೆಗಳ 1 ರಿಂದ 10ನೇ ತರಗತಿಯ ಶಾಲಾ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಮಾಡಿ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಪ್ರಾ.ಆ.ಕೇಂದ್ರ ಮಟ್ಟದಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ತಾಲೂಕು/ಜಿಲ್ಲಾ ಆಸ್ಪತ್ರೆ/ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ಶಸ್ತ್ರ ಚಿಕಿತ್ಸೆ ಒದಗಿಸಲಾಗುವದು.

6) **ಹದಿಹರೆಯದವರ ಆರೋಗ್ಯ ಹಾಗೂ ಸ್ನೇಹಾ ಕ್ಲಿನಿಕ್:** ಹದಿಹರೆಯದವರ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ನೀಡುವುದು ಮತ್ತು ಆಪ್ತ ಸಮಾಲೋಚನೆ ಮಾಡುವುದು.

7) **ನವಜಾತ ಶಿಶುಗಳ ಆರೈಕೆಗೆ ವಿಶೇಷ ಸೇವೆಗಳು:** ನವಜಾತ ಶಿಶುಗಳ ಸಾಮಾನ್ಯ ಸಮಸ್ಯೆಗಳಾದ ಉಸಿರುಗಟ್ಟುವಿಕೆ ದೇಹದ ಉಷ್ಣತೆಯನ್ನು ಕಳೆದುಕೊಳ್ಳುವುದು, ಮುಂತಾದ ಸಮಸ್ಯೆಗಳ ನಿರ್ವಹಣೆಗೆ ರೇಡೆಯೆಂಟ್ ವಾರ್ಮರ್ ಆಯ್ದ ಆಸ್ಪತ್ರೆಗಳಿಗೆ ಪೂರೈಸಲಾಗಿದೆ.

8) **ಪಿ.ಪಿ.ಟಿ.ಸಿ.ಟಿ. ಕಾರ್ಯಕ್ರಮ:** ಎಲ್ಲಾ ಗರ್ಭಿಣಿಯರಿಗೆ ಮನವೊಲಿಸಿ ಎಚ್.ಐ.ವಿ. ಪರೀಕ್ಷೆ ನಡೆಸಿ ಸುರಕ್ಷಿತ ಹೆರಿಗೆ ಸೇವೆ ನೀಡಿ ತಾಯಿಯಿಂದ ಮಗುವಿಗೆ ಎಚ್.ಐ.ವಿ. ಸೋಂಕು ಹರಡದಂತೆ ತಡೆಗಟ್ಟಲು

ತಾಯಿಗೆ ಮಾತ್ರೆಗಳು ಹಾಗೂ ಹುಟ್ಟಿದ ಮಗುವಿಗೆ ನೆವರಪಿನ್ ದ್ರಾವಣವನ್ನು 72 ಗಂಟೆಗಳ ಒಳಗೆ ನೀಡುವ ವ್ಯವಸ್ಥೆಯನ್ನು ಹಾಗೂ ಹೆಚ್ಚಿನ ಚಿಕಿತ್ಸೆಯನ್ನು ರಾಜ್ಯಾದ್ಯಂತ ಜಾರಿಗೊಳಿಸಿದೆ.

9) **ತಾಯಿ ಮಕ್ಕಳ ಅನುಸರಣೆಗೆ ತಂತ್ರಜ್ಞಾನ ಬಳಕೆ (Mother And Child Tracking System) :** ಗರ್ಭಿಣಿಯನ್ನು ಶೀಘ್ರವಾಗಿ ದಾಖಲಿಸಿಕೊಂಡು ವಿಶಿಷ್ಟವಾದ ಸಂಖ್ಯೆಯುಳ್ಳ ತಾಯಿ ಕಾರ್ಡನ್ನು ನೀಡಿ ಕಾಲಕಾಲಕ್ಕೆ ತಾಯಿ ಮತ್ತು ಮಕ್ಕಳು ಪಡೆಯಬೇಕಾದ ಸೇವೆಯನ್ನು ಮೊಬೈಲ್ ಬಳಸಿ ಗರ್ಭಿಣಿಗೆ/ ಕುಟುಂಬ ವರ್ಗದವರಿಗೆ/ ಆರೋಗ್ಯ ಸೇವಾ ಕಾರ್ಯಕರ್ತರಿಗೆ ಎಸ್.ಎಂ.ಎಸ್. ಕಳುಹಿಸುವ ಮೂಲಕ ಅನುಸರಣೆ ಮಾಡುವ ವಿಶಿಷ್ಟ ತಂತ್ರಜ್ಞಾನ ಅಭಿವೃದ್ಧಿಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

10) **ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ:** ಜನಸಂಖ್ಯೆ ಸ್ಥಿರತೆ ಮತ್ತು ಅಭಿವೃದ್ಧಿಯನ್ನು ಉದ್ದೇಶವಾಗಿರಿಸಿಕೊಂಡು ಸಣ್ಣ ಕುಟುಂಬದ ಪರಿಕಲ್ಪನೆಯಲ್ಲಿ ಶಾಶ್ವತ ಸಂತಾನ ನಿಯಂತ್ರಣ ಶಸ್ತ್ರ ಚಿಕಿತ್ಸೆ. ಮಹಿಳೆಯರಿಗೆ ಟ್ಯೂಬೆಕ್ಟಮಿ / ಉದರದರ್ಶಕ ಪುರುಷರಿಗೆ ಎನ್.ಎಸ್.ವಿ ಕುಟುಂಬ ಯೋಜನೆಯ ಹಾಗೂ ತಾತ್ಕಾಲಿಕ ವಿಧಾನಗಳು: 1)ಐ.ಯು.ಸಿ.ಡಿ. 2)ಪಿ.ಪಿ.ಐ.ಯು.ಸಿ.ಡಿ 3) ಗರ್ಭ ನಿರೋಧಕ ಮಾತ್ರೆಗಳು 4) ತುರ್ತು ಗರ್ಭ ನಿರೋಧಕ ಮಾತ್ರೆಗಳು 5) ನಿರೋಧ: ಅರ್ಹ ದಂಪತಿಗಳಿಗೆ ಉಚಿತವಾಗಿ ಲಭ್ಯವಿದೆ.

11) **ರಾಷ್ಟ್ರೀಯ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ:** ತಾಯಿ ಮರಣ, ಶಿಶು ಮರಣ ಕಡಿಮೆಗೊಳಿಸಲು ಇರುವ ಕಾರ್ಯಕ್ರಮ.\ಗಳು

12) **ಜನನಿ ಸುರಕ್ಷಾ ವಾಹಿನಿ:** ತುರ್ತು ಹೆರಿಗೆ ಸೇವೆಗಾಗಿ ಮೀಸಲಿಟ್ಟ ಜನನಿ ಸುರಕ್ಷಾವಾಹಿನಿ ಅಂಬುಲೆನ್ಸ್.

13) **ವೈದ್ಯಕೀಯ ಗರ್ಭಪಾತ:** ಗರ್ಭಧರಿಸಿದ ಮಹಿಳೆಗೆ ಅವಶ್ಯಕತೆ ಇದ್ದಲ್ಲಿ, ಉಚಿತವಾಗಿ ವೈದ್ಯಕೀಯ ಗರ್ಭಪಾತ.

14) **ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆ ನಿಷೇಧ ಕಾಯಿದೆ:** ಸರಕಾರಿ/ಖಾಸಗಿ ವೈದ್ಯರ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

15) **ರಾಷ್ಟ್ರೀಯ ಸಾರ್ವತ್ರಿಕ ಲಸಿಕೆ ಕಾರ್ಯಕ್ರಮ:** ಶಿಶುಗಳಿಗೆ 9 ಮಾರಕ ಕಾಯಿಲೆಗಳ ವಿರುದ್ಧವಾಗಿ ಲಸಿಕೆಗಳನ್ನು ನೀಡಲಾಗುತ್ತಿದೆ.

16) **ಪಲ್ಸ ಪೋಲಿಯೋ ಕಾರ್ಯಕ್ರಮ:** ಪೊಲಿಯೋ ನಿರ್ಮೂಲನೆಗೆ ಇರುವ ಕಾರ್ಯಕ್ರಮ. ಅನುಷ್ಠಾನಗೊಳಿಸಲಾಗುತ್ತಿದೆ.

17) **ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ:**
1) ರಾತ್ರಿ ಕುರುಡು ತಡೆಯಲು ವಿಟಮಿನ ಎ 2) ಕಣ್ಣಿನ ಪೊರೆ ಹೊಂದಿರುವವರಿಗೆ ಉಚಿತ ಶಸ್ತ್ರ ಚಿಕಿತ್ಸೆ ಹಾಗೂ ಕನ್ನಡಕ ವಿತರಣೆ.

18) **ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ:** ರೋಗಿಗಳಿಗೆ ಉಚಿತ ಚಿಕಿತ್ಸೆ. ಉಚಿತವಾಗಿ ಕಾಲಿನ ರಕ್ಷಣೆಗಾಗಿ ಎಂ.ಸಿ.ಆರ್ ಚಪ್ಪಲಿಗಳನ್ನು ಹಾಗೂ ಕಣ್ಣಿನ ರಕ್ಷಣೆಗಾಗಿ ಕಪ್ಪು ಕನ್ನಡಕ ನೀಡಲಾಗುತ್ತಿದೆ.

19) **ರಾಷ್ಟ್ರೀಯ ಪರಿಷ್ಕೃತ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮ:** ಡಾಟ್ಸ ಕೇಂದ್ರಗಳ ಮೂಲಕ ಕ್ಷಯ ರೋಗಿಗಳಿಗೆ ಉಚಿತ ಚಿಕಿತ್ಸೆ.

20) **ರಾಷ್ಟ್ರೀಯ ಅಯೋಡಿನ್ ಕೊರತೆ ರೋಗಗಳ ನಿಯಂತ್ರಣ ಕಾರ್ಯಕ್ರಮ** 1) ಅಯೋಡಿನ್ ಯುಕ್ತ ಉಪ್ಪಿನ ಬಗ್ಗೆ ಜನ ಜಾಗೃತಿ.

21) **ರಾಷ್ಟ್ರೀಯ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮ:** ಅತಿಸಾರ ಭೇದಿಯಾದ ಮಕ್ಕಳಿಗೆ ಉಚಿತವಾಗಿ ಓ.ಆರ್.ಎಸ್. ಪೊಟ್ಟಣ–ವಿತರಣೆ.

22) **ರಾಷ್ಟ್ರೀಯ ತೀವ್ರ ಶ್ವಾಸಕೋಶ ಸೋಂಕು ರೋಗಗಳ ನಿಯಂತ್ರಣಾ ಕಾರ್ಯಕ್ರಮ:** ಉಪಕೇಂದ್ರ / ಸರಕಾರಿ ಆಸ್ಪತ್ರೆಗಳಲ್ಲಿ ಉಚಿತ ಶಸ್ತ್ರ ಚಿಕಿತ್ಸೆ.

23) **ರಾಷ್ಟ್ರೀಯ ಸುರಕ್ಷಿತ ಕುಡಿಯವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮ:** ಗ್ರಾ.ಪಂ./ಪುರಸಭೆ/ನಗರಸಭೆ/ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳು ವರದಿಯಾದಾಗ ನೀರಿನ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಿ ಫಲಿತಾಂಶದ ಮಾಹಿತಿ ಗಮನಕ್ಕೆ ತಂದು ಶುದ್ಧ ನೀರು ಸರಬರಾಜು ಮಾಡುವ ವ್ಯವಸ್ಥೆ.

24) **ರಾಷ್ಟ್ರೀಯ ಲೈಂಗಿಕ ಸಂಪರ್ಕ ರೋಗಗಳ/ಜನನಾಂಗ ಮಾರ್ಗಗಳ ಸೋಂಕು ನಿಯಂತ್ರಣಾ ಕಾರ್ಯಕ್ರಮ:** ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ.

25) **ರಾಷ್ಟ್ರೀಯ ಹೆಚ್.ಐ.ವಿ/ ಏಡ್ಸ ನಿಯಂತ್ರಣ ಕಾರ್ಯಕ್ರಮ:**
1) ಹೆಚ್.ಐ.ವಿ. ಸೋಂಕು ಹರಡುವುದನ್ನು ತಡೆಯುವುದಕ್ಕಾಗಿ ಎ.ಆರ್.ಟಿ.ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ.

26) **ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ:** ಮಾನಸಿಕ ಕಾಯಿಲೆಗಳಿಗೆ ಉಚಿತವಾಗಿ ಚಿಕಿತ್ಸೆ.

27) **ಕ್ಯಾನ್ಸರ್ ರೋಗ ನಿಯಂತ್ರಣ ಕಾರ್ಯಕ್ರಮ ಹಾಗೂ ಗರ್ಭಕೋಶ ಶಸ್ತ್ರಚಿಕಿತ್ಸೆ:** ಗರ್ಭಕೋಶದ ಎಲ್ಲಾ ತರಹದ ಕಾಯಿಲೆಗಳಿಗೆ ಉಚಿತವಾದ ಚಿಕಿತ್ಸೆ.

28) **ರಾಷ್ಟ್ರೀಯ ಕೀಟ ಜನ್ಯ ರೋಗಗಳ ನಿಯಂತ್ರಣ ಕಾರ್ಯಕ್ರಮ:** ಲಾರ್ವಾಗಳನ್ನು ನಾಶಪಡಿಸಲು ಕ್ರಮ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ.

29) **ಆಹಾರ ಸುರಕ್ಷತೆ ಹಾಗೂ ಕಲಬೆರಕೆ ನಿಷೇಧ ಕಾಯಿದೆ.:** ಆಹಾರ ನಿಗದಿತ ಗುಣಮಟ್ಟಕ್ಕಿಂತ ಕಡಿಮೆಯಾಗಿದ್ದರೆ/ ಕಲಬೆರಕೆ ಎಂದು ಧೃಡಪಟ್ಟಲ್ಲಿ ಕಾನೂನು ರೀತಿಯ ಕ್ರಮ.

30) **ಆಶಾ ಕಾರ್ಯಕ್ರಮ:** ಸಮುದಾಯ ಹಾಗೂ ಆರೋಗ್ಯ ಇಲಾಖೆಯ ಮಧ್ಯ ಸೇವೆ ಸಲ್ಲಿಸುವ ಆಶಾ 1000 ಜನಸಂಖ್ಯೆಗೆ ಒಬ್ಬರಂತೆ ಕಾರ್ಯಕರ್ತೆಯರ ಸೇವೆ ಇಲಾಖೆಯಲ್ಲಿ ಲಭ್ಯವಿದೆ.

31) **ಆರೋಗ್ಯ ಶಿಕ್ಷಣ ಕಾರ್ಯಕ್ರಮ:**
1) ಆರೋಗ್ಯ ಸೇವೆಗಳಿಗೆ ಬೇಡಿಕೆ ಹಾಗೂ ಜನರ ಆರೋಗ್ಯ ಸಂಬಂಧಿ ವರ್ತನಾ ಬದಲಾವಣೆಗೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಮಾಹಿತಿ ಶಿಕ್ಷಣ ಸಂವಹನವನ್ನು ಚುರುಕುಗೊಳಿಸಿದೆ.

32) **ನಗುಮಗು ವಾಹನ:** ಹೆರಿಗೆಯ ತರುವಾಯ ಬಾಣಂತಿ ಹಾಗೂ ನವಜಾತ ಶಿಶುವನ್ನು ಸುರಕ್ಷಿತವಾಗಿ ಮನೆಗೆ ಬಿಡಲು ಇರುವ ಯೋಜನೆ.

33) **ರಕ್ತ ಭಂಡಾರ ಘಟಕ:** ಆಕಸ್ಮಿಕ ಸಂದರ್ಭಗಳಲ್ಲಿ ರೋಗಿಗಳಿಗೆ ರಕ್ತದ ಅನುಕೂಲವಾಗಲು ಜಿಲ್ಲೆಯಲ್ಲಿ 5 ರಕ್ತ ಭಂಡಾರ ಘಟಕ ಕಾರ್ಯನಿರ್ವಹಿಸುತ್ತಿದೆ. ಪ್ರತಿ ತಾಲೂಕಿನಲ್ಲಿ ರಕ್ತ ಶೇಖರಣಾ ಕಾರ್ಯನಿರ್ವಹಿಸುತ್ತಿದೆ.

34) **ತಾಲೂಕಾ ಮಟ್ಟದ ಆಸ್ಪತ್ರೆಗಳು ಮೇಲ್ದರ್ಜೆಗೆ:** ಜಿಲ್ಲೆಯ ಎಲ್ಲಾ ತಾಲೂಕಾ ಮಟ್ಟದ ಆಸ್ಪತ್ರೆ 50 ಹಾಸಿಗೆಗಳಿಂದ ಕೂಡಿದ್ದು ಸಾರ್ವಜನಿಕರಿಗೆ ಹೆಚ್ಚಿನ ಆರೋಗ್ಯ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಸರಕಾರವು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಿ ತಜ್ಞ ವೈದ್ಯರ ಹೆಚ್ಚಿನ ಹುದ್ದೆಯನ್ನು ಸೃಷ್ಟಿಸಿದೆ.

35) **ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ :** ಪ್ರತಿ ತಿಂಗಳು 9 ನೇ ತಾರೀಖಿನಂದು, ಎಲ್ಲಾ ಗರ್ಭಿಣಿ ಮಹಿಳೆಯರಿಗೆ ವಿಶೇಷ ಆರೈಕೆ ಹಾಗೂ ವೈದ್ಯರಿಂದ ಹೆಚ್ಚುವರಿ ಸಲಹೆ, ಚಿಕಿತ್ಸೆ, ತಪಾಸಣೆ. ಗಂಡಾಂತರ, ತಪಾಸಣೆಗೊಳಗಾಗದ ಭಾಗಶಃ ತಪಾಸಣೆಗೊಂಡ ಗರ್ಭಿಣಿಯರನ್ನು ಗುರುತಿಸಿ ಸೇವೆ ನೀಡಲಾಗುವುದು.

36) **ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ:** ಶ್ರವಣದೋಷಕ್ಕಾಗಿ ತಪಾಸಣೆ ಉಚಿತ. ಶ್ರವಣಯಂತ್ರ ಅಳವಡಿಕೆ.

37) **ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ :** ನಗರ ಪ್ರದೇಶದ ಬಡವರ ಆರೋಗ್ಯ ಸ್ಥಿತಿ ಉತ್ತಮಪಡಿಸುವದು. ಜಿಲ್ಲೆಯ ಕಾರವಾರ ಶಿರಸಿ, ದಾಂಡೇಲಿ ನಗರಗಳಲ್ಲಿ ಯೋಜನೆ ಜಾರಿಯಲ್ಲಿದೆ.

38) **ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ವಿವಿಧ ಸಮಿತಿಗಳು:** 1. ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿ, 2. ಉಪಕೇಂದ್ರ ಸಲಹಾ ಸಮಿತಿ, 3. ಪ್ರಾ.ಆ.ಕೇಂದ್ರ/ ಸಮುದಾಯ ಆರೋಗ್ಯ ಕೇಂದ್ರ ರಕ್ಷಾ ಸಮಿತಿ, 4. ತಾಲೂಕಾ ಆಸ್ಪತ್ರೆ ರಕ್ಷಾ ಸಮಿತಿ, 5. ಜಿಲ್ಲಾ ಆಸ್ಪತ್ರೆ ರಕ್ಷಾ ಸಮಿತಿ ಸಮಿತಿಗಳಿಗೆ ಅನುದಾನ ನೀಡಿ ತುರ್ತು ಅವಶ್ಯಕತೆ ಪೂರೈಸಿಕೊಳ್ಳುವುದು. ಸಮುದಾಯದ ಮಾಲಿಕತ್ವ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ವಿಲೀನಗೊಳಿಸಿದೆ.

39) **ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ** 1. ಆಯುಷ್ಮಾನ್ ಭಾರತ ಆರೋಗ್ಯ ಕಾರ್ನಾಟಕ ಯೋಜನೆ ಬಿ. ಪಿ. ಎಲ್ ಕುಟುಂಬಗಳಿಗೆ 5 ಲಕ್ಷ ವರೆಗೆ ಉಚಿತ ಆರೋಗ್ಯ ಸೇವೆ ಎ. ಪಿ. ಎಲ್ ಕುಟುಂಬಗಳಿಗೆ 1.5 ಲಕ್ಷ ಉಚಿತ ಆರೋಗ್ಯ ಸೇವೆ.

## 2. 2018–19 ನೇ ಸಾಲಿಗೆ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆಯಾದ ಖರ್ಚಾದ ಹಾಗೂ ಶಿಲ್ಕು ಇರುವ ಅನುದಾನದ ವಿವರ.

| ಕ್ರಮ ಸಂ. | ವಿವಿಧ ಯೋಜನೆಗಳ ವಿವರ | 2018–19 ನೇ ಸಾಲಿನಲ್ಲಿ ಬಿಡುಗೆಯಾದ ಅನುದಾನ | 2018–19 ನೇ ಸಾಲಿನಲ್ಲಿ ಒಟ್ಟೂ ಖರ್ಚು | 2018–19 ನೇ ಸಾಲಿನಲ್ಲಿ ಶಿಲ್ಕು ಇರುವ ಅನುದಾನ | ಷರಾ |
|---|---|---|---|---|---|
| 1 | 2210–00–101–0–27 – p (ಪ್ರಾಥಮಿಕ ಆರೋಗ್ಯ ಕೇಂದ್ರಗಳು) | 841.030 | 837.030 | 04.000 | |
| 2 | 2210–00–101–0–28 – N (Taluka Level Genral Hospitals) | 667.740 | 642.740 | 25.000 | |
| 3 | 2210–00–101–0–32 – N (District Establishment) | 145.430 | 144.490 | 940.000 | |
| 4 | 2210–00–101–0–33–N (Local Fund Combined) | 51.430 | 50.150 | 01.280 | |
| 5 | 2210–00–101–0–46–p (ಸಂಚಾರಿ ಆರೋಗ್ಯ ಘಟಕ) | 8.000 | 7.970 | 00.030 | |
| 6 | 2210–00–102–0–31–N (National Anti Malaria) | 69.000 | 66.850 | 2.150 | |
| 7 | 2210–00–102–0–40–p (ಆಸ್ಪತ್ರೆ ಸಲಕರಣೆಗಳ ದುರಸ್ತಿ) | 10.000 | 10.000 | 00.000 | |
| 8 | 2210–00–103–0–26 – N (Primary Health Centres) | 1344.490 | 1328.400 | 16.090 | |
| 9 | 2210–00–103–0–30–N (ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ) | 632.000 | 602.060 | 29.940 | |
| 10 | 2210–00–103–0–42–N (Dental Units To Taluka) | 15.430 | 15.030 | 00.400 | |
| 11 | 2210–00–103–0–43–p (ತಾಲೂಕಾ ಮಟ್ಟದ ಸಾರ್ವಜನಿಕ ಆಸ್ಪತ್ರೆಗಳು) | 25.000 | 24.930 | 00.070 | |
| 12 | 2210–00–103–0–47–p (ರಕ್ತ ನಿಧಿ ಸ್ಥಾಪನೆ) | 12.000 | 12.000 | 00.000 | |
| 13 | 2210–03–103–0–45—p (ತಾಲೂಕಾ ಆಸ್ಪತ್ರೆಗಳಗೆ ಕ್ಷ–ಕಿರಣ ಸೌಲಭ್ಯಗಳು) | 14.000 | 13.800 | 00.200 | |
| 14 | 2210–00–101–0–62–p (ಪ್ರಾಥಮಿಕ ಆರೋಗ್ಯ ಘಟಕಗಳ ಬಲವರ್ಧನೆ) | 77.000 | 75.680 | 01.320 | |
| 15 | 2210–00–102–0–65–N (Telephone Charges) | 9.160 | 9.120 | 00.040 | |

| | | | | | |
|---|---|---|---|---|---|
| 16 | 2210-00-102-0-66-N (Water & Electricity) | 6.870 | 6.770 | 00.100 | |
| 17 | 2210-00-104-0-61-P (ನೂತನ ಉಪಕೇಂದ್ರಗಳ ಸ್ಥಾಪನೆ) | 330.720 | 328.200 | 02.520 | |
| 18 | 2210-00-104-0-63-N (Buildings) | 30.910 | 30.900 | 00.010 | |
| 19 | 2210-00-104-0-64-P (ಸಲಕರಣೆಗಳ ಸರಬರಜು) | 11.000 | 11.000 | 00.000 | |
| 20 | 2210-00-106-0-01-P (ಜಿಲ್ಲಾ ಕುಟುಂಬ ಕಲ್ಯಾಣ ವಿಭಾಗ) | 126.000 | 119.250 | 06.750 | |
| 21 | 2210-00-106-0-02 - P (ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗ್ರಾಮಾಂತರ ಕುಟುಂಬ ಕಲ್ಯಾಣ ಕೇಂದ್ರಗಳು) | 487.000 | 463.250 | 23.750 | |
| 22 | 2210-00-106-0-03 - P ಗ್ರಾಮಾಂತರ ಉಪ ಕೇಂದ್ರ (ಕುಟುಂಬ ಕಲ್ಯಾಣದಡಿಯಲ್ಲಿ ಪ್ರಾರಂಭವಾದುಗಳು) | 1662.750 | 1500.330 | 162.420 | |
| 23 | 2210-00-106-0-48-P (ರಾಜ್ಯ ಆರೋಗ್ಯ ಸಾರಿಗೆ ಸಂಸ್ಥೆ) | 133.400 | 130.970 | 02.430 | |
| 24 | 2210-00-104-0-53 -P (ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಔಷಧಿಗಳ ಪೂರೈಕೆ ಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮ) | 1.990 | 1.990 | 00.000 | |

## 4) ಇಲಾಖೆಗೆ ಸಂಬಂದಿಸಿದಂತೆ 2018-19 ನೇ ಸಾಲಿನಲ್ಲಿ ಹೊಸ ಯೋಜನೆಗಳು

1) **ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ :** ಪ್ರತಿ ತಿಂಗಳು 9 ನೇ ತಾರೀಖಿನಂದು, ಎಲ್ಲಾ ಗರ್ಭಿಣಿ ಮಹಿಳೆಯರಿಗೆ ವಿಶೇಷ ಆರೈಕೆ ಹಾಗೂ ವೈದ್ಯರಿಂದ ಹೆಚ್ಚುವರಿ ಸಲಹೆ, ಚಿಕಿತ್ಸೆ, ತಪಾಸಣೆ. ಗಂಡಾಂತರ, ತಪಾಸಣೆಗೊಳಗಾಗದ ಭಾಗಶಃ ತಪಾಸಣೆಗೊಂಡ ಗರ್ಭಿಣಿಯರನ್ನು ಗುರುತಿಸಿ ಸೇವೆ ನೀಡಲಾಗುವುದು.

2) **ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ:** ಶ್ರವಣದೋಷಕ್ಕಾಗಿ ತಪಾಸಣೆ ಉಚಿತ. ಶ್ರವಣಯಂತ್ರ ಅಳವಡಿಕೆ.

3) **ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ :** ನಗರ ಪ್ರದೇಶದ ಬಡವರ ಆರೋಗ್ಯ ಸ್ಥಿತಿ ಉತ್ತಮಪಡಿಸುವದು. ಜಿಲ್ಲೆಯ ಕಾರವಾರ, ಶಿರಸಿ, ದಾಂಡೇಲಿ ನಗರಗಳಲ್ಲಿ ಯೋಜನೆ ಜಾರಿಯಲ್ಲಿದೆ.

4) **ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ** 1. ಆಯುಷ್ಮಾನ್ ಭಾರತ ಆರೋಗ್ಯ ಕಾರ್ನಾಟಕ ಯೋಜನೆ ಬಿ. ಪಿ. ಎಲ್ ಕುಟುಂಬಗಳಿಗೆ 5 ಲಕ್ಷ ವರೆಗೆ ಉಚಿತ ಆರೋಗ್ಯ ಸೇವೆ ಎ. ಪಿ. ಎಲ್ ಕುಟುಂಬಗಳಿಗೆ 1.5 ಲಕ್ಷ ಉಚಿತ ಆರೋಗ್ಯ ಸೇವೆ.

*****

ಮಾಹಿತಿ ಮೂಲ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾರವಾರ

# ಮೀನುಗಾರಿಕೆ ಇಲಾಖೆ

**ಪರಿಚಯ :**

ಉತ್ತರ ಕನ್ನಡ ಜಿಲ್ಲೆಯ, ಕಾರವಾರ ತಾಲ್ಲೂಕಿನ ಮಾಜಾಳಿಯಿಂದ ಭಟ್ಕಳ ತಾಲ್ಲೂಕಿನ ಗೊರ್ಟೆಯವರೆಗೆ ಸುಮಾರು 162 ಕಿ.ಮೀ. ಉದ್ದದ ಕರಾವಳಿ ಪ್ರದೇಶದ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಹಾಗೂ ಶಿರಸಿ, ಯಲ್ಲಾಪುರ, ಹಳಿಯಾಳ, ಮುಂಡಗೋಡ, ಸಿದ್ದಾಪುರ ಮತ್ತು ಸುಪಾ (ಜೊಯಿಡಾ) ಈ ಆರು ಒಳನಾಡು ತಾಲ್ಲೂಕುಗಳಲ್ಲಿ ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ.

**ಉದ್ದೇಶ:**

ಉತ್ತರ ಕನ್ನಡ ಜಿಲ್ಲೆಯಲ್ಲಿ ಪೂರಕ ಸವಲತ್ತು ಒದಗಿಸುವುದು, ಮೀನುಗಾರಿಕೆ ಬಗ್ಗೆ ಮೀನುಗಾರಿಕೆ ತಾಂತ್ರಿಕ ಮಾರ್ಗದರ್ಶನ ಸಾಮೂಹಿಕ ಆರ್ಥಿಕ ಸೌಲಭ್ಯ ನೀಡುವುದು, ಒಳನಾಡು ಮೀನುಗಾರಿಕೆ ಅಭಿವೃದ್ಧಿ, ಮೀನುಗಾರಿಕೆ ಉದ್ಯಮಕ್ಕೆ ಬೇಕಾಗುವ ಪೂರಕ ಸವಲತ್ತುಗಳಾದ ತಂಗುದಾಣ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿಕೊಡುವುದು, ಮೀನುಗಾರಿಕೆ ದೋಣಿಗಳ ನೊಂದಣಿ ಮಾಡುವುದು, ಜಿಲ್ಲೆಯ ಮೀನುಗಾರಿಕೆ ಬಂದರಿನಲ್ಲಿ ವಾರ್ಷಿಕ ಶುಲ್ಕ ವಸೂಲಿ ಹಾಗೂ ರಾಜ್ಯವಲಯ/ಕೇಂದ್ರವಲಯ ಯೋಜನೆಗಳ ಅನುಷ್ಠಾನ ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆ, ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆಯನ್ವಯ ಪರಿಹಾರ ನೀಡುವುದು. ನಿಷೇಧಿತ ಅನುಚಿತ ಮೀನುಗಾರಿಕೆಗಳನ್ನು ನಿರ್ಬಂಧಿಸುವ ಮೂಲಕ ಅಭಿವೃದ್ಧಿ ಸಾಧಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ.

**ಸಂಘಟನಾತ್ಮಕ ವ್ಯವಸ್ಥೆ:**

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1) ಕಾರವಾರ ಹಾಗೂ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1) (ದೋಣಿ ಮತ್ತು ಸಲಕರಣೆ) ಕಾರವಾರ ಇವರು ಜಿಲ್ಲಾ ಪಂಚಾಯತ್ ಆಡಳಿತಕೊಳಪಟ್ಟಿದ್ದು, ಇಲಾಖಾ ಯೋಜನೆಗಳ ಅನುಷ್ಠಾನಾದಿಕಾರಿಗಳಾಗಿರುತ್ತಾರೆ. ಇವರುಗಳ ಹೊರತಾಗಿ ಪ್ರತಿ ತಾಲ್ಲೂಕಿಗೆ (ಜೊಯಿಡಾ ಮತ್ತು ಸಿದ್ದಾಪುರ ತಾಲ್ಲೂಕುಗಳ ಹೊರತುಪಡಿಸಿ) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಇವರುಗಳು ಅಧೀನ ಸಿಬ್ಬಂದಿಗಳೊಂದಿಗೆ ತಾಲ್ಲೂಕು ಅನುಷ್ಠಾನಾದಿಕಾರಿಗಳಾಗಿರುತ್ತಾರೆ. ಹಾಗೂ ಕಾರವಾರ ಕಡಲ ತೀರದಲ್ಲಿ ಪ್ರವಾಸಿಗರ ಆಕರ್ಷಣಿಯ ಕೇಂದ್ರ ಆಗಿರುವ ಸಾಗರ ಮತ್ಸ್ಯಾಲಯವನ್ನು ಸರಿಪಡಿಸಿ ಪ್ರವಾಸಿಗರಿಗೆ ಹೆಚ್ಚಿನ ಆಕರ್ಷಣಿಯ ಕೇಂದ್ರವನ್ನಾಗಿ ಮಾಡಲಾಗಿದೆ.

## ಕಾರ್ಯಕ್ರಮಗಳು

**2018-19ನೇ ಸಾಲಿನ ಜಿಲ್ಲಾ ವಲಯ ಯೋಜನೆಯಡಿ ಸಾಧಿಸಿದ ಪ್ರಗತಿ ವಿವರಗಳು**

| ಅ. ನಂ. | ಯೋಜನಾ ಕಾರ್ಯಕ್ರಮಗಳು (1) ಜಿಲ್ಲಾ ವಲಯ ಯೋಜನೆಗಳು | ಬಿಡುಗಡೆ ಆದ ಅನುದಾನ | ಆರ್ಥಿಕ (ಲಕ್ಷ ರೂ. ಗಳಲ್ಲಿ) | | ಭೌತಿಕ | | ಷರಾ |
|---|---|---|---|---|---|---|---|
| | | | ಗುರಿ | ಸಾಧನೆ | ಗುರಿ | ಸಾಧನೆ | |
| 1. | ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ | 18.00 | 18.00 | 18.00 | 12 | 12 | |
| 2. | ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ | 23.00 | 23.00 | 19.29 | – | 05 | |
| | ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ (ವಿ.ಘ.ಯೋ.) | 1.00 | 1.00 | 1.00 | 10 | 10 | |
| | ಮೀನು ಕೃಷಿಕೊಳ ನಿರ್ಮಾಣಕ್ಕೆ ಸಹಾಯ (ಗಿ.ಉ.ಯೋ.) | 1.00 | 1.00 | 1.00 | 01 | 01 | |
| 3. | ಪ್ರದರ್ಶನ ಮತ್ತು ತರಬೇತಿ | 3.00 | 3.00 | 2.92 | 14 | 08 | |
| 4. | ಮೀನು ಮಾರುಕಟ್ಟೆ & ಮತ್ಸ್ಯವಾಹಿನಿಗೆ ಸಹಾಯ | 10.00 | 10.00 | 9.70 | 124 | 70 | |

# ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು

## 1. ಒಳನಾಡು ಮೀನುಗಾರಿಕೆ :

### ಉತ್ತರಕನ್ನಡ ಜಿಲ್ಲೆಯ ಜಲಸಂಪನ್ಮೂಲಗಳ ವಿವರ

| ಕ್ರ.ಸಂ. | ಜಲಸಂಪನ್ಮೂಲಗಳ ಹೆಸರು | ಸಂಖ್ಯೆ | ಜಲವಿಸ್ತೀರ್ಣ (ಹೆಕ್ಟೇರಗಳಲ್ಲಿ) |
|---|---|---|---|
| 1 | ಕೆರೆಗಳು | 86 | 1,133.39 |
| 2 | ಜಲಾಶಯಗಳು | 8 | 23,382.00 |
| 3 | ನದಿಭಾಗಗಳು | 14 | 261 ಕಿ.ಮೀ. |
| | | **108** | **24,776.39** |

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ ಒಳನಾಡಿನಲ್ಲಿ 108 ಜಲಸಂಪನ್ಮೂಲಗಳಿದ್ದು ಇದರಲ್ಲಿ 79 ಕೆರೆಗಳು 3 ನದಿಭಾಗಗಳು ಮತ್ತು 1 ಜಲಾಶಯವನ್ನು ವಿಲೇವಾರಿ ಮಾಡಿದೆ. ಇದರಲ್ಲಿ 61.50 ಲಕ್ಷ ಮೀನುಮರಿಗಳನ್ನು ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗಿದೆ. ಪ್ರಸ್ತುತ ಹೊರಗಿನ ಜಿಲ್ಲೆಗಳಿಂದ ಮೀನುಮರಿಗಳನ್ನು ತಂದು ಕೆರೆಗಳ ಹೊಂದಿರುವ ಕೃಷಿಕ ರೈತರಿಗೆ ಬೇಡಿಕೆಯ ಅನುಗುಣವಾಗಿ ಸರಬರಾಜು ಮಾಡಲಾಗುತ್ತಿದೆ. ಹಾಗೂ ಅವರನ್ನು ಮೀನುಕೃಷಿ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ.

ಮತ್ಸ್ಯಪಾಲನೆಗೆ ಅಳವಡಿಸಿದ ಖಾಸಗಿ ಕರೆಗಳು **12.00 ಹೆಕ್ಟರ್** ಗುರಿ ಇದ್ದು **12.53 ಹೆಕ್ಟೆರ್** ಅಭಿವೃದ್ಧಿಗೊಳಿಸಲಾಗಿದೆ. ಖಾಸಗಿ ಕೆರೆಗಳಲ್ಲಿ ಮೀನುಮರಿ ಬಿತ್ತನೆ ಗುರಿ **3,25,000** ಇದ್ದು ಅದರಲ್ಲಿ **3,84000** ಮೀನುಮರಿ ಬಿತ್ತನೆ ಮಾಡಿ ಸಾಧನೆ ಮಾಡಲಾಗಿದೆ. ಪ್ರಸ್ತುತ ವರ್ಷದಲ್ಲಿ ಹೆಚ್ಚಿನ ಕೆರೆಗಳಿಗೆ ಸಾಕಷ್ಟು ನೀರು ಬಂದಿರುವುದಿಲ್ಲ. ಆದಾಗ್ಯೂ ಮೀನುಮರಿ ಬಿತ್ತನೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದೆ.

## 2. ಕರಾವಳಿ ಮೀನುಗಾರಿಕೆ :

ಕಡಲ ಮೀನು ಉತ್ಪನ್ನ ಗುರಿ **102500** ಮೆಟ್ರಿಕ್ ಟನ್ ನಿಗದಿಪಡಿಸಲಾಗಿತ್ತು. ಸಾಧನೆ **122271.19** ಮೆಟ್ರಿಕ್ ಟನ್ ಆಗಿರುತ್ತದೆ. ಶೇ. 100ಕ್ಕೂ ಅಧಿಕ ಸಾಧನೆ ಮಾಡಲಾಗಿದೆ. ಮತ್ತು ಒಳನಾಡು ಮೀನು ಉತ್ಪಾದನೆಯ ಗುರಿ **1000** ಮೆಟ್ರಿಕ್ ಟನ್ ನಿಗದಿಪಡಿಸಲಾಗಿದ್ದು ಸಾಧನೆ **587.14** ಮೆಟ್ರಿಕ್ ಟನ್ ಆಗಿರುತ್ತದೆ. ಹೆಚ್ಚಿನ ಕೆರೆ ಹೊಂದಿದ ಮೀನು ಉತ್ಪಾದನೆ ತಾಲ್ಲೂಕುಗಳಾದ ಹಳಿಯಾಳ ಮತ್ತು ಮುಂಡಗೋಡ ತಾಲ್ಲೂಕುಗಳು ಬರಪಿಡಿತ ತಾಲ್ಲೂಕುಗಳಾದ್ದರಿಂದ ಮೀನು ಹಿಡುವಳಿಗಳಲ್ಲಿ ಹೆಚ್ಚಿನ ಪ್ರಗತಿಯಾಗಿರುವುದಿಲ್ಲ.

# ರಾಜ್ಯ ವಲಯ ಯೋಜನೆಗಳು

**1) ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ:**

ಈ ಯೋಜನೆಯಡಿ 15 ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ನೀಡಲು ರೂ. 1.50 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಇದರಡಿ ಸಾಮಾನ್ಯ ವರ್ಗ 15 ಫಲಾನುಭವಿಗಳಿಗೆ ತಲಾ ರೂ. 0.10 ಲಕ್ಷದಂತೆ ಮೀನು ಹಿಡಿಯುವ ಬಲೆಗಳ ಖರೀದಿಗಾಗಿ ಒಟ್ಟು ರೂ. **1.50** ಲಕ್ಷ ಸಹಾಯಧನ ನೀಡಲಾಗಿದೆ.

**2) ಮೀನುಗಾರಿಕೆ ಫೈಬರ್‌ಗ್ಲಾಸ್ ಕೊರಾಕಲ್ ವಿತರಣೆ: (ನದಿ ಜಲಾಶಯಗಳಲ್ಲಿ ಮೀನು ಹಿಡುವಳಿ ಮಾಡಲು ಅಗತ್ಯವಾದ ಹರಿಗೋಲು ವಿತರಣೆ)**

ಈ ಯೋಜನೆಯಡಿ ಭೌತಿಕ 15 ಜನ ಫಲಾನುಭವಿಗಳಿಗೆ ಆರ್ಥಿಕ ರೂ. 1.50 ಲಕ್ಷಗಳ ಸಹಾಯಧನವನ್ನು ಹರಿಗೋಲು ಖರೀಸಿದಕ್ಕಾಗಿ ನೀಡಲಾಗಿದೆ.

**3) ಆರ.ಕೆ.ವಿ.ವೈ ಯೋಜನೆ:**

**(1) ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ (ಎಸ್.ಸಿ.ಪಿ.):** ಯೋಜನೆಯಡಿ 14 ಫಲಾನುಭವಿಗಳಿಗೆ ರೂ. 1.40 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. 14 ಫಲಾನುಭವಿಗಳಿಗೆ ತಲಾ ರೂ. 0.10 ಲಕ್ಷದಂತೆ ಮೀನುಗಾರಿಕೆ ಸಲಕರಣೆ ಕಿಟ್ಟು ಬಲೆ ಖರೀದಿಗಾಗಿ ರೂ. 1.40 ಲಕ್ಷ ಸಹಾಯಧನ ನೀಡಲಾಗಿದೆ.

**(2) ಫೈಬರ್ ಗ್ಲಾಸ್ ಕೊರಾಕಲ್ ವಿತರಣೆ (ಎಸ್.ಸಿ.ಪಿ.):** ಯೋಜನೆಯಡಿ 14 ಫಲಾನುಭವಿಗಳಿಗೆ ರೂ. 1.40 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಇದರಡಿ 14 ಫಲಾನುಭವಿಗಳಿಗೆ ತಲಾ ರೂ. 0.10 ಲಕ್ಷದಂತೆ ರೂ. 1.40 ಲಕ್ಷ ಸಹಾಯಧನದಲ್ಲಿ ಫೈಬರ್ ಗ್ಲಾಸ್ ಕೊರಾಕಲ್ ವಿತರಿಸಲಾಗಿದೆ.

**(3) ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ (ಟಿ.ಎಸ್.ಪಿ.):** ಯೋಜನೆಯಡಿ 06 ಫಲಾನುಭವಿಗಳಿಗೆ ರೂ. 0.60 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. 06 ಫಲಾನುಭವಿಗಳಿಗೆ ತಲಾ ರೂ. 0.10 ಲಕ್ಷದಂತೆ ಮೀನುಗಾರಿಕೆ ಸಲಕರಣೆ ಕಿಟ್ಟು ಬಲೆ ಖರೀದಿಗಾಗಿ ರೂ. 0.60 ಲಕ್ಷ ಸಹಾಯಧನ ನೀಡಲಾಗಿದೆ.

**(4) ಫೈಬರ್ ಗ್ಲಾಸ್ ಕೊರಾಕಲ್ ವಿತರಣೆ (ಟಿ.ಎಸ್.ಪಿ.):** ಯೋಜನೆಯಡಿ 06 ಫಲಾನುಭವಿಗಳಿಗೆ ರೂ. 0.60 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಇದರಡಿ 06 ಫಲಾನುಭವಿಗಳಿಗೆ ತಲಾ ರೂ. 0.10 ಲಕ್ಷದಂತೆ ರೂ. 0.60 ಲಕ್ಷ ಸಹಾಯಧನದಲ್ಲಿ ಫೈಬರ್ ಗ್ಲಾಸ್ ಕೊರಾಕಲ್ ವಿತರಿಸಲಾಗಿದೆ.

**(5)** ಜಿಲ್ಲೆಯ 9 ತಾಲೂಕುಗಳ ಪೈಕಿ ಎರಡು ತಾಲೂಕುಗಳಲ್ಲಿ 100 ಮೀನು ಕೃಷಿಕರಿಗೆ ಮೀನು ಕೃಷಿಕರ ದಿನಾಚರಣೆ ಮತ್ತು ಮೀನುಗಾರಿಕೆ ಕ್ಷೇತ್ರೋತ್ಸವವನ್ನು ಏರ್ಪಡಿಸಿ ಮೀನುಗಾರಿಕೆ ಮತ್ತು ಮೀನು ಕೃಷಿ ಬಗ್ಗೆ ಮಾಹಿತಿ ನೀಡಲಾಗಿದೆ. ಇದಕ್ಕಾಗಿ ರೂ. 0.40 ಲಕ್ಷ ವೆಚ್ಚವಾಗಿರುತ್ತದೆ.

**4) ವಿಶೇಷ ಘಟಕ ಯೋಜನೆ:–**

ಪರಿಶಿಷ್ಟ ಜಾತಿಯ ಮೀನುಗಾರರಿಗೆ ಕಿಟ್ಟು ಮತ್ತು ಹರಿಗೋಲು ವಿತರಣೆ ಸಹಾಯ ಈ ಯೋಜನೆಯಡಿ ಭೌತಿಕ 05 ಜನ ಫಲಾನುಭವಿಗಳಿಗೆ ಮೀನು ಹಿಡಿಯುವ ಬಲೆ ಮತ್ತು ಹರಿಗೋಲು ಖರೀದಿಗೆ ಆರ್ಥಿಕ ರೂ. 1.00 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.

**5) ಮೀನುಗಾರಿಕೆ ಸಹಕಾರಿ ಸಂಘಗಳು:**

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆಗೆ ಅಭಿವೃದ್ದಿಗೆ ಸಂಬಂಧಿಸಿಂತೆ 1 ಜಿಲ್ಲಾಮಟ್ಟದ ಪೆಡರೇಷನ ಸೇರಿದಂತೆ 43 ಮೀನುಗಾರಿಕೆ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದೆ. ಈ ಸಂಘಗಳ ಮೂಲಕ ಮೀನುಗಾರರ ಸರ್ವತೋಮುಖ ಅಭಿವೃಧ್ಧಿಗೆ ಮೀನುಗಾರರಿಗ ಡಿಸೇಲ ವಿತರಣೆ, ಮತ್ಸ್ಯಾಶ್ರಯ ಕಾಮಗಾರಿಗಳ ನಿರ್ವಹಣೆ ಯೋಜನೆಗಳು ಅನುಷ್ಠಾನಕ್ಕೆ ಫಲಾನುಭವಿಗಳ ಆಯ್ಕೆ, ಕೇಂದ್ರ ಪುರಷ್ಕೃತ ಉಳಿತಾಯ ಯೋಜನೆ ಮುಂತಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು. ಈ ಸಂಘಗಳು ನಿರಂತರವಾಗಿ ಇಲಾಖೆಯ ಸಂಪರ್ಕದಲ್ಲಿದ್ದು, ಜಿಲ್ಲೆಯ ಮೀನುಗಾರರ ಅಭಿವೃದ್ದಿಗೆ ಸಹಕಾರವಾಗುತ್ತಿದೆ. ಸ್ವಂತ ಜಾಗ ಹೊಂದಿರುವ ಮೀನುಗಾರಿಕೆ ಸಹಕಾರ ಸಂಘ ನಿ,. ಅಮದಳ್ಳಿ ಅಳ್ವೆಕೋಡಿ ಮತ್ತು ಬಿಳಕೆಗಳಿಗೆ ಕಛೇರಿ ಕಟ್ಟಡ ಕಟ್ಟಿಕೊಳ್ಳಲು ಅನುಮತಿ ನೀಡಿ ಈವರೆಗೆ ರೂ. 10.00 ಲಕ್ಷಗಳನ್ನು ನೀಡಲಾಗಿದ್ದು 2019–20ನೇ ಸಾಲಿನಲ್ಲಿ 11.00 ಲಕ್ಷಗಳನ್ನು ನೀಡಲು ಕ್ರಮವಹಿಸಲಾಗಿದೆ.

**6) ಮತ್ಸ್ಯಾಶ್ರಯ ಯೋಜನೆ:**

2018–19ನೇ ಸಾಲಿಗೆ ಹೊಸದಾಗಿ ಮೀನುಗಾರರಿಗೆ ಮನೆಕಟ್ಟಿಕೊಳ್ಳಲು ಗುರಿ ನೀಡಿರುವದಿಲ್ಲ. ಆದರೆ ಹಿಂದಿನ ವರ್ಷಗಳಲ್ಲಿ ನೀಡಲಾದ ಗುರಿಗಳನ್ನು ಪೂರ್ತಿಗೊಳಿಸಲು ಪ್ರಯತ್ನಿಸಿ ಹೆಚ್ಚಿನ ಮನೆಗಳನ್ನು ಪೂರ್ಣಗೊಳಿಸಿ ಹಣವನ್ನು ಬಿಡುಗಡೆ ಮಾಡಲಾಗಿದೆ.

**7) ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆ:**

ಈ ಯೋಜನೆಯಡಿ 2018–19ನೇ ಸಾಲಿನಲ್ಲಿ ಬಲೆ ಹಾನಿ, ದೋಣಿಗಳಿಗೆ ಆದ ಹಾನಿ, ಅನಾರೋಗ್ಯ ಮತ್ತು ಮೀನು ಹಿಡಿಯುವಾಗ ಮೃತರಾದಂತೆ ಸೇರಿ 20 ಮೀನುಗಾರರ ಕುಟುಂಬಗಳಿಗೆ ರೂ. 42.175/– ಲಕ್ಷಗಳನ್ನು ವಿತರಿಸಲಾಗಿದೆ.

**8) ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆ:**

ಈ ಯೋಜನೆಯಡಿ 2018–19ನೇ ಸಾಲಿನಲ್ಲಿ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವಾಗ ಆಕಸ್ಮಿಕ ಅವಘಡಗಳಿಗೆ ಸಿಕ್ಕಿ ಮೃತರಾದ 14 ಮೀನುಗಾರರ ಕುಟುಂಬಗಳಿಗೆ ರೂ. 28.00 ಲಕ್ಷ ವಿಮಾ ಮೊತ್ತವನ್ನು ವಿತರಿಸಲು ಪ್ರಸ್ತಾವನೆ ಸಲ್ಲಿಸಿದ್ದು ಪರಿಶೀಲನೆಯಲ್ಲಿರುತ್ತದೆ.

**9) ಡಿಸೇಲ್ ಸಹಾಯಧನ:**

ಜಿಲ್ಲೆಯಲ್ಲಿ ಕಡಲಿನಲ್ಲಿ ಯಾಂತ್ರೀಕೃತ ಬೋಟುಗಳ ಮೂಲಕ ಮೀನುಗಾರಿಕೆ ಮಾಡುವ 800 ಕ್ಕೂ ಹೆಚ್ಚು ಬೋಟುಗಳಿಗೆ ಡಿಸೇಲ್ ಖರೀದಿಗೆ ರಾಜ್ಯ ಮಾರಾಟಕರ ಪಾವತಿಗಾಗಿ 11.36 ಕೋಟಿಗಳಿಗೂ ಅಧಿಕ ಸಹಾಯಧನ ವಿತರಿಸಲಾಗಿದೆ.

**10) ಕಾಡ್ ಎಂಡ್ ಬಲೆಗಳ ಉಚಿತ ವಿತರಣೆ (ಹೊಸ ಯೋಜನೆ):**

ನೊಂದಾಯಿತ ಟ್ರಾಲ್ ಬೋಟ್ ಹೊಂದಿದ ನಿಯಮಾನುಸಾರ ಅರ್ಜಿ ಸಲ್ಲಿಸಿದ 300 ಮೀನುಗಾರರಿಗೆ 35 ಎಂ.ಎಂ. ಕಣ್ಣಿನ ಮೂರು ಬಲೆಗಳನ್ನು ರೂ. 10,000/– ಘಟಕ ವೆಚ್ಚದಲ್ಲಿ ವಿತರಿಸಲಾಗಿದೆ. ಇದಕ್ಕಾಗಿ ರೂ. 30.00 ಲಕ್ಷಗಳನ್ನು ವಿನಿಯೋಗಿಸಲಾಗಿದ್ದು ಸಣ್ಣ ಮೀನುಗಳನ್ನು ಹಿಡಿಯುವದನ್ನು ತಡೆಯುವದು ಇದರ ಉದ್ದೇಶವಾಗಿರುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಮೀನಿನ ಸಂತತಿಯನ್ನು ಉಳಿಸುವದರೊಂದಿಗೆ ನಿರಂತರ ಮೀನುಗಾರಿಕೆಗೆ ಅನುಕೂಲವಾಗಲಿದೆ. ಅಲ್ಲದೆ ಮುಂದಿನ ದಿನಗಳಲ್ಲಿ ಹೆಚ್ಚಿನ ಮೀನು ಇಳುವರಿಯನ್ನು ಸಹ ನಿರೀಕ್ಷಿಸಲಾಗಿದೆ.

**ಆಡಳಿತ :**

## ಉತ್ತರ ಕನ್ನಡ ಜಿಲ್ಲಾ ಪಂಚಾಯತ ಅಡಿಯಲ್ಲಿ ಬರುವ ಮೀನುಗಾರಿಕೆ ಕಛೇರಿಯ ಅಧಿಕಾರಿ/ಸಿಬ್ಬಂದಿಗಳ ವಿವರ 2018-19ಕ್ಕೆ ಸಂಬಂಧಿಸಿದಂತೆ

| ಅ. ನಂ. | ಹುದ್ದೆಯ ವರ್ಗ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆ |
|---|---|---|---|---|
| | 2405-00-101-ನಿರ್ದೇಶನ ಮತ್ತು ಆಡಳಿತ-0-26 ವಿಭಾಗೀಯ ಸಿಬ್ಬಂದಿ | | | |
| 1. | ಜಿಲ್ಲಾ ಮಟ್ಟದ ಅಧಿಕಾರಿಗಳು "ಬಿ" ವರ್ಗದಲ್ಲಿ | 03 | 02 | 01 |
| 2. | ತಾಲೂಕಾ ಮಟ್ಟದ ಅಧಿಕಾರಿಗಳು "ಬಿ" ವರ್ಗದಲ್ಲಿ | 11 | 07 | 04 |
| 3. | ಸಿಬ್ಬಂದಿಗಳು "ಸಿ" ವರ್ಗದಲ್ಲಿ | 47 | 18 | 29 |
| 4. | ಸಿಬ್ಬಂದಿಗಳು "ಡಿ" ವರ್ಗದಲ್ಲಿ | 16 | 03 | 13 |
| | | **77** | **30** | **47** |

## 2018-19 ನೇ ಸಾಲಿನ ಅನುದಾನ ವಿವರ

| ಅ. ನಂ. | ಲೆಕ್ಕ ಶೀರ್ಷಿಕೆ | ಸಾಧನೆ (ರೂ.ಗಳಲ್ಲಿ) |
|---|---|---|
| | **0405-ಮೀನುಗಾರಿಕೆ** | |
| 1. | 011 ಜಲಸಂಪನ್ಮೂಲ ವಿಲೇವಾರಿ | 7,32,347.00 |
| 2. | 02 ಮೀನುಮರಿ ಮಾರಾಟ | 69,520.00 |
| 3. | 04 ಇತರೆ ಬಾಬ್ತುಗಳು | 79,994.00 |
| 4. | ದೋಣಿಗಳ ಪರವಾನಿಗೆ | 21,64,950.00 |
| 5. | ಜಲಾಶಯ ಪರವಾನಿಗೆ<br>ನದಿಗಳ ಪರವಾನಿಗೆ | 83,000.00 |
| | **ಒಟ್ಟೂ** | **31,29,811.00** |

**ಸಾಮಾನ್ಯ:**

ಜಿಲ್ಲೆಯಲ್ಲಿ ಹೆಚ್ಚಿನ ಸಿಬ್ಬಂದಿಗಳ ಹುದ್ದೆ ಖಾಲಿ ಇದ್ದಾಗ್ಯೂ 2018-19ನೇ ಸಾಲಿನಲ್ಲಿ ಸರ್ಕಾರದಿಂದ ದೊರೆತ ಎಲ್ಲಾ ಅನುದಾನಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮೀನುಗಾರರು ಮತ್ತು ಜಿಲ್ಲಾಡಳಿತ ಇಲಾಖೆಯ ಮೇಲಾಧಿಕಾರಿಗಳ ಸಹಕಾರದಿಂದ ನಿಷೇಧಿತ ಅನುಚಿತ ಮೀನುಗಾರಿಕೆಯನ್ನು ನಿರ್ಬಂಧಿಸಿ ಮೀನುಗಾರಿಕೆ ಅಭಿವೃದ್ಧಿಗೆ ಶ್ರಮಿಸಲಾಗಿದೆ. ಇದಕ್ಕಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

*****

ಮಾಹಿತಿ ಮೂಲ : ಜಿಲ್ಲಾ ಮೀನುಗಾರಿಕೆ ಇಲಾಖೆ, ಕಾರವಾರ

# ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ

**ಪರಿಚಯ**

ಇಲಾಖೆಯ ವಿವಿಧ ರೀತಿಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದು, ಜಾನುವಾರು ಅಭಿವೃದ್ದಿ, ಮೇವು ಅಭಿವೃದ್ದಿ, ವಿಸ್ತರಣಾ ಸೇವೆಗಳು ಮತ್ತು ತರಬೇತಿ, ಕಕ್ಕುಟ ಅಭಿವೃದ್ದಿ, ಮೊಲ ಸಾಕಾಣಿಕಾ ಅಭಿವೃದ್ದಿ, ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನಗೊಳಿಸುವ ಕಾರ್ಯ ಹಮ್ಮಿಕೊಂಡಿದೆ. ಜಾನುವಾರು ಸಂಪತ್ತಿನ ಆರೋಗ್ಯ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತಿದೆ. ಪ್ರಮುಖ ಪ್ರಾಣಿಜನ್ಯ ಉತ್ಪನ್ನಗಳಾದ ಹಾಲು, ಮೊಟ್ಟೆ, ಮಾಂಸ, ಉಣ್ಣೆ ಮತ್ತೀತ್ತರ ಉತ್ಪನ್ನಗಳ ಪ್ರಮಾಣವನ್ನು ಅಂದಾಜು ಮಾಡುವುದಕ್ಕಾಗಿ ವರ್ಷ ಪೂರ್ತಿ ಸಮಗ್ರ ಮಾದರೀ ಸಮೀಕ್ಷೆಯನ್ನು ನಡೆಸುವುದು. ಈ ಎಲ್ಲಾ ಚಟುವಟಿಕೆಗಳ ಅಂತಿಮ ಗುರಿ ಜಾನುವಾರು ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಮತ್ತು ಕುಕ್ಕುಟ ಉತ್ಪನ್ನಗಳಾದ ಮೊಟ್ಟೆ ಮತ್ತು ಕೋಳಿ ಮಾಂಸವನ್ನು ಹೆಚ್ಚಿಸುವುದಾಗಿರುತ್ತದೆ. ಜಿಲ್ಲೆಯ ಗ್ರಾಮೀಣ ಆರ್ಥಿಕ ಅಭಿವೃದ್ದಿಯಲ್ಲಿ ಜಾನುವಾರು ಮತ್ತು ಕುಕ್ಕುಟಗಳು ಮಹತ್ವದ ಪಾತ್ರ ವಹಿಸುತ್ತಿವೆ

1) **ಪಶುವೈದ್ಯ ಸಂಸ್ಥೆಗಳು:** ವರ್ಷದ ಕೊನೆಯಲ್ಲಿ ಜಿಲ್ಲೆಯಲ್ಲಿ ಅಂಕೋಲಾ ತಾಲೂಕಿನ ಬಾಸಗೋಡ, ಕೊಡ್ಲಗದ್ದೆ, ಹಳಿಯಾಳ ತಾಲೂಕಿನ ಭಗವತಿ, ಹೊನ್ನಾವರ ತಾಲೂಕಿನ ಖರ್ವಾ, ಕಾರವಾರ ತಾಲೂಕಿನ ಕಿನ್ನರ, ಕುಮಟಾ ತಾಲೂಕಿನ ಹೊಳಗದ್ದೆ, ಶಿರಸಿ ತಾಲೂಕಿನ ಕೊರ್ಲಕಟ್ಟಾ, ಯಲ್ಲಾಪುರ ತಾಲೂಕಿನ ಮಾವಿನಮನೆ ಮತ್ತು ಜೋಯಿಡಾ ತಾಲೂಕಿನ ಅಖೇತಿ ಒಟ್ಟು 9 ಪ್ರಾ.ಪ.ಚಿ.ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 1 ಪಾಲಿಕ್ಲಿನಿಕ್, 22 ಪಶುವೈದ್ಯ ಆಸ್ಪತ್ರೆಗಳು, 84 ಪಶುಚಿಕಿತ್ಸಾಲಯಗಳು, 26 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ಮತ್ತು 11 ಸಂಚಾರಿ ಪಶುಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ ಶಿರಸಿಯಲ್ಲಿ ಒಂದು ಜಿಲ್ಲಾ ಮಟ್ಟದ ಜಾನುವಾರು ರೋಗ ತಪಾಸಣಾ ಪ್ರಯೋಗಾಲಯ ಹಾಗೂ ಕಾರವಾರ, ಭಟ್ಕಳ, ಕುಮಟಾ, ಸಿದ್ದಾಪುರ ಮತ್ತು ಶಿರಸಿಯಲ್ಲಿ ತಾಲೂಕು ಮಟ್ಟದ ಜಾನುವಾರು ರೋಗ ತಪಾಸಣಾ ಪ್ರಯೋಗಾಲಯ ಇದೆ. ಅಂತರರಾಜ್ಯ ಗಡಿಗಳಲ್ಲಿ ಜಾನುವಾರುಗಳ ಸೊಂಕು ರೋಗ ತಡೆಯಲು ಕೇಂದ್ರಗಳ ಸ್ಥಾಪನೆಗೆ ಮತ್ತು ಕಾರವಾರ ತಾಲೂಕಿನ ಮಾಜಾಳಿ ಗ್ರಾಮದಲ್ಲಿ ಮತ್ತು ಜೋಯಿಡಾ ತಾಲೂಕಿನ ಅನುಮೋಡ ಗ್ರಾಮದಲ್ಲಿ ಚೆಕ್‌ಪೋಸ್ಟ್‌ಗಳು ಕಾರ್ಯನಿರ್ವಹಿಸುತ್ತಿವೆ. ಕಾರವಾರ ತಾಲೂಕಿನ ಸಾವಂತವಾಡಿ ಹೋಬಳಿಯಲ್ಲಿ ಸಂಚಾರಿ ಪಶುಚಿಕಿತ್ಸಾಲಯಡಿ ರೈತರಿಗೆ ಮನೆಬಾಗಿಲಿಗೆ ಸೇವೆ ಒದಗಿಸಲು ಕಾರ್ಯನಿರ್ವಹಿಸುತ್ತಿವೆ.

**ಪಶುವೈದ್ಯ ಸಂಸ್ಥೆಗಳು ಕಾರ್ಯ ಪ್ರಗತಿ:** ಈ ಪಶುವೈದ್ಯ ಸಂಸ್ಥೆಗಳು ರೋಗಗ್ರಸ್ತ ಜಾನುವಾರುಗಳಿಗೆ ಚಿಕಿತ್ಸೆ ನೀಡಿ ಉಪಚರಿಸುವುದು ಮತ್ತು ರೋಗ ಹರಡದಂತೆ, ರೋಗೋದ್ರೇಕವಾಗದಂತೆ ಮುಂಜಾಗ್ರತೆ ಕ್ರಮವಾಗಿ ಲಸಿಕೆಯನ್ನು ಹಾಕಿ ರೈತರಿಗೆ ಹಾನಿಯಾಗದಂತೆ ತ್ವರಿತ ಕ್ರಮಗಳನ್ನು ಕೈಕೊಳ್ಳುತ್ತವೆ.

**ಪಶುವೈದ್ಯ ಸಂಸ್ಥೆಗಳಲ್ಲಿ ಸಾಧಿಸಿರುವ ಒಟ್ಟು ಕಾರ್ಯ ಪ್ರಗತಿ ಈ ಕೆಳಗಿನಂತಿದೆ:**

ಸಂಸ್ಥೆಗಳಲ್ಲಿ ಹಾಗೂ ಪ್ರವಾಸದಲ್ಲಿ ಚಿಕಿತ್ಸೆ ಮಾಡಿದ
ಜಾನುವಾರುಗಳು ಮತ್ತು ಕುಕ್ಕಟಗಳ ಸಂಖ್ಯೆ : 628118

| | |
|---|---|
| ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಜಾನುವಾರುಗಳ ಸಂಖ್ಯೆ | : 10687 |
| ಕಸಿ ಮಾಡಿದ ಹೋರಿಗಳ ಸಂಖ್ಯೆ | : 4379 |
| ಜಾನುವಾರುಗಳಿಗೆ ಜಂತುನಾಶಕ ಔಷಧಿ ನೀಡಿದ್ದು | : 454977 |
| ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡಿದ್ದರ ಸಂಖ್ಯೆ (ಪ್ರಥಮ/ಮರು/ಪುನರ ಸೇರಿ) | : 61347 |
| ಗರ್ಭಪರೀಕ್ಷೆ ಮಾಡಿದ ಜಾನುವಾರುಗಳ ಸಂಖ್ಯೆ | : 52718 |
| ಗರ್ಭಧರಿಸಿದ ಜಾನುವಾರುಗಳ ಸಂಖ್ಯೆ | : 28936 |
| ಕರುಗಳ ಜನನ ಸಂಖ್ಯೆ | : 21760 |

ಗಂಟಲು ಬೇನೆ, ಚಪ್ಪೆ ಬೇನೆ, ಕಾಲು ಮತ್ತು ಬಾಯಿ ಬೇನೆ, ಕಂದು ರೋಗ, ಪಿ.ಪಿ.ಆರ್., ಕುರಿ ಸಿಡುಬು ರೋಗ, ನಾಯಿ ಹುಚ್ಚು ಪ್ರತಿಬಂಧಕ ಮತ್ತು ಕರುಳು ಬೇನೆ ವಿರುದ್ಧ ಪ್ರತಿಬಂಧಕ ಚುಚ್ಚುಮದ್ದನ್ನು 807106 ಪ್ರಾಣಿಗಳಿಗೆ ನೀಡಿದೆ. 229197 ಕೋಳಿಗಳಿಗೆ ಕೊಕ್ಕರೆ ರೋಗದ ವಿರುದ್ದ ಲಸಿಕೆ ಹಾಕಲಾಗಿದೆ.

1) **ಮೇವು ಅಭಿವೃದ್ಧಿ :** ಮೇವು ಅಭಿವೃದ್ದಿಯಲ್ಲಿ 3583 ಹೇಕ್ಟರ ಜಮೀನಿನಲ್ಲಿ ಮೇವು ಬೆಳೆಯಿಸಲು ಗುರಿ ನೀಡಿದ್ದು, ವಿವಿಧ ಕಾರ್ಯಕ್ರಮಗಳಡಿಯಲ್ಲಿ ಮೇವು ಕಿರು ಪೊಟ್ಟಣ 21984 ಸೇರಿ 4060.0 ಹೇಕ್ಟರು ಜಮೀನಿನಲ್ಲಿ ರೈತರನ್ನು ಪ್ರೋತ್ಸಾಹಿಸಿ ಉತ್ತಮ ತಳಿ ಮೇವು ಬೆಳೆಸಿ ಪ್ರಗತಿ ಸಾಧಿಸಿದೆ. ಪ್ರಸಕ್ತ ಸಾಲಿನಲ್ಲಿ ಜಾನುವಾರುಗಳಿಗೆ ಯಾವುದೇ ತರದ ಮೇವಿನ ಕೊರತೆ ಉಂಟಾಗಿರುವುದಿಲ್ಲ.

2) **ಮೊಲ ಸಾಕಾಣಿಕೆ ಕೇಂದ್ರ:** ಮೊಲ ಸಾಕಾಣಿಕೆ ಬಗ್ಗೆ ಆಸಕ್ತಿ ಹೊಂದಿರುವ ಅವಶ್ಯಕ ರೈತರಿಗೆ ಒಳ್ಳೆಯ ಗುಣಮಟ್ಟದ ಮೊಲಗಳನ್ನು ಪೂರೈಸುವ ಉದ್ದೇಶದಿಂದ ಶಿರಸಿಯಲ್ಲಿ ಮೊಲ ಸಾಕಾಣಿಕೆ ಕೇಂದ್ರ ಪ್ರಾರಂಭಿಸಲಾಗಿದೆ. ಪ್ರಸಕ್ತ ಸಾಲಿನ ಪ್ರಾರಂಭದಲ್ಲಿ 49 ಗಂಡು ಮತ್ತು 56 ಹೆಣ್ಣು ಮೊಲಗಳಿರುತ್ತದೆ. ಒಟ್ಟು 23 ಮರಿಗಳನ್ನು ತಳಿ ಸಂವರ್ಧನೆಗಾಗಿ ಮಾರಾಟ ಮಾಡಲಾಗಿದೆ. ವರ್ಷದ ಅಂತ್ಯದಲ್ಲಿ 11 ಗಂಡು ಹಾಗೂ 25 ಹೆಣ್ಣು ಮೊಲಗಳು ಕೇಂದ್ರದಲ್ಲಿ ಇವೆ.

3) **ಗೊಡ್ಡು / ಬಂಜೆ ಜಾನುವಾರು ಶಿಬಿರಗಳ ವ್ಯವಸ್ಥೆ:** ಲೆಕ್ಕ ಶೀರ್ಷಿಕೆ: 2403–00–101–0–64 ರಲ್ಲಿ ಸಂತಾನೋತ್ಪತ್ತಿ ಕ್ರಿಯೆಯು ಉತ್ಪಾದನೆಗೆ ಪೂರಕವಾಗಿರುತ್ತದೆ. ಆದ್ದರಿಂದ ರಾಸುಗಳಲ್ಲಿ ಈ ಕ್ರಿಯೆ ಕ್ರಮಬದ್ದವಾಗಿರುವಂತೆ ಮಾಡಲು ಯೋಜನಾ ಕಾರ್ಯಕ್ರಮದಡಿಯಲ್ಲಿ 143 ಶಿಬಿರ ಏರ್ಪಡಿಸಲು ರೂ.30.92 ಲಕ್ಷ ಬಿಡುಗಡೆಯಾಗಿದ್ದು, ರೂ.30.91 ಲಕ್ಷ ವೆಚ್ಚ ಮಾಡಿ ಜಿಲ್ಲೆಯಲ್ಲಿ 146 ಶಿಬಿರಗಳನ್ನು ಜರುಗಿಸಲಾಯಿತು.

4) **ಜಿಲ್ಲಾವಲಯ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ:** ಇಲಾಖೆಯು ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಜಿಲ್ಲಾವಲಯ ವಿಶೇಷ ಘಟಕ ಯೋಜನೆಯಡಿಯಲ್ಲಿ 91 ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ರೂ.5.909 ಲಕ್ಷ ಸಹಾಯಧನ ಬಿಡುಗಡೆಯಾಗಿದ್ದು, ರೂ. 5.006 ಲಕ್ಷ ಆರ್ಥಿಕ ಪ್ರಗತಿ ಸಾಧಿಸಿ, 89 ಫಲಾನುಭವಿಗಳು ಪ್ರಯೋಜನ ಪಡೆದಿರುವರು ಹಾಗೂ ಜಿಲ್ಲಾವಲಯ ಗಿರಿಜನ ಉಪಯೋಜನೆಯಡಿ 1 ಪರಿಶಿಷ್ಟ ಪಂಗಡದ ಫಲಾನುಭವಿಗೆ ರೂ. 0.60 ಲಕ್ಷ ಸಹಾಯಧನ ಬಿಡುಗಡೆಯಾಗಿದ್ದು, ರೂ. 0.60 ಲಕ್ಷ ಆರ್ಥಿಕ ಪ್ರಗತಿ ಸಾದಿಸಿ, 1 ಫಲಾನುಭವಿಯು ಪ್ರಯೋಜನ ಪಡೆದಿರುವರು.

**4) ಅ) ರಾಜ್ಯವಲಯ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ:** ರಾಜ್ಯವಲಯ ವಿಶೇಷ ಘಟಕ ಹಾಗೂ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಅಡಿ ಒಟ್ಟು 239 ಪರಿಶಿಷ್ಟಜಾತಿ ಫಲಾನುಭವಿಗಳಿಗೆ ರೂ. 115.23 ಲಕ್ಷ ಸಹಾಯಧನ ಬಿಡುಗಡೆಯಾಗಿದ್ದು ರೂ.115.23 ಲಕ್ಷ ಆರ್ಥಿಕ ಪ್ರಗತಿ ಸಾಧಿಸಿ 239 ಫಲಾನುಭವಿಗಳು ಪ್ರಯೋಜನ ಪಡೆದಿರುವರು. ರಾಜ್ಯವಲಯ ಗಿರಿಜನ ಉಪಯೋಜನೆ ಮತ್ತು ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಯಡಿ 86 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ. 44.34 ಲಕ್ಷ ಸಹಾಯಧನ ಬಿಡುಗಡೆಯಾಗಿದ್ದು ರೂ. 44.34 ಲಕ್ಷ ಆರ್ಥಿಕ ಪ್ರಗತಿ ಸಾಧಿಸಿ 86 ಫಲಾನುಭವಿಗಳು ಪ್ರಯೋಜನ ಪಡೆದಿರುವರು.

**4) ಔಷಧಿಗಳು ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು:–**

ಲೆಕ್ಕಶೀರ್ಷಿಕೆ: 2403–00–101–0–27 ಕಾರ್ಯಕ್ರಮದಡಿಯಲ್ಲಿ ರೂ.225.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಶೇ100 ರಷ್ಟು ಆರ್ಥಿಕ ಪ್ರಗತಿ ಸಾಧಿಸಿದೆ.ಅದರಲ್ಲಿ ರೂ.15.00 ಲಕ್ಷದಲ್ಲಿ 37905ಲೀ ದ್ರವಸಾರಜನಕ ಹಾಗೂ ಕೃತಕ ಗರ್ಭಧಾರಣೆ ಸಾಧನಗಳನ್ನು ಖರೀದಿಸಿದೆ. ಜಿಲ್ಲೆಯ 144 ಪಶುವೈದ್ಯ ಸಂಸ್ಥೆಗಳಿಗೆ ಘನೀಕೃತ ವೀರ್ಯ ಬಳಸಿ ಕೃತಕ ಗರ್ಭಧಾರಣ ಮಾಡಲು ಸೌಲಭ್ಯ ಹೊಂದಿರುತ್ತದೆ. ಘನೀಕೃತ ವೀರ್ಯಗಳನ್ನು ಸುರಕ್ಷಿತವಾಗಿಡಲು ದ್ರವಸಾರಜನಕ ಪೂರೈಸಲಾಗಿದೆ. ರೂ.209.96 ಲಕ್ಷದಲ್ಲಿ ಔಷಧಿ, ಪಿರೋಪಕರಣ, ಶಸ್ತ್ರಚಿಕಿತ್ಸೆ ಸಲಕರಣೆಗಳನ್ನು ಖರೀದಿಸಿ ಜಿಲ್ಲೆಯ 144 ಪಶುವೈದ್ಯ ಸಂಸ್ಥೆಗಳಿಗೆ ದೈನಂದಿನ ಚಿಕಿತ್ಸೆಗೆ ಅವಶ್ಯವಿರುವ ಔಷಧಿಗಳನ್ನು ನಿಯಮಾನುಸಾರ ಖರೀದಿಸಿ ವಿತರಿಸಲಾಗಿದೆ.

**5) ಕಟ್ಟಡ ದುರಸ್ಥಿ:** ಲೆಕ್ಕ ಶೀರ್ಷಿಕೆ:2403–00–101–0–28 ರಲ್ಲಿ ಜಿಲ್ಲಾ ಪಂಚಾಯತ ಯೋಜನೆಯ ಕಟ್ಟಡ ಕಾರ್ಯಕ್ರಮದಲ್ಲಿ ರೂ.70.00 ಲಕ್ಷ ಮಂಜೂರಾಗಿ ರೂ.70.00 ಲಕ್ಷ ಅನುದಾನ ಬಿಡುಗಡೆ ಆಗಿದ್ದು, ರೂ.69.64 ಲಕ್ಷ ಆರ್ಥಿಕ ಪ್ರಗತಿ ಸಾಧಿಸಿದೆ. ಸದರ ಅನುದಾನದಲ್ಲಿ ಅಂಕೋಲಾ, ಅಡಿಗೋಣ, ಹಿಲ್ಲೂರು, ಬೈಲೂರು, ಕುಂಟವಾಣಿ, ಬೆಂಗ್ರೆ, ಕುದ್ರಗಿ, ಅರೆಅಂಗಡಿ, ಹಳದಿಪೂರ, ಖರ್ವಾ, ಕೆಕ್ಕಾರ, ಮೂಡ್ಕಣಿ, ಬಳಕೂರು, ಕುಮಟಾ, ಸಂತೆಗುಳಿ, ಹಿರೆಗುತ್ತಿ, ಕಾರವಾರ, ಕಿನ್ನರ, ದೇವಳಮಕ್ಕಿ, ಶಿರಸಿ, ಕೊರ್ಲಕಟ್ಟಾ, ಹುಲೇಮಳಗಿ, ಅಜ್ಜಿಬಾಳ, ಹುಲೇಕಲ್, ಹೆಗಡೆಕಟ್ಟಾ, ದೇವನಳ್ಳಿ, ಇಸಳೂರು, ಸಿದ್ದಾಪುರ, ಹೆರೂರು, ಇಟಗಿ, ಲಂಬಾಪುರ, ಶಿರಳಗಿ, ತೆರಗಾಂವ, ಯಡೋಗಾ, ಅಂಬಿಕಾನಗರ, ಬೆಳವಟಗಿ, ಮದನಳ್ಳಿ, ಮುಂಡಗೋಡ, ಕಲಕೇರಿ, ಜೋಯಿಡಾ, ಉಳವಿ, ರಾಮನಗರ, ಕಿರವತ್ತಿ, ನಂದೊಳ್ಳಿ, ಮಂಚಿಕೇರಿ, ಪಶುವೈದ್ಯ ಸಂಸ್ಥೆಗಳ ಕಟ್ಟಡ ದುರಸ್ಥಿ ಕಾರ್ಯ ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ ಶಿರಸಿ ಹಾಗೂ ಕಾರವಾರ ಇವರಿಗೆ ವಹಿಸಿಕೊಡಲಾಗಿದೆ.

**6) ಗಿರಿರಾಜ ಹಕ್ಕಿಗಳ ಸಾಕಾಣಿಕೆ:** ಲೆಕ್ಕ ಶೀರ್ಷಿಕೆ: 2403–00–103–0–31 ರ ಕಾರ್ಯಕ್ರಮದಡಿಯಲ್ಲಿ ಬಿಡುಗಡೆಯದ ರೂ.10.00 ಲಕ್ಷ ಅನುದಾನದಲ್ಲಿ ರೂ.9.99 ಲಕ್ಷ ಗಿರಿರಾಜ ಹಕ್ಕಿಗಳ ಆಹಾರ, ಔಷಧಿ, ಸಾಕಾಣಿಕೆ ಮತ್ತು ನಿರ್ವಹಣೆಗಾಗಿ ಬಳಸಿಕೊಳ್ಳಲಾಗಿದೆ. ಇದು ಜನಪ್ರಿಯ ಕಾರ್ಯಕ್ರಮವಾಗಿದ್ದು, ಸದರಿ ಕಾರ್ಯಕ್ರಮದಡಿಯಲ್ಲಿ ಕೋಳಿ ಮರಿಗಳನ್ನು 6 ರಿಂದ 7 ವಾರಗಳವರೆಗೆ ಸಾಕಾಣಿಕೆ ಮಾಡಿ ಅವಶ್ಯಕ ಆಹಾರ ಹಾಗೂ ಚುಚ್ಚುಮದ್ದನ್ನು ನೀಡಲಾಗಿದೆ. ನಂತರದಲ್ಲಿ 11489 ಕೋಳಿಮರಿಗಳನ್ನು ಹಿಂದುಳಿದ ಸಾಮಾನ್ಯ ಮಹಿಳಾ ಫಲಾನುಭವಿಗಳಿಗೆ ತಲಾ 10 ರಂತೆ ಶೇ 75 ರ ಸಹಾಯಧನ ಹಾಗೂ ಪರಿಶಿಷ್ಟಜಾತಿ ಮಹಿಳಾ ಫಲಾನುಭವಿಗಳಿಗೆ ತಲಾ 10 ರಂತೆ ಉಚಿತವಾಗಿ ವಿತರಣೆ ಮಾಡಲಾಗಿದೆ.

**7) ವಿಸ್ತರಣಾ ಘಟಕಗಳ ಬಲಪಡಿಸುವಿಕೆ.** :– ಲೆಕ್ಕ ಶಿರ್ಷಿಕೆ: 2403–00–101–0–30 ಈ ಕಾರ್ಯಕ್ರಮದಲ್ಲಿ ರೂ. 30.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಇದರಲ್ಲಿ ಕಿಸಾನ ಸಂಪರ್ಕ ಸಭೆ ನಡೆಸುವುದು,

ಉತ್ಸವಗಳಿಗಾಗಿ, ಜಾನುವಾರು ಪದರ್ಶನ, ತಾಂತ್ರಿಕ/ಅರೆತಾಂತ್ರಿಕ ಸಿಬ್ಬಂದಿಗೆ ಕಾರ್ಯಗಾರಗಾಗಿ, ಹಾಲು ಕರೆಯುವ ಸ್ಪರ್ಧೆ, ಜಾನುವಾರು ಜಾತ್ರೆ ಮತ್ತು ವಿಸ್ತರಣೆ ಚಟುವಟಿಕೆ ಕಾರ್ಯಕ್ರಮ ಹಮ್ಮಿಕೊಂಡು ರೂ.29.93 ಲಕ್ಷ ಖರ್ಚು ಮಾಡಲಾಗಿದೆ.

8) **ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ** ಮಹಾ ಮಂಡಳಿಯಿಂದ ಆರ್.ಕೆ.ವಿ.ವಾಯ್ ಅಡಿ 10+1 ಕುರಿ/ಮೇಕೆ ಸಾಕಾಣಿಕೆಗೆ ಒಟ್ಟೂ 10 ಫಲಾನುಭವಿಗಳಿಗೆ ರೂ. 6.00 ಲಕ್ಷ ಅನುದಾನ ಮಂಜೂರಾಗಿದ್ದು, ಇದರಲ್ಲಿ 8 ಪರಿಶಿಷ್ಟ ಜಾತಿ ಮತ್ತು 2 ಪರಿಶಿಷ್ಟ ಪಂಗಡದ ಫಲಾನುಭವಿಯಂತೆ ಒಟ್ಟೂ 10 ಫಲಾನುಭವಿಗಳು ಪ್ರಯೋಜನ ಪಡೆದು ರೂ. 6.00 ಲಕ್ಷ ಅನುದಾನ ಪ್ರಗತಿ ಸಾಧಿಸಲಾಗಿದೆ.

9) **ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ** ಮಹಾಮಂಡಳಿಯಿಂದ ಸಂಚಾರಿ ಮಾಂಸ ಹಾಗೂ ಮಾಂಸದಿಂದ ತಯಾರಿಸಿದ ಖಾದ್ಯ ವಸ್ತುಗಳ ಮಾರಾಟ ಮಳಿಗೆ ಸ್ಥಾಪನೆ ಯೋಜನೆಯಡಿ 1 ಫಲಾನುಭವಿಗೆ ರೂ. 8.25ಲಕ್ಷ ಅನುದಾನ ಮಂಜೂರಾಗಿದ್ದು, ಇದರಲ್ಲಿ 1 ಪರಿಶಿಷ್ಟ ಜಾತಿ ಫಲಾನುಭವಿಯಂತೆ ಒಟ್ಟೂ 1 ಫಲಾನುಭವಿಯು ಪ್ರಯೋಜನ ಪಡೆದು ರೂ. 8.25 ಲಕ್ಷ ಅನುದಾನ ಪ್ರಗತಿ ಸಾಧಿಸಲಾಗಿದೆ.

**10)** ಆರ್.ಕೆ.ವಿ.ವಾಯ್. ಎ.ಎಫ್.ಡಿ.ಪಿ ಮತ್ತು ಬರ ಯೋಜನೆಯಡಿ ಅಗಸ್ಟ–2018ರ ಮಾಹೆಯಲ್ಲಿ 11 ತಾಲೂಕುಗಳಿಗೆ ಒಟ್ಟೂ 2406 ಮೇವಿನ ಬೀಜದ ಮಿನಿಕಿಟ್ ಸರಬರಾಜು ಆಗಿರುತ್ತದೆ. ಅಕ್ಟೋಬರ–2018ರ ಮಾಹೆಯಲ್ಲಿ 11 ತಾಲೂಕುಗಳಿಗೆ ಒಟ್ಟೂ 7376 ಮೇವಿನ ಬೀಜದ ಮಿನಿಕಿಟ್ ಸರಬರಾಜು ಆಗಿರುತ್ತದೆ. ಜನವರಿ –2019ರ ಮಾಹೆಯಲ್ಲಿ 11 ತಾಲೂಕುಗಳಿಗೆ ಒಟ್ಟೂ 6781 ಮೇವಿನ ಬೀಜದ ಮಿನಿಕಿಟ್ ಸರಬರಾಜು ಆಗಿರುತ್ತದೆ.

**11) ಪಶುಭಾಗ್ಯ ಯೋಜನೆ :–**

ಪಶುಭಾಗ್ಯ ಯೋಜನೆಯಡಿ ಹೈನುಗಾರಿಕೆಗಾಗಿ ಒಟ್ಟೂ–37 ಫಲಾನುಭವಿಗಳಿಗೆ ರೂ.16.80 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ 37 ಫಲಾನುಭವಿಗಳಿಗೆ ಆಕಳು/ಎಮ್ಮೆ ಖರೀದಿಸಲು ಸಹಾಯಧನ ಮಂಜೂರಾಗಿ ರೂ. 16.80 ಲಕ್ಷ ಅನುದಾನ ಪ್ರಗತಿ ಸಾಧಿಸಲಾಗಿದೆ. ಅದೇ ರೀತಿ ಕರು ಸಾಕಾಣಿಕೆಗಾಗಿ 64 ಫಲಾನುಭವಿಗಳಿಗೆ ರೂ. 8.64 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ 64 ಫಲಾನುಭವಿಗಳಿಗೆ ಕರು ಸಾಕಾಣಿಕೆ ಅಡಿ ರೂ. 8.64 ಲಕ್ಷ ಅನುದಾನ ಪ್ರಗತಿ ಸಾಧಿಸಲಾಗಿದೆ ಹಾಗೂ 2+1 ಕುರಿ/ಮೇಕೆ ಸಾಕಾಣಿಕೆಗಾಗಿ 71 ಫಲಾನುಭವಿಗಳಿಗೆ ರೂ. 11.78 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ 71 ಫಲಾನುಭವಿಗಳಿಗೆ ಕುರಿ/ಮೇಕೆ ಖರೀದಿಸಲು ಸಹಾಯಧನ ಮಂಜೂರಾಗಿ ರೂ. 11.78ಲಕ್ಷ ಅನುದಾನ ಪ್ರಗತಿ ಸಾಧಿಸಲಾಗಿದೆ.

**12) ಗೋಶಾಲೆ:–**

2018–19ನೇ ಸಾಲಿನಲ್ಲಿ ಮೈಸೂರಿನ ಪಿಂಜಾರಪೋಲ ಮತ್ತು ಇತರೆ ಗೋಶಾಲೆಗಳಿಗೆ ಬೆಂಬಲ ನೀಡುವ ಕಾರ್ಯಕ್ರಮದಡಿಯಲ್ಲಿ ಯಲ್ಲಾಪುರ ತಾಲೂಕಿನ ಶ್ರೀ ಗೋವರ್ಧನ ಗೋಶಾಲೆ, ಕರಡೊಳ್ಳಿ, ಇವರಿಗೆ ರೂ. 3.88 ಲಕ್ಷ ಸಹಾಯಾನುದಾನ ಮಂಜೂರಾಗಿರುತ್ತದೆ. ಸಿದ್ದಾಪುರ ತಾಲೂಕಿನ ಶ್ರೀರಾಮದೇವ ಬಾನ್ಕುಳಿ ಮಠ, ಬೇಡ್ಕಣಿ, ಇವರಿಗೆ ರೂ. 13.37 ಲಕ್ಷ ಸಹಾಯಾನುದಾನ ಮಂಜೂರಾಗಿರುತ್ತದೆ. ಹೊನ್ನಾವರ ತಾಲೂಕಿನ ಶ್ರೀ ವಿರಾಂಜನೇಯ ಧಾರ್ಮಿಕದತ್ತಿ ಸಂಸ್ಥೆ ಶ್ರೀಕ್ಷೇತ್ರ ಬಂಗಾರಮಕ್ಕಿ ಇವರಿಗೆ ರೂ.3.81 ಲಕ್ಷ ಸಹಾಯಧನ ಮಂಜೂರಾಗಿರುತ್ತದೆ.

# ಅನುಬಂಧ-ಅ

## 1) ಪಶುಸಂಗೋಪನಾ ಇಲಾಖೆ ಉತ್ತರಕನ್ನಡ ಜಿಲ್ಲೆಯ 2018-19 ನೇ ಸಾಲಿನ ಸಿಬ್ಬಂದಿ ವಿವರಣಾ ಪಟ್ಟಿ (31-03-2019ರ ಅಂತ್ಯದವರೆಗೆ)

| ಕ್ರ.ಸಂ. | ಹುದ್ದೆಯ ವಿವರ | ಹುದ್ದೆಗಳು | | |
|---|---|---|---|---|
| | | ಮಂಜೂರಾದ ಹುದ್ದೆಗಳ ವಿವರ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
| 1. | ಉಪನಿರ್ದೇಶಕರು | 02 | 02 | 0 |
| 2. | ಸಹಾಯಕ ನಿರ್ದೇಶಕರು | 15 | 7 | 8 |
| 3. | ಪಶುವೈದ್ಯ ಅಧಿಕಾರಿಗಳು | 114 | 31 | 83 |
| 4. | ಜಾನುವಾರು ಅಭಿವೃದ್ಧಿ ಅಧಿಕಾರಿಗಳು | 12 | 5 | 7 |
| 5. | ಜಾನುವಾರು ಅಧಿಕಾರಿಗಳು | 11 | 10 | 1 |
| 6. | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 47 | 33 | 14 |
| 7. | ಪಶುವೈದ್ಯಕೀಯ ಪರೀಕ್ಷಕರು | 74 | 22 | 52 |
| 8. | ಪಶುವೈದ್ಯಕೀಯ ಸಹಾಯಕರು | 70 | 35 | 35 |
| 9. | ಆಡಳಿತ ಸಹಾಯಕರು | 01 | 01 | 0 |
| 10. | ಅಧೀಕ್ಷಕರು | 02 | 01 | 01 |
| 11. | ಪ್ರಥಮ ದರ್ಜೆ ಸಹಾಯಕರು | 04 | 04 | 0 |
| 12. | ದ್ವಿತೀಯ ದರ್ಜೆ ಸಹಾಯಕರು | 12 | 06 | 6 |
| 13. | ಬೆರಳಚ್ಚುಗಾರರು | 02 | 0 | 02 |
| 14. | ಎಕ್ಸರೇ ಟೆಕ್ನಿಷಿಯನ್ | 01 | 0 | 01 |
| 15. | ವಾಹನ ಚಾಲಕರು | 13 | 03 | 10 |
| 16. | "ಡಿ" ದರ್ಜೆ ನೌಕರು | 236 | 41 | 195 |
| | **ಒಟ್ಟು** | **616** | **201** | **415** |

## 2) ಜಿಲ್ಲೆಯಲ್ಲಿರುವ ಜಾನುವಾರುಗಳು : (19 ನೇ ಜಾನುವಾರು ಗಣತಿ 2012 ರ ವರದಿಯಂತೆ)

| | | |
|---|---|---|
| ದನಕರುಗಳು | : | 336955 |
| ಎಮ್ಮೆಗಳು | : | 87816 |
| ಕುರಿಗಳು | : | 4783 |
| ಮೇಕೆಗಳು | : | 8961 |
| ಹಂದಿಗಳು | : | 1491 |
| ನಾಯಿಗಳು | : | 57544 |
| ಇತರೆ ಜಾನುವಾರುಗಳು | : | 614 |
| ಒಟ್ಟು ಜಾನುವಾರುಗಳು | : | 498164 |
| ಒಟ್ಟು ಕುಕ್ಕಟಗಳು | : | 537037 |

## 2018-19ನೇ ಸಾಲಿನ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆಯಾದ ಅನುದಾನಗಳ ಖರ್ಚು ಮತ್ತು ಶಿಲ್ಕು ಇರುವ ಅನುದಾನದ ವಿವರ

(ಆರ್ಥಿಕ ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಯ ಹೆಸರು | ವಾರ್ಷಿಕ ಅನುದಾನ | ಬಿಡುಗಡೆ ಆದ ಅನುದಾನ | ಖರ್ಚು | ಶಿಲ್ಕು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಜಿ. ಪಂ. ಯೋಜನೆಗಳು | 463.17 | 463.16 | 461.99 | 1.17 | ವೇತನದಲ್ಲಿ ಉಳಿಕೆ |
| 2. | ತಾ. ಪಂ. ಯೋಜನೆಗಳು | 1117.32 | 1262.17 | 1154.03 | 108.14 | ವೇತನದಲ್ಲಿ ಉಳಿಕೆ |
| | **ಜಿ.ಪಂ. ಮತ್ತು ತಾ.ಪಂ. ಒಟ್ಟು** | **1580.49** | **1725.33** | **1616.02** | **109.31** | – |
| 3. | ವಿಶೇಷ ಘಟಕ ಯೋಜನೆ (ಜಿಲ್ಲಾ ವಲಯ) | 5.919 | 5.909 | 5.006 | 0.903 | – |
| 4. | ಗಿರಿಜನ ಉಪಯೋಜನೆ (ಜಿಲ್ಲಾ ವಲಯ) | 0.60 | 0.60 | 0.60 | 0.00 | – |
| 5. | ವಿಶೇಷ ಘಟಕ ಯೋಜನೆ (ರಾಜ್ಯ ವಲಯ) | 115.23 | 115.23 | 115.23 | 0.00 | – |
| 6. | ಗಿರಿಜನ ಉಪಯೋಜನೆ (ರಾಜ್ಯ ವಲಯ) | 44.34 | 44.34 | 44.34 | 0.00 | – |

*****

ಮಾಹಿತಿ ಮೂಲ : ಜಿಲ್ಲಾ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕಾರವಾರ

# ಸಮಾಜ ಕಲ್ಯಾಣ ಇಲಾಖೆ

**ಇಲಾಖೆಯ ಮುಖ್ಯ ಉದ್ದೇಶ :**

ಸಾಮಾಜಿಕ ಅಸಮತೋಲನವನ್ನು ಹೋಗಲಾಡಿಸಿ ಎಲ್ಲಾ ನಾಗರಿಕರಿಗೂ ಸಮಾನ ಅವಕಾಶ, ಹಕ್ಕು ಇರಬೇಕೆಂಬ ಉದ್ದೇಶದಿಂದ ಭಾರತದ ಸಂವಿಧಾನವು ಪರಿಶಿಷ್ಟ ಜಾತಿಯವರಿಗೆ ಸಂವಿಧಾನಾತ್ಮಕ ರಕ್ಷಣೆ ಒದಗಿಸಿದೆ. ಕೆಲವು ವಿಶೇಷ ಹಕ್ಕು ನೀಡಿದೆ. ಪರಿಶಿಷ್ಟ ಜಾತಿಯವರ ಸರ್ವತೋಮುಖ ಪ್ರಗತಿಗೆ ಕರ್ನಾಟಕ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ, ಕೈಗೊಳ್ಳುತ್ತಲಿದೆ.

2011 ನೇ ಜನಗಣತಿ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ 1437169 ಇರುತ್ತದೆ ಪರಿಶಿಷ್ಟ ಜಾತಿಯ ಜನಸಂಖ್ಯೆ 116431 ಇರುತ್ತದೆ. ತಲೆತಲಾಂತರಗಳಿಂದ ಶೋಷಣೆಗೊಳಪ್ಪು ಸಹಜವಾಗಿಯೇ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ ಜನರ ಉನ್ನತಿಗಾಗಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ಈ ಕೆಳಗೆ ನಮೂದಿಸಿದಂತೆ ಶೈಕ್ಷಣಿಕ ಕಾರ್ಯಕ್ರಮಗಳು, ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮಗಳು ಮತ್ತು ಇತರೇ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದೆ.

**I ಶೈಕ್ಷಣಿಕ ನೆರವಿನ ಯೋಜನೆಗಳು:** ಪರಿಶಿಷ್ಟ ಜಾತಿ ಜನರ ಶೈಕ್ಷಣಿಕ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಈ ಕೆಳಗಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

**1) ವಿದ್ಯಾರ್ಜನೆಗೆ ಉತ್ತೇಜನ:**

1) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 2) ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಪರಿಶಿಷ್ಟಜಾತಿ/ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹಧನ, 3) ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, 4) ಎಂಪಿಲ್/ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಧನಸಹಾಯ, 5) ರ‍್ಯಾಂಕ ವಿದ್ಯಾರ್ಥಿಗಳಿಗೆ ನಗದು ಬಹುಮಾನ, 6) ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, 7) ವಿದೇಶ ವಿಶ್ವ ವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಧನ ಸಹಾಯ, 8) ಪುಸ್ತಕ ಭಂಡಾರ, 9) ಅಧ್ಯಯನ ಪ್ರವಾಸಕ್ಕೆ ನೆರವು, 10) ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಲ್ಲಿ ತರಬೇತಿ, 11) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ, 12) ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ, 13) ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ಧನಸಹಾಯ, 14) ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ, 15) ಆಶ್ರಮ ಶಾಲೆಗಳು.

**2) ಉದ್ಯೋಗ ಮತ್ತು ತರಬೇತಿ**

ಪರಿಶಿಷ್ಟ ಜಾತಿ ವಿದ್ಯಾವಂತ ನಿರುದ್ಯೋಗಿ ಯುವ ಜನರಿಗೆ ಉದ್ಯೋಗ ಸೌಲಭ್ಯವನ್ನು ಒದಗಿಸಿ ಕೊಡುವ ಬಗ್ಗೆ ಈ ಕೆಳಗಿನ ತರಬೇತಿಗಳನ್ನು ನೀಡಲಾಗಿದೆ.

1) ಸ್ವಯಂ ಉದ್ಯೋಗ ಕೈಗೊಳ್ಳಲು ವೃತ್ತಿ ತರಬೇತಿ ಕಾರ್ಯಕ್ರಮ, 2) ಕಾನೂನು ಪದವೀಧರರಿಗೆ ಸಹಾಯಧನ 3) ಕಾನೂನು ಪದವೀಧರರಿಗೆ ತರಬೇತಿ, ಶಿಷ್ಯವೇತನ 4) ಜಿ.ಎನ್.ಎಮ್.ನರ್ಸಿಂಗ್ ತರಬೇತಿ.

### 3) ಸಾಮಾಜಿಕ ಮತ್ತು ಆರ್ಥಿಕ ನೆರವಿನ ಯೋಜನೆಗಳು

ಪರಿಶಿಷ್ಟ ಜಾತಿ ಜನರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಕ್ಕಾಗಿ ಅಂತರಜಾತಿ ವಿವಾಹವಾದ ದಂಪತಿಗಳಿಗೆ ಪ್ರೋತ್ಸಾಹಧನ, ದೌರ್ಜನ್ಯಕ್ಕೆ ಒಳಪಟ್ಟ ಪ.ಜಾತಿ/ ಪ.ವರ್ಗದ ಸಂತ್ರಸ್ಥರಿಗೆ ಪರಿಹಾರ ಧನ ಮತ್ತು ದೌರ್ಜನ್ಯದಲ್ಲಿ ಮೃತಪಟ್ಟ ಕುಟುಂಬದವರೊಬ್ಬರಿಗೆ ರೂ.8.25 ಲಕ್ಷ ಪರಿಹಾರಧನ ಮಂಜೂರಿಸಲಾಗುತ್ತದೆ. ಪರಿಶಿಷ್ಟ ಜಾತಿ ಯುವಕ/ಯುವತಿಯರು ಸಮುದಾಯದೊಳಗೆ ಅಂತರಜಾತಿ ವಿವಾಹವಾದಲ್ಲಿ ರೂ.2,00,000/– ಪ್ರೋತ್ಸಾಹಧನ ಮಂಜೂರಿಸಲಾಗುತ್ತದೆ. ಪರಿಶಿಷ್ಟ ಜಾತಿಯ ವಿಧವೆಯರು ಮರು ವಿವಾಹವಾದಲ್ಲಿ ರೂ.3,00,000/– ಪ್ರೋತ್ಸಾಹಧನ ಮಂಜೂರಿಸಲಾಗುತ್ತದೆ.

2018–19 ನೇ ಸಾಲಿಗೆ ಅಂತರಜಾತಿ ವಿವಾಹವಾದ ಒಟ್ಟು 88 ದಂಪತಿಗಳಿಗೆ ಒಟ್ಟು ರೂ. 30,00,000/– ಪ್ರೋತ್ಸಾಹಧನ ಮಂಜೂರಿಸಲಾಗಿರುತ್ತದೆ ಮತ್ತು 2018–19 ನೇ ಸಾಲಿನಲ್ಲಿ ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರಿಗೆ ಒಟ್ಟು 26 ಪ್ರಕರಣಗಳಿಗೆ ರೂ. 26,25,000/– ಪರಿಹಾರಧನ ಮಂಜೂರಿಸಲಾಗಿದೆ.

### 4) ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ

2018–19 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಸರ್ವಾಂಗೀಣ ಅಭಿವೃದ್ಧಿಗಾಗಿ ವಿವಿಧ ಅಭಿವೃದ್ಧಿ ಇಲಾಖೆಗಳು, ನಿಗಮಗಳು ಮುಂತಾದವುಗಳ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮಗಳನ್ನು ಕೃಷಿ ಇಲಾಖೆ, ತೋಟಗಾರಿಕೆ, ಪಶುಸಂಗೋಪನೆ, ಜಲಾನಯನ ಇಲಾಖೆ, ತಾಲ್ಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಇತ್ಯಾದಿಗಳ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2018–19 ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ರೂ. 53.00 ಲಕ್ಷ ಅನುದಾನ ನಿಗದಿಯಾಗಿದ್ದು ರೂ. 53.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಹಾಗೂ ರೂ. 53.00 ಲಕ್ಷ ಅನುದಾನ ಖರ್ಚಾಗಿರುತ್ತದೆ.

## ಸಮಾಜ ಕಲ್ಯಾಣ ಇಲಾಖೆ, ಉತ್ತರಕನ್ನಡ ಜಿಲ್ಲೆ, ಕಾರವಾರ

### ಪರಿಶಿಷ್ಟ ಜಾತಿಯವರ ಕಲ್ಯಾಣ ಕಾರ್ಯಕ್ರಮದಡಿ ಜಿಲ್ಲಾವಾರು ಕಾಯಕ್ರಮಗಳ ಪ್ರಗತಿ ವರದಿ

ಜಿಲ್ಲೆ: ಉತ್ತರಕನ್ನಡ

ಮಾರ್ಚ 2019 ರ ಮಾಹೆ

| ಕ್ರ. ಸಂ | ಯೋಜನೆ ವಿವರ ಹಾಗೂ ಲೆಕ್ಕ ಶೀರ್ಷಿಕೆ | ಉದ್ದೇಶ (ಆಬ್ಜೆಕ್ಟ್ ಕೋಡ್) | ಭೌತಿಕ | ವಾರ್ಷಿಕ ಗುರಿ | | ಜಿಲ್ಲಾ ಪಂಚಾಯತ್ ಒಟ್ಟು ಬಿಡುಗಡೆ | ಮಾಸಾಂತ್ಯದವರೆಗೆ ಸಂಚಿತ ಪ್ರಗತಿ | | |
|---|---|---|---|---|---|---|---|---|---|
| | | | | ಆರ್ಥಿಕ ಅನುದಾನ | ಭೌತಿಕ | | ಆರ್ಥಿಕ | | |
| | | | | | | | ಒಟ್ಟು ಖರ್ಚು | ಶಿಲ್ಕು | ಶೇ. ಬಿಡುಗಡೆಗೆ |
| ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು | | | | | | | | | |
| 1 | ಪ. ಜಾತಿ ವಿದ್ಯಾರ್ಥಿಗಳಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ<br>**2225-00-101-0-27** | **117** | ವಿದ್ಯಾರ್ಥಿ | 168.30 | 1600 | 168.30 | 168.30 | - | 100% |
| 2 | ಪ. ಜಾತಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ | **001** | ಸಿಬ್ಬಂದಿ | 56.00 | 24 | 56.00 | 56.00 | - | 100% |
| | | **034** | ಹೊರ ಗುತ್ತಿಗೆ | 65.00 | 25 | 65.00 | 60.00 | 5.00 | 92% |
| | **2225-00-101-0-29** | **090** | ನಿಲಯ | 105.00 | 7 | 105.00 | 105.00 | - | 100% |
| | ಒಟ್ಟು | | | **226.00** | **56** | **226.00** | **221.00** | **5.00** | **98%** |
| 3 | ನಿರ್ದೇಶನ ಮತ್ತು ಆಡಳಿತ | **001** | ಸಿಬ್ಬಂದಿ | 221.00 | 90 | 220.99 | 220.99 | - | 100% |
| | | **034** | ಹೊರ ಗುತ್ತಿಗೆ | 80.00 | 16 | 80.00 | 75.00 | 5.00 | 94% |
| | **2225-00-101-0-30** | **090** | ಕಛೇರಿ | 164.78 | 12 | 164.78 | 164.78 | - | 100% |
| | ಒಟ್ಟು | | | **465.78** | **118** | **465.77** | **460.77** | **5.00** | **99%** |
| 4 | ಪ.ಜಾತಿಯವರಿಗೆ ನಿವಾಸಿ ಶಾಲೆಗಳು | **001** | ಸಿಬ್ಬಂದಿ | 74.00 | 33 | 74.00 | 74.00 | - | 100% |
| | | **034** | ಹೊರ ಗುತ್ತಿಗೆ | 46.00 | 15 | 46.00 | 45.00 | 1.00 | 98% |
| | **2225-00-101-0-32** | **090** | ಶಾಲೆ<br>ವಿದ್ಯಾರ್ಥಿ | 54.30 | 375 | 54.30 | 54.30 | - | 100% |
| | ಒಟ್ಟು | | | **174.30** | **423** | **174.30** | **173.30** | **1.00** | **99%** |

| | | | | | | | | | |
|---|---|---|---|---|---|---|---|---|---|
| **5** | ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳ ನಿರ್ವಹಣೆ<br>**2225-00-101-0-36** | **090** | ನಿಲಯ | 23.94 | 650 | 23.94 | 23.94 | - | 100% |
| **6** | ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ, ಇತರೆ ರಿಯಾಯಿತಿಗಳು, ಶ್ರೇಷ್ಠತೆ ಪಡೆದ ವಿದ್ಯಾರ್ಥಿಗಳಿಗೆ ಸಹಾಯ<br>**2225-00-101-0-37** | **100** | ವಿದ್ಯಾರ್ಥಿ | 93.00 | 500 | 93.00 | 93.00 | - | 100% |
| **7** | ಕೇಂದ್ರಪುರಸ್ಕೃತ ಯೋಜನೆಯಲ್ಲಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಪುಸ್ತಕ ಭಂಡಾರ<br>**2225-00-101-0-06** | **090** | ಕಾಲೇಜು | 5.00 | 4 | - | - | - | - |
| **8** | ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಾನುದಾನ<br>**2225-00-101-0-42** | **090** | ನಿಲಯ<br>ವಿದ್ಯಾರ್ಥಿ | - | 0 | - | - | - | - |
| ಒಟ್ಟು ಜಿಲ್ಲಾ ಪಂಚಾಯತ್ | | | | **1,156.32** | **3351** | **1,151.31** | **1,140.31** | **11.00** | **99%** |

| ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು | | | | | | | | | |
|---|---|---|---|---|---|---|---|---|---|
| 1 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ | **001** | ಸಿಬ್ಬಂದಿ | 317.00 | 144 | 317.00 | 317.00 | - | 100% |
| | | **034** | ಹೊರ ಗುತ್ತಿಗೆ | 166.00 | 52 | 166.00 | 153.00 | 13.00 | 92% |
| | **2225-00-101-0-61** | **090** | ನಿಲಯ | 273.97 | 26 | 273.97 | 273.97 | - | 100% |
| | | | ವಿದ್ಯಾರ್ಥಿ | | 1500 | | | | |
| | ಒಟ್ಟು | | | **756.97** | **1722** | **756.97** | **743.97** | **13.00** | **98%** |
| 2 | ಪ.ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯ **2225-00-101-0-62** | **090** | ಕಾಲೋನಿ | 42.00 | 41 | 42.00 | 42.00 | - | 100% |
| 3 | ಪ.ಜಾತಿ ಕುಟುಂಬಗಳಿಗೆ ಸಹಾಯ **2225-00-101-0-64** | **090** | ಕುಟುಂಬ | 11.00 | 254 | 11.00 | 11.00 | - | 100% |
| 4 | ಹೆಚ್ಚಿನ ಊಟ ಮತ್ತು ವಸತಿ ವೆಚ್ಚ **2225-00-101-0-65** | **090** | ವಿದ್ಯಾರ್ಥಿ | 31.00 | 575 | 31.00 | 31.00 | - | 100% |
| 5 | ಮೆ.ಪೂ. ವಿ ನಿಲಯ ಕಟ್ಟಡ ನಿರ್ವಹಣೆ **2225-00-101-0-67** | **090** | ವಿದ್ಯಾರ್ಥಿ | 45.00 | 45 | 45.00 | 45.00 | - | 100% |
| 6 | ಮೆ. ಪೂರ್ವ ವಿದ್ಯಾರ್ಥಿವೇತನ **2225-00-101-0-68** | **117** | ವಿದ್ಯಾರ್ಥಿ | 141.36 | 15400 | 141.36 | 141.36 | - | 100% |
| 7 | ಕಾನೂನು ಪದವೀಧರರಿಗೆ ಪ್ರೋತ್ಸಾಹ ಧನ **2225-00-101-0-80** | **090** | ವಿದ್ಯಾರ್ಥಿ | 1.20 | 9 | 1.20 | 1.20 | - | 100% |
| 8 | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕೇಂದ್ರ ಪುರಸ್ಕೃತ **2225-00-101-0-02** | **090** | ವಿದ್ಯಾರ್ಥಿ | 136.00 | 1290 | 128.10 | 76.16 | 51.94 | 59% |

| | | | | | | | | | |
|---|---|---|---|---|---|---|---|---|---|
| **9** | ಅಂತರ್ಜಾತಿ ವಿವಾಹ ಪ್ರೋತ್ಸಾಹ ಧನ (ಕೇಂದ್ರ ಪುರಸ್ಕೃತ)<br>**2225-00-101-0-05** | **090** | ವಿದ್ಯಾರ್ಥಿ | 30.00 | 78 | 30.00 | 30.00 | - | 100% |
| **10** | ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರಿಗೆ ವಿ. ವೇತನ<br>**2225-00-101-0-85** | **090** | ವಿದ್ಯಾರ್ಥಿ | - | 0 | - | - | - | - |
| ಒಟ್ಟು ತಾಲ್ಲೂಕು ಪಂಚಾಯತ್ | | | | **1,194.53** | **19414** | **1,186.63** | **1,121.69** | **64.94** | **95%** |
| ಒಟ್ಟು ಜಿ. ಪಂ ಹಾಗೂ ತಾ. ಪಂ | | | | **2,350.85** | **22765** | **2,337.94** | **2,262.00** | **75.94** | **97%** |

*****

ಮಾಹಿತಿ ಮೂಲ : ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಕಾರವಾರ

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

## ಇಲಾಖೆಯ ಮುಖ್ಯ ಉದ್ದೇಶ :

**ರಾಜ್ಯದ ಹಿಂದುಳಿದ ವರ್ಗಗಳ ಜನಾಂಗದವರನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ ಪ್ರತ್ಯೇಕವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 1977 ರಲ್ಲಿ ಪ್ರಾರಂಭಿಸಿ ಐತಿಹಾಸಿಕ ಬದಲಾವಣೆಯ ದಿಟ್ಟ ಹೆಜ್ಜೆಯನ್ನು ಇಟ್ಟ ಕೀರ್ತಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸೇರುತ್ತದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಜನಾಂಗದವರ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಗೆ ವಿವರಿಸಿದಂತೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.**

**1) ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು:**

ಹಿಂದುಳಿದ ವರ್ಗಗಳ ಹಾಗೂ ಇತರೆ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಅವರ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಂದುವರೆಸಲು ಪ್ರೋತ್ಸಾಹಿಸುವ ಸಲುವಾಗಿ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ನಿರ್ವಹಿಸಲಾಗುತ್ತಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು 46–ಮೆಟ್ರಿಕ್ ಪೂರ್ವ ಬಾಲಕರ ಹಾಗೂ 22–ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು, 12–ಮೆಟ್ರಿಕ್ ನಂತರದ ಬಾಲಕರ ಹಾಗೂ 21–ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ನಿಲಯಾರ್ಥಿಗಳಿಗೆ ಉಚಿತ ಊಟ ಹಾಗೂ ವಸತಿ ಸೌಲಭ್ಯದ ಜೊತೆ ಸಮವಸ್ತ್ರ, ಹಾಸಿಗೆ ಹೊದಿಕೆ, ಸೋಪು, ಎಣ್ಣೆ, ಲೇಖನ ಸಾಮಗ್ರಿಗಳನ್ನು (ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾತ್ರ) ಒದಗಿಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೇತರ ಲೆಕ್ಕಶೀರ್ಷಿಕೆ:2225–00–103–0–26 ರಡಿಯಲ್ಲಿ ಒಟ್ಟು 7181 ವಿದ್ಯಾರ್ಥಿಗಳಿಗೆ ರೂ. 2343.00 ಲಕ್ಷಗಳ ಅನುದಾನವನ್ನು ಖರ್ಚು ಮಾಡಲಾಗಿದೆ.

**2) ಶುಲ್ಕ ವಿನಾಯಿತಿ:**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ನೆರವಾಗುವ ದೃಷ್ಠಿಯಿಂದ ಎಸ್.ಎಸ್.ಎಲ್.ಸಿ. ನಂತರದ ಎಲ್ಲಾ ಕೋರ್ಸುಗಳಲ್ಲಿ ವಿದ್ಯಾಭ್ಯಾಸ ಮಾಡುವ ಪ್ರವರ್ಗ–1, 2ಎ, 3ಎ, 3ಬಿ ಹಾಗೂ ಆದಾಯ ಮಿತಿಯೊಳಗಿರುವ ಸಾಮಾನ್ಯ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಪರೀಕ್ಷಾ ಶುಲ್ಕ, ಕ್ರೀಡಾ ಶುಲ್ಕ, ಗ್ರಂಥಾಲಯ ಶುಲ್ಕಗಳನ್ನು ಸರ್ಕಾರ ಕಾಲೇಜುಗಳಿಗೆ ನಿಗದಿಪಡಿಸುವ ಶುಲ್ಕದ ದರಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಯ ಕಾಲೇಜಿನ ಪ್ರಾಂಶುಪಾಲರ ಖಾತೆಗೆ ಜಮಾ ಮಾಡಲಾಗುವುದು. 2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲೆಕ್ಕಶೀರ್ಷಿಕೆ: 2225–00–103–0–28 ರಡಿಯಲ್ಲಿ ಒಟ್ಟು 24943 ವಿದ್ಯಾರ್ಥಿಗಳಿಗೆ ರೂ. 990.55 ಲಕ್ಷಗಳನ್ನು ಪಾವತಿಸಲಾಗಿದೆ.

**3) ಹೊಲಿಗೆ ತರಬೇತಿ ಕೇಂದ್ರಗಳು:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಜಿಲ್ಲೆಯಲ್ಲಿ 02 ಹೊಲಿಗೆ ತರಬೇತಿ ಕೇಂದ್ರಗಳನ್ನು ಹಳಿಯಾಳ ಹಾಗೂ ಹೊನ್ನಾವರ ತಾಲೂಕುಗಳಲ್ಲಿ ನಡೆಸಲಾಗುತ್ತಿದ್ದು, ಆರ್ಥಿಕವಾಗಿ ಅತೀ ಹಿಂದುಳಿದ ಮಹಿಳೆಯರಿಗೆ ಹಾಗೂ ವಿಧವಾ ಮಹಿಳೆಯರಿಗೆ ಹೊಲಿಗೆ ತರಬೇತಿಯನ್ನು ನೀಡಿ ಅವರ ಜೀವನ ಮಟ್ಟವನ್ನು ಸುಧಾರಿಸಿಕೊಂಡು ಸ್ವಯಂ ಉದ್ಯೋಗ ಮಾಡಲು ಅವಕಾಶ ಮಾಡಿಕೊಡಲಾಗುತ್ತಿದೆ. ಇದು ಒಂದು ವರ್ಷದ ತರಬೇತಿಯಾಗಿದ್ದು, ತರಬೇತಿ ಅವಧಿಯಲ್ಲಿ ಮಾಸಿಕ ರೂ.300/– ಗಳ ತರಬೇತಿ ಭತ್ಯೆಯನ್ನು ಹಾಗೂ

ತರಬೇತಿಗೆ ಬೇಕಾಗುವ ಪರಿಕರಗಳನ್ನು ಒದಗಿಸಲಾಗುತ್ತಿದೆ. ವಾರ್ಷಿಕವಾಗಿ ಪರೀಕ್ಷೆಗಳನ್ನು ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಉಚಿತವಾಗಿ ಹೊಸ ಹೊಲಿಗೆ ಯಂತ್ರವನ್ನು ಇಲಾಖೆಯಿಂದ ನೀಡಲಾಗುತ್ತಿದೆ. ಕಳೆದ ವರ್ಷದಲ್ಲಿ ಎರಡೂ ತರಬೇತಿ ಕೇಂದ್ರಗಳಲ್ಲಿ 40 ಅಭ್ಯರ್ಥಿಗಳಿಗೆ ರೂ.10.34 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

**4) ಕಾನೂನು ಪದವೀಧರರಿಗೆ ಸ್ಟೈಫಂಡ್:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಾಲ್ಕು ವರ್ಷದ ಕಾನೂನು ಪದವಿ ಪೂರೈಸಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಕೀಲಿ ವೃತ್ತಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಕುಟುಂಬದ ವಾರ್ಷಿಕ ಆದಾಯ ಪ್ರವರ್ಗ–1 ರ ಅಭ್ಯರ್ಥಿಗಳಿಗೆ ರೂ.3.5 ಲಕ್ಷ ಹಾಗೂ ಪ್ರವರ್ಗ–2ಎ, 3ಎ, 3ಬಿ ಅಭ್ಯರ್ಥಿಗಳಿಗೆ ರೂ.2.5 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಪ್ರವರ್ಗ–1 ರ ಅಭ್ಯರ್ಥಿಗಳ ಗರಿಷ್ಠ ವಯೋಮಿತಿ 31 ಹಾಗೂ ಇತರರಿಗೆ 30 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ.ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೋಂದಾಯಿಸಿರಬೇಕು. 20 ವರ್ಷಗಳ ವಕೀಲಿ ವೃತ್ತಿಯಲ್ಲಿ ಸೇವೆ ಸಲ್ಲಿಸಿದ ಹಿರಿಯ ವಕೀಲರು/ಸರ್ಕಾರಿ ವಕೀಲರು/ಯಾವುದೇ ಹಿರಿಯ ವಕೀಲರಿಂದ ತರಬೇತಿಯನ್ನು ನೀಡಲಾಗುವುದು. ವಾರ್ಷಿಕ ಗುರಿ 25 ಇದ್ದು, ಜಿಲ್ಲಾ ಪಂಚಾಯತ್ ಲೆಕ್ಕಶೀರ್ಷಿಕೆ: 2225–00–103–0–58 ರಡಿಯಲ್ಲಿ ಅನುದಾನವನ್ನು ಒದಗಿಸಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಮಾಸಿಕ ರೂ.4000/– ರಂತೆ ತರಬೇತಿ ಭತ್ಯೆಯನ್ನು ನೀಡಲಾಗುವುದು. ಕಳೆದ ವರ್ಷದಲ್ಲಿ 25 ಅಭ್ಯರ್ಥಿಗಳಿಗೆ ರೂ.12.84 ಲಕ್ಷ ಅನುದಾನವನ್ನು ಈ ಯೋಜನೆಯಲ್ಲಿ ಖರ್ಚು ಮಾಡಲಾಗಿದೆ.

**5) ಮೆಟ್ರಿಕ್ ಪೂರ್ವ ಶಿಷ್ಯವೇತನ:**

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ, 3ಬಿ ಗಳಿಗೆ ಸೇರಿದ ವಾರ್ಷಿಕ ಆದಾಯ ಪ್ರವರ್ಗ–1 ರ ಅಭ್ಯರ್ಥಿಗಳಿಗೆ ರೂ.1.00 ಲಕ್ಷ, 2ಎ, 3ಎ, 3ಬಿ ಗಳಿಗೆ ರೂ. 44500/– ನಿಗದಿಪಡಿಸಲಾಗಿದೆ. ಜಿಲ್ಲಾ ಪಂಚಾಯತ್ 2225–00–103–0–66 ರಡಿಯಲ್ಲಿ ಹಾಗೂ ರಾಜ್ಯವಲಯ ಲೆಕ್ಕಶೀರ್ಷಿಕೆಯಡಿ 2225–03–277–2–52 ರಡಿಯಲ್ಲಿ ಶಿಷ್ಯವೇತನ ಮಂಜೂರಿ ಮಾಡಲಾಗುತ್ತಿದೆ.

2018–19 ನೇ ಸಾಲಿನಲ್ಲಿ ಒಟ್ಟು 81230 ವಿದ್ಯಾರ್ಥಿಗಳಿಗೆ ರೂ.682.73 ಲಕ್ಷಗಳ ವಿದ್ಯಾರ್ಥಿವೇತನವನ್ನು ಮಂಜೂರಿಸಲಾಗಿದೆ.

**6) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:**

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಹತ್ತನೇ ತರಗತಿ ನಂತರದ ಎಲ್ಲಾ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ, 3ಬಿ ಗಳಿಗೆ ಸೇರಿದ ವಾರ್ಷಿಕ ಆದಾಯ ಪ್ರವರ್ಗ–1 ರ ಅಭ್ಯರ್ಥಿಗಳಿಗೆ ರೂ. 2.50 ಲಕ್ಷ, 2ಎ, 3ಎ, 3ಬಿ ಗಳಿಗೆ ರೂ. 1.00 ಲಕ್ಷ ನಿಗದಿಪಡಿಸಲಾಗಿದೆ. ಜಿಲ್ಲಾ ಪಂಚಾಯತ್ ಲೆಕ್ಕಶೀರ್ಷಿಕೆಯಡಿ; 2225–00–103–0–66 ರಡಿಯಲ್ಲಿ ಹಾಗೂ ರಾಜ್ಯವಲಯ ಲೆಕ್ಕಶೀರ್ಷಿಕೆಯಡಿ:2225–03–277–2–51 ರಡಿಯಲ್ಲಿ ಶಿಷ್ಯವೇತನ ಮಂಜೂರಿ ಮಾಡಲಾಗುತ್ತಿದೆ.

**2018–19 ನೇ ಸಾಲಿನಲ್ಲಿ ಜಿಲ್ಲಾವಲಯ ಹಾಗೂ ರಾಜ್ಯವಲಯ ಲೆಕ್ಕಶೀರ್ಷಿಕೆಯಡಿಯಲ್ಲಿ ಒಟ್ಟು 15042 ವಿದ್ಯಾರ್ಥಿಗಳಿಗೆ ರೂ. 291.5 ಲಕ್ಷಗಳ ವಿದ್ಯಾರ್ಥಿವೇತನವನ್ನು ಮಂಜೂರಿಸಲಾಗಿದೆ.**

| ತಾಲೂಕಾವಾರು ಮಂಜೂರಾತಿ ವಿವರ | | | |
|---|---|---|---|
| ಕ್ರ.ಸಂ. | ತಾಲೂಕು | ಮಂಜೂರಾತಿ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ |
| 1 | ಕಾರವಾರ | 3905000 | 1941 |
| 2 | ಹೊನ್ನಾವರ | 4109000 | 2171 |
| 3 | ಹಳಿಯಾಳ | 3811000 | 1756 |
| 4 | ಶಿರಸಿ | 4300000 | 2186 |
| 5 | ಜೋಯಿಡಾ | 462000 | 282 |
| 6 | ಭಟ್ಕಳ | 2307000 | 1160 |
| 7 | ಸಿದ್ಧಾಪುರ | 1670000 | 921 |
| 8 | ಯಲ್ಲಾಪುರ | 701000 | 382 |
| 9 | ಮುಂಡಗೋಡ | 948000 | 525 |
| 10 | ಅಂಕೋಲಾ | 2761000 | 1517 |
| 11 | ಕುಮಟಾ | 4131000 | 2201 |
| | **ಒಟ್ಟು** | **29115000** | **15042** |

## 7. ವಿದ್ಯಾಸಿರಿ – ಊಟ ಮತ್ತು ವಸತಿ ಸಹಾಯಯೋಜನೆ:

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಈ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ಸರ್ಕಾರಿ/ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿನಿಲಯದ ಸೌಲಭ್ಯ ಸಿಗದೇ ಇರುವ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಮಾಸಿಕ ರೂ.1500/– ರಂತೆ 10 ತಿಂಗಳ ಅವಧಿಗೆ ಮಂಜೂರಿಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ ಒಟ್ಟು 2914 ವಿದ್ಯಾರ್ಥಿಗಳಿಗೆ ರೂ.207.48 ಲಕ್ಷಗಳ ಅನುದಾನವನ್ನು ಮಂಜೂರಿ ಮಾಡಲಾಗಿದೆ.

## 8) ಡಿ ದೇವರಾಜ ಅರಸು ಪ್ರತಿಭಾ ಪುರಸ್ಕಾರ

ಎಸ್.ಎಸ್.ಎಲ್.ಸಿ, ದ್ವಿತೀಯ ಪಿ.ಯು.ಸಿ, ಅಂತಿಮ ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 90 ಹಾಗೂ ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರವನ್ನು ಆನ್‌ಲೈನ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು ಈ ಕೆಳಗಿನಂತೆ ಕೋರ್ಸ್‌ವಾರು ಮೊತ್ತವನ್ನು ನಿಗದಿಪಡಿಸಿದೆ.

| ತರಗತಿ | ಕೋರ್ಸುಗಳ ವಿವರ | ಮೊತ್ತ |
|---|---|---|
| 1. | ಎಸ್.ಎಸ್.ಎಲ್.ಸಿ | 10,000/- |
| 2. | ದ್ವಿತೀಯ ಪಿ.ಯು.ಸಿ | 15,000/- |
| 3. | ಅಂತಿಮ ಪದವಿ/ಸ್ನಾತಕೋತ್ತರ ಪದವಿ | 20,000/- |
| 4. | ಅಂತಿಮ ವೃತ್ತಿಪರ ಸ್ನಾತಕೋತ್ತರ ಪದವಿ | 25,000/- |

**2018-19 ನೇ ಸಾಲಿನಲ್ಲಿಒಟ್ಟು 65 ವಿದ್ಯಾಥಿಗಳಿಗೆ 10.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದೆ.**

**9) ಪ್ರೋತ್ಸಾಹಧನ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ನಿಲಯಾರ್ಥಿಗಳಾಗಿ ವ್ಯಾಸಾಂಗ ಮಾಡಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 60 ಹಾಗೂ ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾಥಿಗಳಿಗೆ ಪ್ರೋತ್ಸಾಹಧನವನ್ನು ಮಂಜೂರು ಮಾಡಲಾಗುತ್ತಿದ್ದು, 2018-19 ನೇ ಸಾಲಿನಲ್ಲಿ ಒಟ್ಟು 1213 ವಿದ್ಯಾರ್ಥಿಗಳಿಗೆ 20.22 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿದೆ.

**2018-19 ನೇ ಸಾಲಿನ ಜಿಲ್ಲಾ ಪಂಚಾಯತ್ ಹಾಗೂ ತಾಲೂಕಾ ಪಂಚಾಯತ್ ಕಾರ್ಯಕ್ರಮಗಳಲ್ಲಿ ಲೆಕ್ಕಶೀರ್ಷಿಕೆವಾರು ವಿವರ.**

| ಕ್ರ.ಸಂ. | ಕಾರ್ಯಕ್ರಮದ/ಲೆಕ್ಕಶಿರ್ಷಿಕೆ | ಬಿಡುಗಡೆ ಮೊತ್ತ | ಖರ್ಚು | ಶೇಕಡಾ | ಭೌತಿಕ | | |
|---|---|---|---|---|---|---|---|
| | | | | | ಗುರಿ | ಸಾಧನೆ | ಶೇಕಡಾ |
| 1 | 2 | 3 | 4 | 5 | 6 | 7 | 8 |
| ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು | | | | | | | |
| 1 | ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-103-0-26 | 2343.00 | 2186.00 | 98.56% | 5656 | 5123 | 90.57% |
| 2 | ಇತರೆ ಹಿಂದುಳಿದ ವರ್ಗಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯತಿ ನೀಡಿಕೆ 2225-00-103-00-28 | 978.25 | 977.55 | 99.92% | 30000 | 24661 | 82.20% |
| 3 | ಕಾರ್ಯನಿರ್ವಾಹಕ ಸಿಬ್ಬಂದಿ 2225-00-103-0-39 | 53.00 | 51.04 | 96.32% | 15 | 6 | 40.00% |
| 4 | ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40 | 63.83 | 63.83 | 100% | 28 | 28 | 100 |
| 5 | ಆಶ್ರಮ ಶಾಲೆಗಳು, 2225-00-103-0-41 | 0.00 | 0.00 | 0.00 | 0 | 0 | 0 |
| 6 | ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ ಮತ್ತು ಹೊಸ ಕೇಂದ್ರಗಳ ಪ್ರಾರಂಭ2225-00-103-0-53 | 0.00 | 0.00 | 0.00 | 0 | 0 | 0 |

| | | | | | | | |
|---|---|---|---|---|---|---|---|
| 7 | ಡಿ.ದೇವರಾಜ ಅರಸು ಜನ್ಮ ದಿನಾಚರಣೆ 2225-00-103-0-56 | 1.00 | 0.46 | 54.00% | 1 | 1 | 100% |
| 8 | ವಕೀಲರಿಗೆ ಶಿಷ್ಯವೇತನ 2225-00-103-0-58 | 19.20 | 12.84 | 66.85% | 25 | 25 | 100% |
| | **ಒಟ್ಟು** | **3458.28** | **3415.09** | **98.75%** | **35725** | **29844** | **83.45%** |
| | **ತಾಲೂಕಾ ಪಂಚಾಯತ್ ಕಾರ್ಯಕ್ರಮಗಳು** | | | | | | |
| 9 | ಹಿಂದುಳಿದ ವರ್ಗ ವಿದ್ಯಾರ್ಥಿ ವೇತನ ನೀಡಿಕೆ 2225-00-103-0-66 | 267.70 | 267.70 | 100% | 20000 | 20000 | 100% |
| 10 | ಮೆಟ್ರಿಕ ಪೂರ್ವ ಮತ್ತು ಮೆಟ್ರಿಕ ನಂತರದ ವಿದ್ಯಾರ್ಥಿನಿಲಯಗಳ ಸುಧಾರಣೆ 2225-00-103-0-72 | 30.00 | 30.00 | 100.0% | 25 | 25 | 100% |
| 11 | ಹಿಂದುಳಿದ ವರ್ಗಗಳ ತಾಲೂಕು ವಿಸ್ತರಣಾಧಿಕಾರಿಗಳು 2225-00-103-0-74 | 100.97 | 89.39 | 88.53% | 11 | 8 | 72.72% |
| 12 | ಹೊಲಿಗೆ ತರಬೇತಿ ಕೇಂದ್ರಗಳು, 2225-00-103-0-78 | 10.34 | 10.34 | 100% | 40 | 40 | 100% |
| 13 | ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಗಳು (ಈ.ಬಿ.ಎಲ್) 2225-00-103-0-79 | 28.60 | 10.23 | 70.73% | 1200 | 1117 | 93.08% |
| | **ಒಟ್ಟು** | **437.61** | **417.66** | **95.44%** | **21276** | **21190** | **99.59%** |

ಈ ಮೇಲಿನಂತೆ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗೆ ರೂ.3458.28 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಲ್ಲಿ ಶೇಕಡ 98.75%ರಷ್ಟು ಪ್ರಗತಿ ಸಾಧಿಸಿದ್ದು, 29844 ಫಲಾನುಭವಿಗಳಿಗೆ ರೂ. 3415.09 ಲಕ್ಷಗಳ ಅನುದಾನವನ್ನು ಉಪಯೋಗಿಸಲಾಗಿದೆ.

ತಾಲೂಕಾ ಪಂಚಾಯತ್ ಕಾರ್ಯಕ್ರಮಗಳಿಗೆ ರೂ. 437.61 ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ತಾಲೂಕಾ ಪಂಚಾಯತ್ ಕಾರ್ಯಕ್ರಮಗಳಲ್ಲಿ ಶೇಕಡ 95.44% ರಷ್ಟು ಪ್ರಗತಿ ಸಾಧಿಸಿದ್ದು, 21190 ಫಲಾನುಭವಿಗಳಿಗೆ ರೂ. 417.66 ಲಕ್ಷಗಳ ಅನುದಾನವನ್ನು ಉಪಯೋಗಿಸಲಾಗಿದೆ.

*****

ಮಾಹಿತಿ ಮೂಲ : ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕಾರವಾರ

# ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಸಾಮಾಜಿಕ ಅಸಮತೋಲನವನ್ನು ಹೋಗಲಾಡಿಸಿ ಎಲ್ಲಾ ನಾಗರಿಕರಿಗೂ ಸಮಾನ ಅವಕಾಶ ಹಕ್ಕು ಇಲಾಖೆಯ ಉದ್ದೇಶದಿಂದ ಭಾರತದ ಸಂವಿಧಾನವು ಪರಿಶಿಷ್ಟ ವರ್ಗದವರಿಗೆ ಸಂವಿಧಾನಾತ್ಮಕ ರಕ್ಷಣೆ ಒದಗಿಸಿದೆ. ಕೆಲವು ವಿಶೇಷ ಹಕ್ಕು ನೀಡಿದೆ. ಪರಿಶಿಷ್ಟ ವರ್ಗದವರ ಸರ್ವತೋಮುಖ ಪ್ರಗತಿಗೆ ಕರ್ನಾಟಕ ಸರ್ಕಾರವು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಕೈಗೊಳ್ಳುತ್ತಲಿದೆ.

2011 ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 34239 ಪರಿಶಿಷ್ಟ ವರ್ಗದ ಜನಸಂಖ್ಯೆ ಇರುತ್ತದೆ. ತಲೆತಲಾಂತರಗಳಿಂದ ಶೋಷಣೆಯೊಳಪಟ್ಟು ಸಹಜವಾಗಿಯೇ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ವರ್ಗದ ಜನರ ಉನ್ನತಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಈ ಕೆಳಗೆ ನಮೂದಿಸಿದಂತೆ ಶೈಕ್ಷಣಿಕ ಕಾರ್ಯಕ್ರಮಗಳು, ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮಗಳು ಮತ್ತು ಇತರೆ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದೆ.

**1) ಶೈಕ್ಷಣಿಕ ನೆರವಿನ ಯೋಜನೆಗಳು:** ಪರಿಶಿಷ್ಟ ವರ್ಗದವರ ಜನರ ಶೈಕ್ಷಣಿಕ ಅಭಿವೃದ್ಧಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಈ ಕೆಳಗಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

**2) ವಿದ್ಯಾರ್ಜನೆಗೆ ಉತ್ತೇಜನ:**

1) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ. 2) ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಪರಿಶಿಷ್ಯ ಪಂಗಡದ ವಿದ್ಯಾರ್ಥಿ/ ವಿದ್ಯಾರ್ಥಿನಯರಿಗೆ ಪ್ರೋತ್ಸಾಹಧನ, 3) ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, 4) ಎಂಪಿಲ್.ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಧನಸಹಾಯ, 5) ರ್‍ಯಾಂಕ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ, 6) ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ. 7) ವಿದೇಶ ವಿಶ್ವ ವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಧನ ಸಹಾಯ, 8) ಪುಸ್ತಕ ಭಂಡಾರ, 9) ಅಧ್ಯಯನ ಪ್ರವಾಸಕ್ಕೆ ನೆರವು, 10) ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಲ್ಲಿ ತರಬೇತಿ, 11) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ, 12) ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ, 13) ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ಧನಸಹಾಯ, 14) ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ, 15) ಆಶ್ರಮ ಶಾಲೆಗಳು.

**3) ಉದ್ಯೋಗ ಮತ್ತು ತರಬೇತಿ:**

ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಯುವ ಜನರಿಗೆ ಉದ್ಯೋಗ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ ಈ ಕೆಳಗಿನ ತರಬೇತಿಗಳನ್ನು ನೀಡಲಾಗಿದೆ.

1) ಸ್ವಯಂ ಉದ್ಯೋಗ ಕೈಗೊಳ್ಳಲು ವೃತ್ತಿ ತರಬೇತಿ ಕಾರ್ಯಕ್ರಮ, 2)ಕಾನೂನು ಪದವೀಧರರಿಂದ ಸಹಾಯಧನ, 3) ಕಾನೂನು ಪದವೀಧರರಿಗೆ ತರಬೇತಿ, ಶಿಷ್ಟವೇತನ, 4) ಜಿ.ಎಸ್.ಎಮ್. ನರ್ಸಿಂಗ್ ತರಬೇತಿ.

**4) ಸಾಮಾಜಿಕ ಮತ್ತು ಆರ್ಥಿಕ ನೆರವಿನ ಪಡೆಮಿತಿ ಹಾಗೂ ಸ್ಟೈಪೆಂಡ್ ಮಂಜೂರಾತಿ, ಜಿ.ಎನ್.ಎಮ್. ನರ್ಸಿಂಗ್ ಕೋರ್ಸ್ ಯೋಜನೆಗಳು:**

ಪರಿಶಿಷ್ಟ ವರ್ಗದ ಜನರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಅಸ್ಪಶ್ಯತಾ ನಿವಾರಣಾ ಕಾರ್ಯಕ್ರಮಕ್ಕಾಗಿ ಅಂತರಜಾತಿ ವಿವಾಹವಾದ ದಂಪತಿಗಳಿಗೆ ಪ್ರೋತ್ಸಾಹಧನ, ದೌರ್ಜನ್ಯಕ್ಕೆ ಒಳಪಟ್ಟ ಪ.ವರ್ಗದ ಸಂತ್ರಸ್ಥರಿಗೆ ಪರಿಹಾರ ಧನ ಮತ್ತು ದೌರ್ಜನ್ಯದಲ್ಲಿ ಮೃತಪಟ್ಟ ಕುಟುಂಬದವರೊಬ್ಬರಿಗೆ ಪರಿಹಾರ ಧನ ಮಂಜೂರಿಸಲಾಗುತ್ತದೆ. ಪರಿಶಿಷ್ಟ ಪಂಗಡದ ಸಮುದಾಯದವರು ಅಂತರಜಾತಿ ವಿವಾಹವಾದಲ್ಲಿ ಪುರುಷರಿಗೆ ರೂ.2.00 ಲಕ್ಷ ಮಹಿಳೆಯರಿಗೆ ರೂ.3.00 ಲಕ್ಷ ಪ್ರೋತ್ಸಾಹಧನ ಮಂಜೂರಿಸಲಾಗುತ್ತದೆ.

**5) ಗಿರಿಜನ ಉಪಯೋಜನೆ:**

ಪರಿಶಿಷ್ಟ ವರ್ಗದವರ ಸರ್ವಾಂಗೀಣ ಅಭಿವೃದ್ಧಿಗಾಗಿ ವಿವಿಧ ಅಭಿವೃದ್ಧಿ ಇಲಾಖೆಗಳು, ನಿಗಮಗಳು ಮುಂತಾದವುಗಳ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮಗಳನ್ನು ಕೃಷಿ ಇಲಾಖೆ, ತೊಟಗಾರಿಕೆ, ಪಶುಸಂಗೋಪನೆ, ಜಲಾನಯನ ಇಲಾಖೆ, ತಾಲ್ಲೂಕು ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಇತ್ಯಾದಿಗಳ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**9) ಅರಣ್ಯ ಹಕ್ಕು ಕಾಯಿದೆ ಅನುಷ್ಠಾನ:**

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು "ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007 ರ 2) ಮತ್ತು ನಿಯಮಗಳು–2008 (ನಿಯಮಗಳ ತಿದುಪಡಿ–2012)" ಕಾಯಿದೆ ಅನುಷ್ಠಾನ ನೋಡೆಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

| ಕ್ರ. ಸಂ. | ಲೆಕ್ಕ ಶೀರ್ಷಿಕೆ ಹಾಗೂ ಕಾರ್ಯಕ್ರಮಗಳ ಹೆಸರು | 2018–19ನೇ ಸಾಲಿಗೆ ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ಹಿಂದಿನ ತಿಂಗಳ ಅಂತ್ಯದವರೆಗೆ ಖರ್ಚಾದ ಅನುದಾನ | ಹಾಲಿ ತಿಂಗಳಲ್ಲಿ ಖರ್ಚಾದ ಅನುದಾನ | ಒಟ್ಟು ಖರ್ಚಾದ ಅನುದಾನ | ಭೌತಿಕ ಗುರಿ | ಭೌತಿಕ ಸಾಧನೆ | ಶೇ. ಸಾಧನೆ ಬಿಡುಗಡೆ | ವಿದ್ಯಾರ್ಥಿ | | | |
|---|---|---|---|---|---|---|---|---|---|---|---|---|---|
| | | | | | | | | | | ಗುರಿ | ಸಾಧನೆ | ಗುರಿ | ಸಾಧನೆ |
| | | | | | | | | | | | | | |
| | ಅ) ಜಿಲ್ಲಾ ಪಂಚಾಯತ ಯೋಜನೇತರ ಕಾರ್ಯಕ್ರಮಗಳು | | | | | | | | | | | | |
| 1 | ಪ.ಪಂ.ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225–00–102–0–33 (ವೇ)(ಅಬ್ಬೇಕ್ಟಿವ್ ಕೋಡ್ – 001) | 33.32 | 33.31 | 26.003 | 2.22 | 28.223 | 60 | 60 | 84.73 | 60 | 60 | | |
| 2 | ವಿದ್ಯಾರ್ಥಿ ವೇತನ & ಧನ ಸಹಾಯ 2225–00–102–0–38 | 60.00 | 60.00 | 38.00 | 0.00 | 38.00 | 93 | 71 | 63.33 | 153 | 153 | | |
| | (ಗಿಉಯೋ)(ಅಬ್ಬೇಕ್ಟಿವ್ ಕೋಡ್ –090) | | | | | | | | | | | | |
| 3 | ಪ.ಪಂ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225–00–102–0–31 | 20.90 | 20.90 | 20.90 | 0.00 | 20.90 | 120 | 120 | 100 | 120 | 120 | | |
| 4 | 2225–00–102–0–35 ಸರಕಾರಿ ಪ.ವರ್ಗಗಳ ವಸತಿ ಶಾಲೆ | 20.92 | 20.92 | 16.91 | 3.95 | 20.86 | 125 | 125 | 100.00 | 125 | 125 | | |
| | **ಒಟ್ಟು** | **135.14** | **135.13** | **101.813** | **6.17** | **107.983** | **0** | **0.00** | **79.91** | **458** | **458** | | |

| | | | | | | | | | | | | | |
|---|---|---|---|---|---|---|---|---|---|---|---|---|---|
| | ಅ) ತಾಲೂಕ ಪಂಚಾಯತ ಯೋಜನೇತರ ಕಾರ್ಯಕ್ರಮಗಳು | | | | | | | | | | | | |
| 1 | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 2225–00–102–0–68 | 40.02 | 40.02 | 40.02 | 0.00 | 40.02 | 5510 | 5510 | 100 | 5510 | 5510 | | |
| | (ಗಿಉಯೋ)(ಅಬ್ಜೆಕ್ಟಿವ್ ಕೋಡ್ –117) | | | | | | | | | | | | |
| 2 | ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ 2225–00–102–0–69 | 4.00 | 4.00 | 2.75 | 1.25 | 4.00 | 8 | 8 | 100 | 0 | 0 | | |
| | (ಗಿಉಯೋ)(ಅಬ್ಜೆಕ್ಟಿವ್ ಕೋಡ್ –090) | | | | | | | | | | | | |
| 3 | ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸಹಾಯ 2225–00–102–0–70 | 2.00 | 2.00 | 1.00 | 1.00 | 2.00 | 4 | 4 | 100 | 0 | 0 | | |
| 4 | ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಯೋಜನೆ ಮತ್ತು ವಸತಿ ವೆಚ್ಚಗಳು 2225–00–102–0–71 | 15.00 | 15.00 | 10.00 | 0.00 | 10.00 | 100 | 20 | 67 | 100 | 100 | | |
| | **ಒಟ್ಟು** | **61.02** | **61.02** | **53.77** | **2.25** | **56.02** | **0** | **0** | **92** | **5510** | **5510** | | |
| | ಆ) ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳು | | | | | | | | | | | | |
| | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 2225–00–102–0–67 | 61.40 | 61.40 | 11.40 | 50.00 | 61.40 | 848 | 848 | 100 | 848 | 848 | | |
| | ಕೇಂದ್ರ ಪುರಸ್ಕೃತ ಯೋಜನೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 2225–00–102–0–69 | 10.75 | 10.75 | 10.75 | 0.00 | 10.75 | 500 | 500 | 100 | 500 | 500 | | |
| | **ಒಟ್ಟು** | **72.15** | **72.15** | **22.15** | **50.00** | **72.15** | **0** | **0** | **100** | **1348** | **1348** | | |
| | **ಒಟ್ಟು : (ಅ & ಆ)** | **268.31** | **268.30** | **177.73** | **58.42** | **236.15** | **0.00** | **0.00** | **88.02** | **7316** | **7316** | | |

*****

ಮಾಹಿತಿ ಮೂಲ : ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ, ಕಾರವಾರ

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಸಬಲೀಕರಿಸುವ ಸಲುವಾಗಿ ಹಾಗೂ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗವು 1994ರಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 1986ರಲ್ಲಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು 1999-2000ರಲ್ಲಿ ಅಸ್ಥಿತ್ವಕ್ಕೆ ಬಂದಿರುತ್ತದೆ.

ಕರ್ನಾಟಕದಲ್ಲಿ ಮುಸ್ಲಿಂ, ಕ್ರಿಶ್ಚನ, ಜೈನ, ಬೌದ್ಧ, ಸಿಖ್ ಹಾಗೂ ಪಾರ್ಸಿ ಜನಾಂಗದವರನ್ನು ಮತೀಯ ಅಲ್ಪಸಂಖ್ಯಾತರೆಂದು ಗುರುತಿಸಲಾಗಿದೆ. ಸದರಿ ಅಲ್ಪಸಂಖ್ಯಾತರರನ್ನು ಪ್ರವರ್ಗ-1, ಪ್ರವರ್ಗ- 2ಎ, ಪ್ರವರ್ಗ-2ಬಿ ಹಾಗೂ ಪ್ರವರ್ಗ-3ಬಿಗಳಿಗೆ ವರ್ಗೀಕರಿಸಲಾಗಿದೆ.

**ಸರಕಾರವು ಅಲ್ಪಸಂಖ್ಯಾತರಿಗಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.**

**ಮೊರಾರ್ಜಿ ದೇಸಾಯಿ ವಸತಿ ಶಾಲೆ :**

I. ಹಳಿಯಾಳ ತಾಲೂಕಾ ದಾಂಡೇಲಿ ಪಟ್ಟಣದಲ್ಲಿ 250 ಸಂಖ್ಯಾಬಲದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ 2005-06ನೇ ಸಾಲಿನಿಂದ ಅಂಬೇವಾಡಿಯ ಕೆ.ಪಿ.ಸಿ ಯ ಹಳೆ ಆಡಳಿತ ಕಛೇರಿಯಲ್ಲಿ ಉಚಿತವಾಗಿ ನಡೆಯುತ್ತಿದೆ. ಸದ್ರಿ ಕಟ್ಟಡದಲ್ಲಿ ಸ್ಥಳವಕಾಶ ಕಡಿಮೆ ಇರುವುದರಿಂದ ವಿದ್ಯಾರ್ಥಿಗಳಿಗೆ ವಾಚನಾಲಯ ಪ್ರಯೋಗಾಲಯ, ಆಟದ ಮೈದಾನ, ಸರಿಯಾದ ಮೂಲಭೂತ ಸೌಕರ್ಯ ಓದಗಿಸಲು ಸಾಧ್ಯವಾಗಿಲ್ಲ. ಈ ಕಟ್ಟಡದ ಹಿಂದೆ ಅಂಬೇವಾಡಿ ಬ್ಲಾಕ್ ನಂ.19 ರಲ್ಲಿ 3-0-0 (ಎ.ಗು.ಆ) ಸರಕಾರಿ ಜಮೀನು ಮಾನ್ಯ ಜಿಲ್ಲಾಧಿಕಾರಿಯವರು ಮಂಜೂರು ಮಾಡಿರುತ್ತಾರೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಬಾಲಕಿಯರಿಗೆ ಸಂಬಂದಿಸಿದ ನಿಲಯದ ಕಟ್ಟಡವು ಪೂರ್ಣಗೊಂಡಿದ್ದು, ಕಟ್ಟಡಕ್ಕೆ ಸುಣ್ಣ-ಬಣ್ಣ, ವಿದ್ಯುತ್ ಉಪಕರಣ, ಟೈಲ್ಸ್ ಹಾಗೂ ಕಿಟಕಿ ಬಾಗಿಲುಗಳನ್ನು ಅಳವಡಿಸುವುದು ಬಾಕಿ ಇರುತ್ತದೆ. ಬಾಲಕರ ವಸತಿ ನಿಲಯದ ಕೆಳ ಅಂತಸ್ತಿನ ಕಾಮಗಾರಿಯು ಪೂರ್ಣಗೊಂಡಿದ್ದು, ಮೊದಲ ಅಂತಸ್ತಿನ ಕಾಮಗಾರಿಯು ಪ್ರಗತಿಯಲ್ಲಿದೆ. 2018-19ನೇ ಸಾಲಿಗೆ 167 ವಿದ್ಯಾರ್ಥಿಗಳು ಮಾತ್ರ ವಸತಿ ಶಾಲೆಯಲ್ಲಿ ಪ್ರವೇಶ ಪಡೆದಿರುತ್ತಾರೆ. ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಹೌಸಿಂಗ್ ಬೋರ್ಡರವರಿಗೆ ವಹಿಸಲಾಗಿರುತ್ತದೆ.

**ಅಲ್ಪಸಂಖ್ಯಾತರ ವಸತಿ ನಿಲಯಗಳು :**

I. 2013-14 ನೇ ಸಾಲಿನಿಂದ ಸಿರ್ಸಿ ತಾಲೂಕಿನ ಟೌನದಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ ನಂತರ ಬಾಲಕರ ನಿಲಯ ನಡೆಸಲು ಸೂಕ್ತ ಬಾಡಿಗೆ ಕಟ್ಟಡ ಪಡೆಯಲಾಗಿದ್ದು, ಅಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನಿಲಯ ನಡೆಸಲಾಗುತ್ತಿದೆ. ಸದ್ರಿ ನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸಿರ್ಸಿ ಪಟ್ಟಣದ ಆರ್.ಟಿ.ಓ. ಕಛೇರಿ ಹತ್ತಿರ 0-10-0 ಗುಂಟೆ ನಿವೇಶನ ಒದಗಿಸಲಾಗಿರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳು ಕಟ್ಟಡ ಕಾಮಗಾರಿ ಕೈಗೊಳ್ಳಲು ಜಿಲ್ಲಾ ನಿರ್ಮಿತಿ ಕೇಂದ್ರ ಕಾರವಾರ ರವರಿಗೆ ಕಟ್ಟಡ ನಿರ್ಮಾಣದ ಅಂದಾಜು ವೆಚ್ಚ ರೂ.99.99 ಲಕ್ಷವಾಗಿರುತ್ತದೆ. ಇದರಲ್ಲಿ ರೂ.75.00 ಲಕ್ಷಗಳನ್ನು ಜಿಲ್ಲಾ ನಿರ್ಮಿತಿ ಕೇಂದ್ರ ಕಾರವಾರರವರಿಗೆ ಬಿಡುಗಡೆ ಮಾಡಲಾಗಿದೆ. ಕಟ್ಟಡ ನಿರ್ಮಾಣದ ಕಾಮಗಾರಿಯು ಪ್ರಾರಂಭಿಸಿರುತ್ತಾರೆ.

II. ಸರಕಾರವು ಹಿಂದುಳಿದ ಹಾಗೂ ಅತೀ ಹಿಂದುಳಿದ ತಾಲೂಕುಗಳಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ ನಂತರದ ಬಾಲಕರ ವಸತಿ ನಿಲಯ ಪ್ರಾರಂಭಿಸಲು ಅನುಮತಿ ನೀಡಿದೆ. ಅದರಂತೆ ಜಿಲ್ಲೆಯ ಭಟ್ಕಳ ಹಾಗೂ ಕಾರವಾರ

ತಾಲೂಕಿಗೆ 50 ಸಂಖ್ಯಾಬಲದ ಅಲ್ಪಸಂಖ್ಯಾತರ ವಸತಿ ನಿಲಯ ಮಂಜೂರಾಗಿದೆ. ಈ ನಿಲಯಗಳು ಸ್ವಂತ ಕಟ್ಟಡ ಹೊಂದಲು ಮೊದಲ ಕಂತಾಗಿ ರೂ. 114.28 ಲಕ್ಷ ಬಿಡುಗಡೆ ಆಗಿರುತ್ತದೆ.

ಕಾರವಾರ ತಾಲೂಕಿನ ಶೇಜವಾಡ ಗ್ರಾಮದಲ್ಲಿ ಸದಾನಂದ ಪ್ಯಾಲೇಸ್ ಹಿಂದಗಡೆ 0–15–0 ಗುಂಟೆ ನಿವೇಶನವನ್ನು ಮಾನ್ಯ ಜಿಲ್ಲಾಧಿಕಾರಿಗಳು ಮಂಜೂರಿ ಮಾಡಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ಕಟ್ಟಡ ಕಾಮಗಾರಿ ಕೈಗೊಳ್ಳಲು ಜಿಲ್ಲಾ ನಿರ್ಮಿತಿ ಕೇಂದ್ರ ಕಾರವಾರರವರಿಗೆ ಕಟ್ಟಡ ನಿರ್ಮಾಣದ ಅಂದಾಜು ವೆಚ್ಚ ರೂ.99.99 ಲಕ್ಷವಾಗಿರುತ್ತದೆ. ರೂ.99.99 ಲಕ್ಷಗಳನ್ನು ಜಿಲ್ಲಾ ನಿರ್ಮಿತಿ ಕೇಂದ್ರ ಕಾರವಾರ ರವರಿಗೆ ಬಿಡುಗಡೆ ಮಾಡಲಾಗಿದೆ. ಕಟ್ಟಡ ನರ್ಮಾಣದ ಕಾಮಗಾರಿಯು ಪ್ರಾರಂಭಿಸಿರುತ್ತಾರೆ.

ಭಟ್ಕಳ ತಾಲೂಕಿನ ಸೂಸಗಡಿ ಗ್ರಾಮ ಆನಂದ ಆಶ್ರಮ ಹತ್ತಿರ 0–9–12 ಗುಂಟೆ ನಿವೇಶನವನ್ನು ಮಾನ್ಯ ಜಿಲ್ಲಾಧಿಕಾರಿಗಳು ಮಂಜೂರಿ ಮಾಡಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ಕಟ್ಟಡ ಕಾಮಗಾರಿ ಕೈಗೊಳ್ಳಲು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ವಿಭಾಗ ಕಾರವಾರ ರವರಿಗೆ ಕಟ್ಟಡ ನಿರ್ಮಾಣದ ಅಂದಾಜು ರೂ.240.00 ಲಕ್ಷವಾಗಿರುತ್ತದೆ. ಇದರಲ್ಲಿ ರೂ.57.14 ಲಕ್ಷ ಕಾಮಗಾರಿ ಕೈಗೊಳ್ಳುವ ಸಂಸ್ಥೆಯವರಿಗೆ ನೀಡಲಾಗಿದೆ. ಟೆಂಡರ ಪ್ರಕ್ರಿಯೆ ಪ್ರಗತಿಯಲ್ಲಿದೆ.

**ಖಾಸಗಿ ವಸತಿ ನಿಲಯಗಳು :**

ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸುತ್ತಿರುವ ಖಾಸಗಿ ವಸತಿ ನಿಲಯಗಳಿಗೆ ಇಲಾಖೆಯಿಂದ ಸಹಾಯಧನ ನೀಡುವ ಯೋಜನೆ ಜಾರಿಯಲ್ಲಿದ್ದು ಈ ನಿಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅವರ ಹಾಜರಾತಿಗೆ ಅನುಗುಣವಾಗಿ ಪ್ರತಿ ತಿಂಗಳು ಪ್ರತಿ ವಿದ್ಯಾರ್ಥಿಗೆ ರೂ. 800/– ಭೋಜನಾ ವೆಚ್ಚ ನೀಡಲಾಗುತ್ತಿದೆ. ಜಿಲ್ಲೆಯ ಮುಂಡಗೋಡ ತಾಲೂಕಿನಲ್ಲಿ ಬೌಧ ಸಮುದಾಯದ 01 ಹಾಗೂ ಕ್ರಿಶ್ಚಿಯನ್ ಸಮುದಾಯದ 02 ಖಾಸಗಿ ವಸತಿ ನಿಲಯಗಳಿಗೆ ಸಹಾಯಾನುದಾನ ಬಿಡುಗಡೆ ಮಾಡಲಾಗುತ್ತಿದೆ. ಈ ಪ್ರಯೋಜನವನ್ನು 205 ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿದ್ದಾರೆ. 2018–19ನೇ ಸಾಲಿಗೆ ಸಂಸ್ಥೆಯವರಿಗೆ 14.58 ಲಕ್ಷ ಮಾರ್ಚ–2019ರವರೆಗೆ ವಿದ್ಯಾರ್ಥಿಗಳ ಬೋಜನ ವೆಚ್ಚದ ಅನುದಾನ ನೀಡಲಾಗಿದೆ.

**ಶಾದಿಮಹಲ್ / ಸಮುದಾಯ ಭವನ ಕಟ್ಟಡ ನಿರ್ಮಾಣ :**

ಶಾದಿಮಹಲ ಹಾಗೂ ಸಮುದಾಯ ಭವನ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಜಿಲಾ ಕೇಂದ್ರದಲ್ಲಿ ರೂ.2.00 ಕೋಟಿವರೆಗೆ ಹಾಗೂ ತಾಲೂಕಾ ಸ್ಥಳಗಳಲ್ಲಿ ರೂ.1.00 ಕೋಟಿವರೆಗೆ ಅನುದಾನ ಮಂಜೂರು ಮಾಡಲು ಅವಕಾಶವಿದೆ.

2018–19ನೇ ಸಾಲಿಗೆ ರಾಮನಗರ ಶಾದಿಮಹಲ್ ನಿರ್ಮಾಣಕ್ಕೆ ರೂ.38.95 ಲಕ್ಷ ಮತ್ತು ಉಳವಿ ಶಾದಿಮಹಲ್ ನಿರ್ಮಾಣಕ್ಕೆ ರೂ.25.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

**ಚರ್ಚ ನವೀಕರಣ / ದುರುಸ್ತಿ, ಸಮುದಾಯ ಭವನ ನಿರ್ಮಾಣ ಮತ್ತು ಮದರಸಾಗಳ ಆಧುನೀಕರಣ :**

ಕ್ರಿಶ್ಚನ ಸಮುದಾಯ ಪ್ರಾರ್ಥನಾ ಮಂದಿರ (ಚರ್ಚ)ಗಳ ನವೀಕರಣ ಮತ್ತು ದುರಸ್ತಿ ಹಾಗೂ ಕಂಪೌಂಡ ಗೋಡೆ ನಿರ್ಮಾಣ ಕಾಮಗಾರಿಗಳಿಗೆ ಅಂದಾಜು ಪತ್ರಿಕೆಗಳಿಗನುಗುಣವಾಗಿ ಅನುದಾನ ಮಂಜೂರಿ ಮಾಡಲಾಗುವ ಕಾರ್ಯಕ್ರಮ ಜಾರಿಯಲ್ಲಿರುತ್ತದೆ.

2018–19ನೇ ಸಾಲಿನವರೆಗೆ ಜಿಲ್ಲೆಯ 15 ಚರ್ಚಗಳ ನವೀಕರಣಕ್ಕೆ ರೂ.201.80 ಲಕ್ಷ ಹಾಗೂ 3 ಸ್ಮಶಾನಗಳ ಆವರಣಗೋಡೆ ನಿರ್ಮಾಣಕ್ಕೆ ರೂ.37.50ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಅದೇ ರೀತಿ ಮುಂಡಗೋಡದಲ್ಲಿ ಖಾಸಗಿ ಸಂಸ್ಥೆಯವರು ನಡೆಸುತ್ತಿರುವ ಅನಾಥಾಲಯಕ್ಕೆ ರೂ.7.20ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಸಂಬಂಧಿಸಿದ ಸಂಸ್ಥೆಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

2018–19ನೇ ಸಾಲಿಗೆ ಉತ್ತರಕನ್ನಡ ಜಿಲ್ಲೆಗೆ 4 ಮದರಸಾ ಸಂಸ್ಥೆಗಳಿಗೆ ಆಧುನಕ, ಔಪಚಾರಿಕ ಹಾಗೂ ಗಣಕಿಕೃತ ಶಿಕ್ಷಣಕ್ಕಾಗಿ ತಲಾ ರೂ.10.00 ಲಕ್ಷ ದಂತೆ ಒಟ್ಟು ರೂ.40.00 ಲಕ್ಷ ಅನುದಾನ ಮಂಜೂರಿಯಾಗಿರುತ್ತದೆ. ಇದರಲ್ಲಿ 1 ಸಂಸ್ಥೆಗೆ ಮೊದಲ ಕಂತಿನ ಅನುದಾನ ರೂ.5.00 ಲಕ್ಷ ನಿರ್ದೇಶನಾಲಯದಿಂದ ನೇರವಾಗಿ ಸಂಸ್ಥೆಯವರಿಗೆ ಬಿಡುಗಡೆ ಮಾಡಲಾಗಿದೆ.

**ಅಲ್ಪಸಂಖ್ಯಾತರ ಕಾನೂನು ಪದವಿದಾರರಿಗೆ ತರಬೇತಿ ಭತ್ಯೆ ನೀಡಿಕೆ :**

ಅಲ್ಪಸಂಖ್ಯಾತರ ವರ್ಗದ ಕಾನೂನು ಪದವಿದರ ವಿದ್ಯಾರ್ಥಿಗಳಿಗೆ ನ್ಯಾಯಾಡಳಿತದಲ್ಲಿ ಮುಂದುವರಿಯಲು 4 ವರ್ಷಗಳ ತರಬೇತಿ ನೀಡಿಕೆ ಕಾರ್ಯಕ್ರಮ ಜಾರಿಯಲ್ಲಿದ್ದು ಜಿಲ್ಲೆಯಿಂದ 5 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇವರಿಗೆ ಪ್ರತಿ ಮಾಹೆ ರೂ.5,000/– ರಂತೆ ತರಬೇತಿ ಭತ್ಯ ನೀಡಲಾಗುತ್ತಿದೆ.

**ಬಿದಾಯಿ ಯೋಜನೆ :**

ಆರ್ಥಿಕವಾಗಿ ಅಲ್ಪಸಂಖ್ಯಾತರ ಸಮುದಾಯದಲ್ಲಿ ಹಿಂದುಳಿದ 18 ವರ್ಷ ಮೇಲ್ಪಟ್ಟ ಮುಸ್ಲಿಂ, ಕ್ರಿಶ್ಚನ, ಬೌದ್ಧ, ಜೈನ, ಸಿಖ್ ಹಾಗೂ ಪಾರ್ಸಿ ಹೆಣ್ಣು ಮಕ್ಕಳು, ವಿಧವೆಯರು ಮತ್ತು ವಿಚ್ಛೇದಿತ ಮಹಿಳೆಯರಿಗೆ ಮದುವೆ ನಿಮಿತ್ತ ಹಾಗೂ ಅಗತ್ಯವಿರುವ ಜೀವನಾವಶ್ಯಕ ಸಾಮಗ್ರಿಗಳನ್ನು ಖರೀದಿಸಲು ರೂ.50,000/– ಸಹಾಯಧನ ನೀಡಲು ತೀರ್ಮಾನಿಸಿ, 2013–14ನೇ ಸಾಲಿಗೆ ಸರ್ಕಾರವು "ಬಿದಾಯಿ" ಅನ್ನುವ ನೂತನ ಯೋಜನೆ ಜಾರಿಗೆ ಬಂದಿರುತ್ತದೆ. ಈ ಯೋಜನೆಯ ಸೌಲಭ್ಯವು ರಾಜ್ಯದ ನಿವಾಸಿಗಳಿಗೆ ಮಾತ್ರ ಅನ್ವಯಿಸುತ್ತಿದ್ದು, ಧನ ಸಹಾಯ ಪಡೆಯುವ ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ರೂ.1.50 ಲಕ್ಷಕ್ಕಿಂತ ಕಡಿಮೆ ವರಮಾನ ಇರಬೇಕು. ಹಾಗೂ BPL ಪಡಿತರ ಚೀಟಿ ಹೊಂದಿರಬೇಕು. ಈ ಯೋಜನೆಯ ಲಾಭವು ವಯಕ್ತಿಕ ಅಥವಾ ಸಾಮೂಹಿಕವಾಗಿ ನೇರವೇರಿಸಲಾಗುವ ವಿವಾಹಗಳಿಗೂ ಅನ್ವಯಿಸುತ್ತದೆ. 2018–19ನೇ ಸಾಲಿಗೆ ಈ ಯೋಜನೆಯಡಿ ಮುಸ್ಲಿಂ 212 ಫಲಾನುಭವಿಗಳು, ಕ್ರಿಶ್ಚಿಯನ್ 121 ಮತ್ತು ಜೈನ್ 5 ಫಲಾನುಭವಿಗಳು ಇದರ ಲಾಭ ಪಡೆದಿರುತ್ತಾರೆ.

**ಜಿಲ್ಲಾ ಮಾಹಿತಿ ಕೇಂದ್ರ :**

ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಇರುವ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಲು ಜಿಲ್ಲಾ ಕೇಂದ್ರದಲ್ಲಿ ಮತ್ತು ತಾಲೂಕಾ ಕೇಂದ್ರ್ರದಲ್ಲಿ ಮಾಹಿತಿ ಕೇಂದ್ರ ಪ್ರಾರಂಭಿಸಿ, ಈ ಮಾಹಿತಿ ಕೇಂದ್ರಗಳಲ್ಲಿ ಕೇಂದ್ರ ಸರಕಾರ, ರಾಜ್ಯ ಸರಕಾರ, ರಾಜ್ಯ ಸರಕಾರದ ವಿವಧ ಇಲಾಖೆಗಳಲ್ಲಿ ಅಲ್ಪಸಂಖ್ಯಾತರ ಏಳಿಗೆಗಾಗಿ ಇರುವ ಎಲ್ಲಾ ಯೋಜನೆಗಳ ಬಗ್ಗೆ ಮಾಹಿತಿ ಹಾಗೂ ಅಗತ್ಯ ದಾಖಲೆಗಳ ಪ್ರತಿಗಳನ್ನು ನೀಡಲು ಹಾಗೂ ನಿಯತಕಾಲದಲ್ಲಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವ ಮೂಲಕ ಪ್ರಚಾರ ಕಾರ್ಯ ಕೈಗೊಳ್ಳುವ ಕಾರ್ಯಕ್ರಮ ಜಾರಿಗೆ ತರಲು ಸರಕಾರ ನಿರ್ಧರಿಸಿದೆ. ಈ ಕುರಿತಂತೆ ಉತ್ತರಕನ್ನಡ ಜಿಲ್ಲೆಯ 11 ತಾಲೂಕಿನಲ್ಲಿ ತಾಲೂಕಾ ಮಾಹಿತಿ ಕೇಂದ್ರಗಳನ್ನು

ಪ್ರಾರಂಭಿಸಲಾಗಿದೆ. ಅಲ್ಪಸಂಖ್ಯಾತರರಿಗೆ ಸರಕಾರದಿಂದ ಸಿಗುವ ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಾಗಾರವನ್ನು ನಿಯಮಿತವಾಗಿ ಮಾಡಲಾಗುತ್ತಿದೆ.

**ಅಲ್ಪಸಂಖ್ಯಾತರ ಹಾಗೂ ಕ್ರಿಶ್ಚಿಯನ್ ಸಮುದಾಯದ ವಿದ್ಯಾರ್ಥಿಗಳಿಗೆ ಸಿ.ಇ.ಟಿ ಕೋಚಿಂಗ್ :**

2015–16ನೇ ಸಾಲಿಗೆ ಕ್ರಿಶ್ಚಿಯನ್ ಮತ್ತು ಅಲ್ಪಸಂಖ್ಯಾತರ ಸಮುದಾಯದ ಪಿ.ಯು.ಸಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಿ.ಇ.ಟಿ ಕೋಚಿಂಗ್ ನೀಡುವ ಕಾರ್ಯಕ್ರಮ ಜಾರಿಯಲ್ಲಿರುತ್ತದೆ. 2018–19ನೇ ಸಾಲಿಗೆ ಅಲ್ಪಸಂಖ್ಯಾತರರು 200 ಮತ್ತು ಕ್ರಿಶ್ಚಿಯನ್ 50 ಗುರಿ ನೀಡಿದ್ದು ಒಟ್ಟು 250 ವಿದ್ಯಾರ್ಥಿಗಳು ತರಬೇತಿ ಪಡೆದಿರುತ್ತಾರೆ.

**2015–16 ರಿಂದ ಪ್ರಾರಂಭಿಸಿದ ನೂತನ ಯೋಜನೆ ವಿದ್ಯಾಸಿರಿ:**

ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌಧ ಮತ್ತು ಪಾರ್ಸಿ ಸಮುದಾಯದ ಮೆಟ್ರಿಕ ನಂತರದ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಎಂಬ ನೂತನ ಯೋಜನೆ 2015–16ನೇ ಸಾಲಿನಿಂದ ಪ್ರಾರಂಭವಾಗಿರುತ್ತದೆ. 2018–19ನೇ ಸಾಲಿಗೆ ಕ್ರಿಶ್ಚಿಯನ್ ಸಮುದಾಯದ 105 ವಿದ್ಯಾರ್ಥಿ ಮುಸ್ಲಿಂ ಸಮುದಾಯದ 281 ಹಾಗೂ ಜೈನ ಸಮುದಾಯದ 15 ವಿದ್ಯಾರ್ಥಿಗಳಿಗೆ ಒಟ್ಟು 401 ವಿದ್ಯಾರ್ಥಿಗಳಿಗೆ ಅವರ ಕಾಲೇಜಿನ ಹಾಜರಾತಿ ಅನುಗುಣವಾಗಿ ಅನುದಾನ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.

**ಕಾಲೋನಿಗಳಿಗೆ ಮೂಲಭೂತ ಸೌಕರ್ಯ :**

ಅಲ್ಪಸಂಖ್ಯಾತರ ಸಮುದಾಯವಾರು ಶೇ.50% ವಾಸವಾಗಿರುವ ಕಾಲೋನಿಗಳು Notified & Non-notified ಕೊಳಚೆ ಪ್ರದೇಶ (ಕಾಲೋನಿ, ಕೇರಿ, ಮೊಹಲ್ಲಾ ಮತ್ತು ಇತರೆ ಕೊಳಚೆ ಪ್ರದೇಶ) ಗಳ ಮೂಲಭೂತ ಸೌಕರ್ಯ ಒದಗಿಸಲು ಸರಕಾರದ ಆದೇಶವಾಗಿರುತ್ತದೆ.

2018–19ನೇ ಸಾಲಿಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ರೂ.25.00 ಲಕ್ಷದಂತೆ ಉತ್ತರಕನ್ನಡ ಜಿಲ್ಲೆಗೆ ಒಟ್ಟು ರೂ.150.00 ಲಕ್ಷ ಮಂಜೂರಿಯಾಗಿರುತ್ತದೆ. ಮಾನ್ಯ ಶಾಸಕರು / ಸಚಿವರು ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಕಾಮಗಾರಿಯನ್ನು ಕೈಗೊಳ್ಳಲು ಪಂಚಾಯತರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿರುತ್ತದೆ. ಕಾರವಾರ ವಿಭಾಗದ 3 ವಿಧಾನಸಭಾ ಕ್ಷೇತ್ರಗಳ 15 ಕಾಮಗಾರಿಗಳನ್ನು ಹಾಗೂ ಸಿರ್ಸಿ ವಿಭಾಗದ 3 ವಿಧಾನಸಭಾ ಕ್ಷೇತ್ರಗಳ 5 ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಉತ್ತರಕನ್ನಡಜಿಲ್ಲೆಯ ಭಟ್ಕಳ–ಹೊನ್ನಾವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತಾಲೂಕು, ಗ್ರಾಮಗಳ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು KRIDL ಬೆಂಗಳೂರು ರವರಿಗೆ ವಹಿಸಲಾಗಿರುತ್ತದೆ. ಅದರಂತೆ ಭಟ್ಕಳ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಒಟ್ಟು ರೂ.300.00 ಲಕ್ಷಗಳ 11 ಕಾಮಗಾರಿಗಳ ಕ್ರಿಯಾಯೋಜನೆಯನ್ನು ಸಲ್ಲಿಸಿರುತ್ತಾರೆ. ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಮಾನ್ಯ ನಿರ್ದೇಶಕರು ಬೆಂಗಳೂರುರವರು ಆಡಳಿತ ಅನುಮೋದನೆ ನೀಡಿರುತ್ತಾರೆ. ಹಾಗೂ ಒಟ್ಟು ಮೊತ್ತದ ಶೇ 25% ರಷ್ಟು ಅನುದಾನ ರೂ.75.00 ಲಕ್ಷ ಸಂಸ್ಥೆಯವರಿಗೆ ನೇರವಾಗಿ ಬಿಡುಗಡೆ ಮಾಡಲಾಗಿದೆ.

*****

ಮಾಹಿತಿ ಮೂಲ : ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕಾರವಾರ

# ತೋಟಗಾರಿಕೆ ಇಲಾಖೆ

**ಪೀಠಿಕೆ :**

ಉತ್ತರ ಕನ್ನಡ ಜಿಲ್ಲೆಯು ಪಶ್ಚಿಮ ಘಟ್ಟಗಳ ಮಡಿಲಿನಲ್ಲಿ ವಿಸ್ತರಿಸಿದ್ದು, ಭೌಗೋಳಿಕವಾಗಿ ಕಿರಿದಾದ ವಿಸ್ತೀರ್ಣವನ್ನು ಹೊಂದಿರುತ್ತದೆ. ಸ್ವಾಭಾವಿಕ ವನ ಸಂಪತ್ತು ಹಾಗೂ ತೋಟಗಾರಿಕೆ ಬೆಳೆಗಳನ್ನು ಹೊಂದಿರುವ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿರುತ್ತದೆ.

ಜಿಲ್ಲೆಯ ಒಟ್ಟೂ ಭೌಗೋಳಿಕ ಕ್ಷೇತ್ರದಲ್ಲಿ ಸುಮಾರು ಹೆಕ್ಟೇರ್ 62021.42 (2018–19 ನೇ ಸಾಲಿನ ಮುಂಗಾರು ಋತುವಿನಲ್ಲಿ ಕೈಗೊಂಡ ಬೆಳೆ ಸಮೀಕ್ಷೆ/ಕ್ಷೇತ್ರ ಮರುಹೊಂದಾಣಿಕೆ ವರದಿ ಪ್ರಕಾರ)ಪ್ರದೇಶಗಳಲ್ಲಿ ತೋಟಗಾರಿಕೆ ಬೆಳೆ ಕೃಷಿ ಮಾಡಲಾಗುತ್ತಿದೆ. ವಿವಿದ ಬೆಳೆಗಳ ಕ್ಷೇತ್ರಗಳ ವಿವರಗಳು (ಹೆಕ್ಟೇರ್‌ಗಳಲ್ಲಿ) ಈ ಕೆಳಗಿನಂತಿವೆ.

| | | |
|---|---|---|
| 1 | ತೋಟದ ಬೆಳೆಗಳು | 47252.28 |
| 2 | ಹಣ್ಣಿನ ಬೆಳೆಗಳು | 9576.14 |
| 3 | ಸಾಂಬಾರು ಬೆಳೆಗಳು | 5013 |
| 4 | ತರಕಾರಿ ಬೆಳೆಗಳು | 36 |
| 5 | ಹೂವಿನ ಬೆಳೆಗಳು | 61 |
| 6 | ಔಷಧಿ ಮತ್ತು ಸುಗಂಧಿತ ಬೆಳೆಗಳು | 83 |

ಜಿಲ್ಲೆಯಲ್ಲಿ ತೋಟದ ಹಾಗೂ ಸಾಂಬಾರು ಬೆಳೆಗಳನ್ನು ಪ್ರಮುಖವಾಗಿ ಬೆಳೆಯಲಾಗುತ್ತಿದೆ. ಇವುಗಳಲ್ಲಿ ಅಡಿಕೆ, ತೆಂಗು, ಕೋಕೋ, ಕಾಳುಮೆಣಸು, ಗೇರು ಮುಖ್ಯವಾದವು ಹಾಗೂ ವಿಳ್ಯದೆಲೆ, ಜಾಯಿಕಾಯಿ, ದಾಲಿನ್ನಿ, ಅರಿಶಿಣ, ಶುಂಠಿ ಮುಂತಾದ ಬೆಳೆಗಳನ್ನು ಸಹ ಬೆಳೆಯಲಾಗುತ್ತದೆ. ಹಣ್ಣಿನ ಬೆಳೆಗಳಲ್ಲಿ ಮುಖ್ಯವಾಗಿ ಮಾವು, ಬಾಳೆ, ಅನಾನಸ್, ಸಪೋಟಾ ಬೆಳೆಯಲಾಗುತ್ತದೆ. ಪಚೌಲಿ, ಹಿಪ್ಪಲಿ, ಲಾವಂಚ, ಬಜೆ, ಶ್ರೀಗಂಧ, ವಾಟೆಹುಳಿ ಮತ್ತು ಸಿಟ್ರೊನೆಲ್ಲಾ ಮುಂತಾದ ಔಷಧಿ ಮತ್ತು ಸುಗಂದಿತ ಬೆಳೆ ಕೃಷಿ ಮಾಡಲಾಗುತ್ತಿದೆ. ಸಿಹಿಗೆಣಸು, ಮರಗೆಣಸು, ಸೊಪ್ಪು ತರಕಾರಿಗಳು, ತರಕಾರಿ ಅಲಸಂದಿ, ಕುಂಬಳ, ಬೀನ್ಸ್, ಸವತೆ, ಬದನೆ, ಟೊಮೆಟೊ, ಈರುಳ್ಳಿ, ಮೆಣಸಿನಕಾಯಿ ಮತ್ತು ಮೂಲಂಗಿ ಜಿಲ್ಲೆಯ ಪ್ರಮುಖ ತರಕಾರಿ ಬೆಳೆಗಳು.

**ಆಡಳಿತ ವರ್ಗೀಕರಣ:**

ಉತ್ತರ ಕನ್ನಡ ಜಿಲ್ಲೆಯಲ್ಲಿ ಹನ್ನೊಂದು ತಾಲೂಕುಗಳಿದ್ದು, ಎಲ್ಲಾ ತಾಲೂಕುಗಳಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಪ್ರಮುಖ ವಾಣಿಜ್ಯ ಕೇಂದ್ರವಾದ ಶಿರಸಿಯಲ್ಲಿ ಜಿಲ್ಲಾ ಮಟ್ಟದ ಇಲಾಖಾ ಮುಖ್ಯಸ್ಥರಾದ ತೋಟಗಾರಿಕೆ ಉಪ ನಿರ್ದೇಶಕರು ಕಾರ್ಯನಿರ್ವಹಿಸುತ್ತಾರೆ.

**ತೋಟಗಾರಿಕೆ ಕ್ಷೇತ್ರ ಮತ್ತು ಸಸ್ಯಾಗಾರ:**

ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿ ಅಂಕೋಲಾ ತಾಲೂಕಿನ ಹಿಚ್ಕಡ ಗ್ರಾಮ ಮತ್ತು ಮುಂಡಗೋಡ ತಾಲೂಕಿನ ಬಾಚಣಿಕೆ ಗ್ರಾಮದಲ್ಲಿ ತೋಟಗಾರಿಕೆ ಕ್ಷೇತ್ರಗಳಿರುತ್ತವೆ. ಕುಮಟಾ, ಹಳಿಯಾಳ ಹಾಗೂ ಜೋಯಿಡಾ

ತಾಲೂಕು ಕೇಂದ್ರ ಕಛೇರಿಗಳಲ್ಲಿ ಸಸ್ಯಗಾರ ಇರುತ್ತದೆ. ಸದರಿ ಕ್ಷೇತ್ರ ಹಾಗೂ ಸಸ್ಯಗಾರಗಳಲ್ಲಿ ಉತ್ಕೃಷ್ಟ ಗುಣಮಟ್ಟದ ಕಸಿ ಗಿಡಗಳು, ಸಸಿಗಳನ್ನು ಉತ್ಪಾದಿಸಿ ಇಲಾಖಾ ದರದಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತದೆ.

## I. ಕೇಂದ್ರ ವಲಯ ಯೋಜನೆಗಳು:

1. **ರಾಷ್ಟ್ರಿಯ ತೋಟಗಾರಿಕೆ ಮಿಷನ್:**

ಸದರಿ ಯೋಜನೆಯಡಿ ಪ್ರದೇಶ ವಿಸ್ತರಣೆ, ಪುನಶ್ಚೇತನ, ಕೊಯ್ಲೋತ್ತರ ನಿರ್ವಹಣೆ, ಸಂರಕ್ಷಿತ ಬೇಸಾಯ ಮತ್ತು ಯಾಂತ್ರಿಕರಣಕ್ಕೆ ಹಾಗೂ ಇತರೆ ಕಾರ್ಯಕ್ರಮಗಳಿಗೆ ರೂ. 409.44 ಲಕ್ಷ ಬಿಡುಗಡೆಯಾಗಿದ್ದು, ರೂ. 406.06689 ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.3.37311 ಲಕ್ಷ.

2. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ:**

ಈ ಯೋಜನೆಯಲ್ಲಿ ಹನಿ ನೀರಾವರಿ ಅಳವಡಿಸಿದ 1392 ಜನ ರೈತರಿಗೆ ಶೇ.90ರ ಸಹಾಯಧನ ನೀಡಲಾಗಿರುತ್ತದೆ. ಸದರಿ ಯೋಜನೆಯಡಿ ಒಟ್ಟು ರೂ.332.60 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 327.93747 ಲಕ್ಷಗಳು ವೆಚ್ಚ ಭರಿಸಲಾಗಿರುತ್ತದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.4.66253 ಲಕ್ಷ.

3. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:**

**1. ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ:** ಸರ್ಕಾರ ಮತ್ತು ಖಾಸಗಿಯವರ ಸಹಭಾಗಿತ್ವದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಬಿಡುಗಡೆಯಾದ ರೂ.83.00 ಲಕ್ಷ ಅನುದಾನದಲ್ಲಿ, ರೂ.81.32012 ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.1.67988 ಲಕ್ಷ.

**2. ತೋಟಗಾರಿಕೆಯಲ್ಲಿ ನಿಖರ ಬೇಸಾಯ:** ಜಿಲ್ಲೆಗೆ ಬಿಡುಗಡೆಯಾದ ರೂ. 2.00 ಲಕ್ಷ ಅನುದಾನದಲ್ಲಿ ತೋಟಗಾರಿಕೆಯಲ್ಲಿ ನಿಖರ ಬೇಸಾಯ ಪದ್ಧತಿ ಅಳವಡಿಸಲು, ರೂ. 2.00 ಲಕ್ಷ ಅನುದಾನವನ್ನು ಬಳಸಲಾಗಿದೆ. 3 ಫಲಾಭವಿಗಳು ಈ ಯೋಜನೆಯ ಲಾಭ ಪಡೆದಿರುತ್ತಾರೆ.

5) **SMAM ಯೋಜನೆಯ ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮ:**

SMAMಯೋಜನೆಯ ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕಾರ್ಯಕ್ರಮವು 2018-19 ನೇ ಸಾಲಿನಲ್ಲಿ ಜಾರಿಗೆ ತರಲಾಗಿರುತ್ತದೆ. ತೋಟಗಾರಿಕೆಯಲ್ಲಿ ಯಾಂತ್ರೀಕರಣ ಹೆಚ್ಚಿಸುವ/ಉತ್ತೇಜಿಸುವ ಸಲುವಾಗಿ ರೈತರಿಗೆ ಸಹಾಯಧನ ನೀಡಲಾಗುತ್ತಿದೆ. ಸದರಿ ಯೋಜನೆಯಡಿ ರೂ.123.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.122.95738 ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಈ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.04262 ಲಕ್ಷ.

## II. *ರಾಜ್ಯ ವಲಯ ಯೋಜನೆಗಳು:*

ರಾಜ್ಯವಲಯ ಯೋಜನೆಯಡಿ ಒಟ್ಟೂ ರೂ. 366.67400 ಲಕ್ಷ ಬಿಡುಗಡೆಯಾಗಿರುತ್ತದೆ.ಸದರಿ ಅನುದಾನದಲ್ಲಿ ರೂ. 361.77539 ಲಕ್ಷ ಖರ್ಚು ಭರಿಸಲಾಗಿರುತ್ತದೆ.

**1. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ**: ಸದರಿ ಯೋಜನೆಯಡಿ ಬಿಡುಗಡೆಯಾದ ರೂ.72.90 ಲಕ್ಷಗಳಲ್ಲಿ ರೂ.72.88500 ಲಕ್ಷಗಳ ಅನುದಾನವನ್ನು ಬಳಸಿ ಇಲಾಖೆ ಕ್ಷೇತ್ರಗಳಲ್ಲಿ ಅಭಿವೃದ್ಧಿಗೊಳಿಸಲಾಗಿದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.01500 ಲಕ್ಷ.

**2. ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ:** ಸಸ್ಯ ಸಂರಕ್ಷಣೆಗಳ ಔಷಧಿಗಳ ವಿತರಣೆ, ಗೋನಿಯೋಜಸ್ ಪರೋಪ ಜೀವಿಗಳ ಉತ್ಪಾದನೆಗಾಗಿ ಹಾಗೂ ಮೂಲಭೂತ ಸೌಕರ್ಯಕ್ಕಾಗಿ ಸದರಿ ಯೋಜನೆಯಡಿ 42.25 ಲಕ್ಷ ಬಿಡುಗಡೆಯಾಗಿದ್ದು, ರೂ. 41.35040 ಲಕ್ಷಗಳನ್ನು ಖರ್ಚು ಭರಿಸಲಾಗಿದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.89960 ಲಕ್ಷ.

**3. ತೋಟಗಾರಿಕೆಯ ವಿಸ್ತರಣೆ:** ಸಿದ್ದಾಪುರ ಹೊಸೂರು ತರಬೇತಿ ಕೇಂದ್ರದಲ್ಲಿ 35 ಜನ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದ್ದು, ಈ ಯೋಜನೆಯಲ್ಲಿ ಬಿಡುಗಡೆಯಾದ, ರೂ.16.84 ಲಕ್ಷ ಅನುದಾನದಲ್ಲಿ ರೂ.15.86100 ಲಕ್ಷ ಅನುದಾನವನ್ನು ಬಳಸಲಾಗಿದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.97900 ಲಕ್ಷ.

**4. ಸಮಗ್ರ ತೋಟಗಾರಿಕೆ ಅಭಿವೃದ್ಧಿ:** ಸದರಿ ಯೋಜನೆಯಡಿ ಬಿಡುಗಡೆಯಾದ ರೂ.146.85 ಲಕ್ಷಗಳಲ್ಲಿ, ರೂ. 146.83800 ಲಕ್ಷಗಳ ಅನುದಾನ ಖರ್ಚು ಭರಿಸಿ, 309.92 ಹೆಕ್ಟರ್ ತೋಟಗಾರಿಕೆ ಪ್ರದೇಶ ವಿಸ್ತರಣೆ ತೆಗೆದುಕೊಳ್ಳಲಾಗಿದೆ. ಈ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.01200 ಸದರಿ ಯೋಜನೆಯಡಿ ಒಟ್ಟು 13 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರ ಸಹಾಯಧನವನ್ನು ನೀಡಲಾಗುತ್ತದೆ. ಹಾಗೂ ರೂ.6.25 ಲಕ್ಷ ಬಿಡುಗಡೆಯಾಗಿದ್ದು ರೂ.6.24456 ಖರ್ಚು ಭರಿಸಿ ತಾರಸಿ ಹಾಗೂ ಕೈತೋಟ ನಿರ್ಮಾಣ ಕಾರ್ಯವನ್ನೂ ತೆಗೆದುಕೊಳ್ಳಲಾಗಿದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.00544 ಲಕ್ಷ.

**5. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯಧನದಲ್ಲಿ ತೆಂಗು ಉತ್ಪಾದಕತೆಯ ಸಮಗ್ರ ತೆಂಗು ಬೇಸಾಯ:** ಸದರಿ ಯೋಜನೆಯಡಿ ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ ಹಾಗೂ ಮರುನಾಟಿ ಮತ್ತು ಪುನರುತ್ಸಾಹಕ್ಕೆ ರೂ.30.58400 ಲಕ್ಷ ಬಿಡುಗಡೆಯಾಗಿದ್ದು, ರೂ.30.56183 ಲಕ್ಷ ವ್ಯಯಮಾಡಿ ಅರ್ಹ ಫಲಾಭವಿಗಳಿಗೆ ಸಹಾಯಧನ ನೀಡಲಾಗಿರುತ್ತದೆ. ಈ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.02217 ಲಕ್ಷ.

**6. ತೋಟಗಾರಿಕಾ ಉದ್ಯಾನವನಗಳು ಮತ್ತು ತೋಟಗಳು:** ಸದರಿ ಯೋಜನೆಯಡಿ ಬಿಡುಗಡೆಯಾದ ರೂ.3.00 ಲಕ್ಷಗಳನ್ನು ತೆರಕನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಸಸ್ಯಶಾಸ್ತ್ರೀಯ ಉದ್ಯಾನವನ ನಿರ್ಮಾಣದ ಕಾಮಗಾರಿಗೆ ಬಳಸಲಾಗಿದೆ.

**7. ಮಧುವನ ಮತ್ತು ಜೇನುಸಾಕಾಣಿಕೆ ಯೋಜನೆ:** ಸದರಿ ಯೋಜನೆಯಡಿ 100 ಫಲಾನುಭವಿಗಳಿಗೆ ತರಬೇತಿ ನೀಡಿ, 100 ಫಲಾನುಭವಿಗಳಿಗೆ ಜೇನು ಪೆಟ್ಟಿಗೆಗಳ ಖರೀದಿಗೆ ಸಹಾಯಧನ ನೀಡಲಾಗಿದೆ. ಸಿದ್ದಾಪುರ ತಾಲೂಕಿನ ಬಿಳಗಿಯಲ್ಲಿರುವ ಮರಿ ಜೇನು ಉತ್ಪಾದನಾ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಿ ಮರಿ ಜೇನು ಉತ್ಪಾದನಾ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಆಸಕ್ತ 14 ಜೇನು ಉತ್ಪಾದಕರಿಗೆ ಮಧುವನ ಸ್ಥಾಪಿಸಲು ಪ್ರೋತ್ಸಾಹಿಸಲಾಗಿದೆ. ಸದರಿ ಯೋಜನೆಯಡಿ ರೂ.20.00 ಲಕ್ಷ ಬಿಡುಗಡೆಯಾಗಿದ್ದು, ರೂ.19.98830 ಲಕ್ಷ ಅನುದಾನ ಬಳಕೆಯಾಗಿರುತ್ತದೆ. ಈ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.01170 ಲಕ್ಷ.

**8. ನಿರ್ದೇಶನ ಮತ್ತು ಆಡಳಿತ:** ಸದರಿ ಯೋಜನೆಯಡಿ ಜಿಲ್ಲೆಗೆ ರೂ.25.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.22.05100 ಲಕ್ಷ ಅನುದಾನವನ್ನು ಸದರಿ ಅನುದಾನವನ್ನು ರೈತ ಸಹಾಯಕ ಕೇಂದ್ರದಲ್ಲಿ ಕೆಲಸ ನಿರ್ವಹಿಸುವ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ಮಾಸಿಕ ನಿಗದಿತ ಪ್ರವಾಸ ಭತ್ಯೆಯಾಗಿ ನಿಡಲಾಗಿರುತ್ತದೆ. ಬಾಕಿ ಉಳಿದ ಮೊತ್ತ ರೂ.2.94900 ಲಕ್ಷ.

**9. ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ:** ಈ ಯೋಜನೆಯಡಿ ಜಿಲ್ಲೆಗೆ 3.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ ರೂ.2.99530 ಲಕ್ಷ ವೆಚ್ಚ ಭರಿಸಿ 2 ಅಣಬೆ ಉತ್ಪಾದನಾ ಘಟಕಗಳನ್ನು ನೀಡಲಾಗಿದೆ. ಈ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.00470 ಲಕ್ಷ.

## III. ಜಿಲ್ಲಾ ವಲಯ ಯೋಜನೆಗಳು:

ಜಿಲ್ಲಾ ವಲಯ ಯೋಜನೆಗಳಡಿ ರೂ.585.81 ಲಕ್ಷ ಬಿಡುಗಡೆಯಾಗಿದ್ದು, ರೂ.563.39358 ಅನುದಾನ ಖರ್ಚು ಮಾಡಲಾಗಿರುತ್ತದೆ.

### 1) ತೋಟಗಾರಿಕೆ ಬೆಳೆಗಳ ವಿಶೇಷ ಹನಿ ನೀರಾವರಿ ಯೋಜನೆ:

ಹನಿ ನೀರಾವರಿ ಅಳವಡಿಸಿದ ರೈತರಿಗೆ ಸಹಾಯಧನ ವಿತರಿಸಲು ರೂ.25.00 ಲಕ್ಷ ಬಿಡುಗಡೆಯಾಗಿದ್ದು, ರೂ.24.62484 ಆರ್ಥಿಕ ವೆಚ್ಚ ಭರಿಸಲಾಗಿದೆ. ರೂ.0.37516 ಲಕ್ಷ ಶಿಲ್ಕು ಉಳಿದಿದೆ. ಒಟ್ಟು 154 ಜನ ರೈತರಿಗೆ 108.40 ಹೆಕ್ಟರ್ ಪ್ರದೇಶಕ್ಕೆ ಈ ಯೋಜನೆಯಲ್ಲಿ ಶೇ.90ರ ಸಹಾಯಧನ ನೀಡಲಾಗಿದೆ.

### 2) ತೋಟಗಾರಿಕೆ ಕಟ್ಟಡಗಳು:

ಸದರಿ ಯೋಜನೆಯಡಿ ಬಿಡುಗಡೆಯಾದ ಒಟ್ಟು ಅನುದಾನ ರೂ.30.00 ಲಕ್ಷಗಳು ಇಲಾಖೆಯ ಕಟ್ಟಡ ಕಾಮಗಾರಿಯನ್ನು ಎಲ್.ಸಿ. ಮುಖಾಂತರ ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗದಿಂದ ಮಾಡಿಸಲಾಗುತ್ತಿದೆ. ಹಿ.ಸ.ತೋ.ನಿ.(ಜಿ.ಪಂ), ಕಾರವಾರರವರ ಕಛೇರಿ ಆವರಣದಲ್ಲಿ ಹೊಸ ಕೊಠಡಿ ನಿರ್ಮಾಣಕ್ಕೆ ರೂ.6.00, ಹಿ.ಸ.ತೋ.ನಿ. (ಜಿ.ಪಂ), ಭಟ್ಕಳ, ಸಿದ್ದಾಪುರ ಮತ್ತು ಮುಂಡಗೋಡ ಕಛೇರಿಗಳಲ್ಲಿ ಹೊಸ ಕೊಠಡಿ ನಿರ್ಮಾಣದ ಮುಂದುವರೆದ (ವಿದ್ಯುತ್ ಅಳವಡಿಕೆ ಹಾಗೂ ಟೈಲ್ಸ್ ಅಳವಡಿಕೆ ಒಳಗೊಂಡ) ಕಾಮಗಾರಿಗಳಿಗೆ ಒಟ್ಟೂ ರೂ.13.50 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ತೋಟಗಾರಿಕೆ ಉಪ ನಿರ್ದೇಶಕರು(ಜಿ.ಪಂ), ಶಿರಸಿ/ ಹಿ.ಸ.ತೋ.ನಿ.(ಜಿ.ಪಂ) ಶಿರಸಿರವರ ಕಛೇರಿ ದುರಸ್ಥಿ ಕಾಮಗಾರಿಗಳಿಗೆ ರೂ.3.50 ಲಕ್ಷ ವೆಚ್ಚ ಮಾಡಲಾಗಿದೆ. ಹಿ.ಸ.ತೋ.ನಿ.(ಜಿ.ಪಂ), ಹಳಿಯಾಳರವರ ಕಚೇರಿಯ ಕಂಪೌಂಡ್ ಗೋಡೆಗೆ ಗೇಟ್ ಅಳವಡಿಸುವುದು ಮತ್ತು ಕಛೇರಿಯ ಒಳಗೆ ನೆಲಹಾಸು ದುರಸ್ಥಿ ಮಾಡಿ, ಟೈಲ್ಸ್ ಅಳವಡಿಕೆ ಹಾಗೂ ಇತರೆ ದುರಸ್ಥಿಗಾಗಿ ರೂ.2.00 ಲಕ್ಷ ವೆಚ್ಚ ಮಾಡಲಾಗಿದೆ. ಹಿ.ಸ.ತೋ.ನಿ. (ಜಿ.ಪಂ) ಯಲ್ಲಾಪುರ ರವರ ಕಚೇರಿ ಮುಂಬಾಗಿಲು ಮತ್ತು ಹಿಂಬಾಗಿಲುಗಳು ಶಿಥಿಲಗೊಳ್ಳುತ್ತಿರುವುದರಿಂದ ಭದ್ರತೆಗಾಗಿ ಹೊಸ ಬಾಗಿಲುಗಳನ್ನು ಅಳವಡಿಸುವ ಹಾಗೂ ಕಚೇರಿಯ ಒಳಗೆ ನೆಲಹಾಸು ದುರಸ್ತಿ ಮಾಡಿ ಟೈಲ್ಸ್ ಅಳವಡಿಕೆ ಕಾಮಗಾರಿ ಹಾಗೂ ಕಚೇರಿ ಆವರಣದ ಗೇಟ್‌ಗೆ ಕೌ ಕ್ಯಾಚರ್ ಗೇಟ್ ಅಳವಡಿಕೆ ಕಾಮಗಾರಿ ಮತ್ತು ಕಚೇರಿ ಗೇಟ್‌ನಿಂದ ಕಚೇರಿಯವರೆಗೂ ನೆಲಹಾಸು ಕಾಮಗಾರಿಗಳಿಗೆ ಒಟ್ಟು ರೂ.5.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

### 3) ತೋಟಗಾರಿಕೆ ಕ್ಷೇತ್ರ /ಸಸ್ಯಾಗಾರ ನಿರ್ವಹಣೆ:

**ಅ) ತೋಟಗಾರಿಕೆ ಕ್ಷೇತ್ರ /ಸಸ್ಯಾಗಾರ ನಿರ್ವಹಣೆ ಕಾರ್ಯಕ್ರಮ:**

ಸದರಿ ಯೋಜನೆಯಡಿ ಬಿಡುಗಡೆಯಾದ ಒಟ್ಟು ಅನುದಾನ ರೂ.7.00 ಲಕ್ಷಗಳು. ಜಿಲ್ಲಾವಲಯ ಅಧೀನದಲ್ಲಿರುವ ಐದು ತೋಟಗಾರಿಕೆ ಕ್ಷೇತ್ರ/ಸಸ್ಯಾಗಾರಗಳ ನಿರ್ವಹಣೆಗೆ ರೂ.2.78866 ಲಕ್ಷ ವೆಚ್ಚ ಭರಿಸಲಾಗಿದೆ.

### ಆ) ತೋಟಗಾರಿಕೆ ಕ್ಷೇತ್ರ/ಸಸ್ಯಾಗಾರಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ:

ಅಂಕೋಲಾ ತಾಲೂಕ ಹಿಚ್ಕಡ ತೋಟಗಾರಿಕೆ ಕ್ಷೇತ್ರದಲ್ಲಿ ಕಚೇರಿ ಕಟ್ಟಡ ನಿರ್ಮಾಣದ ಮುಂದುವರೆದ ಕಾಮಗಾರಿಗೆ ರೂ. 4.00 ಲಕ್ಷಗಳ ಅನುದಾನವನ್ನು ಬಳಸಲಾಗಿದೆ. ಸದರಿ ಯೋಜನೆಯಡಿ ಬಾಕಿ ಉಳಿದ ಒಟ್ಟು ಮೊತ್ತ ರೂ.0.21134 ಲಕ್ಷ.

### 4) ಬೀಜದ ತೆಂಗಿನಕಾಯಿ ಸಂಗ್ರಹಣೆ ಹಾಗೂ ಸಸ್ಯಾಗಾರ ನಿರ್ವಹಣೆ:

ಈ ಯೋಜನೆಯಡಿ ಬಿಡುಗಡೆಯಾದ ಒಟ್ಟು ಅನುದಾನ ರೂ.3.00 ಲಕ್ಷಗಳು. ಉತ್ತಮ ತೆಂಗಿನ ತೋಟ ನಿರ್ವಹಸಿದ ರೈತರನ್ನು ಜಿಲ್ಲೆಯಲ್ಲಿ ಆಯ್ಕೆ ಮಾಡಲಾಗಿದೆ. ಸದರಿಯವರ ತೋಟಗಳಿಂದ ಉತ್ತಮ ಗುಣಮಟ್ಟದ 10600 ಕಾಯಿಗಳನ್ನು ರೂ.2.68006 ಲಕ್ಷ ವ್ಯಯ ಮಾಡಿ ಖರೀದಿಸಿ ಬಿತ್ತನೆ ಮಾಡಲಾಗಿದೆ. ರೂ.0.31926 ಲಕ್ಷಗಳನ್ನು ಇಲಾಖಾ ಕ್ಷೇತ್ರ / ಸಸ್ಯಾಗಾರಗಳಲ್ಲಿ ನಿರ್ವಹಣೆ ಮಾಡಿದ ತೆಂಗಿನ ಸಸಿಗಳಿಗೆ ಖರ್ಚು ಮಾಡಲಾಗಿದೆ. ಇಲಾಖಾ ದರದಂತೆ ತೆಂಗಿನ ಸಸಿಗಳನ್ನು ಮಾರಾಟ ಮಾಡಲಾಗುತ್ತದೆ. ರೂ.0.00068 ಲಕ್ಷ ಶಿಲ್ಕು ಉಳಿದಿದೆ.

### 5) ಪ್ರಚಾರ ಮತ್ತು ಸಾಹಿತ್ಯ:

ಪ್ರಚಾರ ಮತ್ತು ಸಾಹಿತ್ಯ ಯೋಜನೆಯಡಿ ಬಿಡುಗಡೆಯಾದ ಒಟ್ಟು ಅನುದಾನ ರೂ.7.00 ಲಕ್ಷಗಳು. ಇಲಾಖೆಯ ವಿವಿಧ ಯೋಜನೆ ಹಾಗೂ ವಿವಿಧ ಸೌಲಭ್ಯಗಳ ಕುರಿತು ಪ್ರಚಾರ ಸಾಮಗ್ರಿಗಳ ಮುದ್ರಣ ಮಾಡಲು,ದಸರಾ ಉತ್ಸವದ ವಸ್ತು ಪ್ರದರ್ಶನದಲ್ಲಿ ಜಿಲ್ಲಾ ಟ್ಯಾಬ್ಲೋ ತಯಾರಿಕೆಗೂ ಹಾಗೂ ಶಿರಸಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಅನುದಾನ ರೂ.7.00 ಲಕ್ಷಗಳು. ಅದರಲ್ಲಿ ರೂ.6.94872 ಲಕ್ಷಗಳ ಅನುದಾನ ಬಳಕೆಯಾಗಿರುತ್ತದೆ. ರೂ. 0.05128 ಲಕ್ಷ ಶಿಲ್ಕು ಉಳಿದಿದೆ.

### 6) ಜೇನುಕೃಷಿ ಅಭಿವೃದ್ಧಿ ಯೋಜನೆ:

ಈ ಯೋಜನೆಯಡಿ ಬಿಡುಗಡೆಯಾದ ಒಟ್ಟು ಅನುದಾನ ರೂ.5.00 ಲಕ್ಷಗಳು. ಜೇನುಕೃಷಿ ಅಭಿವೃದ್ಧಿ ಮತ್ತು ತರಬೇತಿಗಾಗಿ ರೂ.5.00 ಲಕ್ಷ ಬಿಡುಗಡೆಯಾಗಿದ್ದು, ರೂ. 0.87483 ವೆಚ್ಚದಲ್ಲಿ 121 ಜನರಿಗೆ ತರಬೇತಿ ನೀಡಲಾಗಿದೆ. 114 ಫಲಾನುಭವಿಗಳಿಗೆ ಜೇನು ಪೆಟ್ಟಿಗೆ ಹಾಗೂ ಕಾಲೋನಿಗಳ ಖರೀದಿಗಾಗಿ ರೂ.3.97800 ಲಕ್ಷ ಸಹಾಯಧನ ನೀಡಲಾಗಿದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.14717 ಲಕ್ಷ.

7) **ಕಾರ್ಯಕಾರಿ ಸಿಬ್ಬಂದಿ ಯೋಜನೆ:** ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯಡಿ ರೂ. 487.17921 ಲಕ್ಷ ವೆಚ್ಚ ಭರಿಸಲಾಗಿರುತ್ತದೆ.

## IV. ತಾಲೂಕಾ ಪಂಚಾಯತ್ ಯೋಜನೆಗಳು:

ತಾಲೂಕಾ ಪಂಚಾಯತ ಯೋಜನೆಗಳಡಿ ರೂ.9.83 ಲಕ್ಷ ಬಿಡುಗಡೆಯಾಗಿದ್ದು, ರೂ.9.70500 ಲಕ್ಷ ಆರ್ಥಿಕ ಸಾಧನೆಯಾಗಿರುತ್ತದೆ.

1. **ರೈತರಿಗೆ ತರಬೇತಿ:** ರೈತರಿಗೆ ತರಬೇತಿ ನೀಡುವ ಯೋಜನೆಯಡಿ ರೂ.2.94 ಲಕ್ಷ ಬಿಡುಗಡೆಯಾಗಿದ್ದು, ರೂ.2.94 ಲಕ್ಷ ಬಳಕೆ ಮಾಡಲಾಗಿದೆ. 751 ರೈತ ಮತ್ತು ರೈತ ಮಹಿಳೆಯರಿಗೆ ತೋಟಗಾರಿಕೆ ಬೆಳೆಗಳ ಹೊಸ ತಂತ್ರಜ್ಞಾನ ಹಾಗೂ ಸಂಸ್ಕರಣೆ ಕುರಿತು ತರಬೇತಿ ನೀಡಲಾಗಿದೆ.

2. **ರೈತರಿಗೆ ಸಹಾಯ:**

ಅ) **ಸಸ್ಯ ಸಂರಕ್ಷಣೆ ಔಷಧಿ ವಿತರಣೆ ಕಾರ್ಯಕ್ರಮ:** ಶೇ.50ರ ರಿಯಾಯಿತಿ ದರದಲ್ಲಿ ರೈತರಿಗೆ ಸಸ್ಯ ಸಂರಕ್ಷಣೆಗೆ ಔಷಧಿ ವಿತರಣೆ ಮಾಡಲು ರೂ.6.89 ಲಕ್ಷ ಬಿಡುಗಡೆಯಾಗಿದ್ದು, ರೂ.6.76500 ಲಕ್ಷ ವೆಚ್ಚ ಭರಿಸಲಾಗಿದೆ. ಸದರಿ ಯೋಜನೆಯಡಿ ಬಾಕಿ ಉಳಿದ ಮೊತ್ತ ರೂ.0.12500 ಲಕ್ಷ.

## V. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಯೋಜನೆ:

ಸದರಿ ಯೋಜನೆಯಡಿ ರೂ.1.38750 ಲಕ್ಷ ಬಿಡುಗಡೆಯಾಗಿರುತ್ತದೆ. ಅದರಲ್ಲಿ ರೂ.1.38750 ಲಕ್ಷ ಖರ್ಚು ಮಾಡಲಾಗಿದೆ.

## 2018-19ನೇ ಸಾಲಿನ ಮಾರ್ಚ ಅಂತ್ಯಕ್ಕೆ ಉತ್ತರ ಕನ್ನಡ ಜಿಲ್ಲೆಯ ತೋಟಗಾರಿಕೆ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ವಿವರ:

| ಕ್ರ. ಸಂ. | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|
| 1. | ತೋಟಗಾರಿಕೆ ಉಪನಿರ್ದೇಶಕರು | 1 | 0 |
| 2. | ಕೇಂದ್ರ ಕಚೇರಿ ಸಹಾಯಕರು | 1 | 0 |
| 3. | ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ತೋ.ಮಿ) | 1 | 1 |
| 4. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | 11 | 7 |
| 5. | ಸಹಾಯಕ ತೋಟಗಾರಿಕೆ ನಿರ್ದೇಶಕರು | 54 | 18 |
| 6. | ಸಹಾಯಕ ಸಾಂಖ್ಯಿಕ ಅಧಿಕಾರಿ | 1 | 0 |
| 7. | ಅಧೀಕ್ಷಕರು | 7 | 0 |
| 8. | ಪ್ರಥಮ ದರ್ಜೆ ಸಹಾಯಕರು | 11 | 6 |
| 9. | ದ್ವಿತೀಯ ದರ್ಜೆ ಸಹಾಯಕರು | 6 | 5 |
| 10. | ಬೆರಳಚ್ಚುಗಾರರು | 1 | 1 |
| 11. | ತೋಟಗಾರಿಕೆ ಸಹಾಯಕರು | 36 | 12 |
| 12. | ವಾಹನ ಚಾಲಕರು | 1 | 0 |
| 13. | ಲ್ಯಾಬ್ ಸಹಾಯಕರು | 2 | 2 |
| 14. | ತೋಟಗಾರರು | 13 | 7 |
| 15. | ಅಟೆಂಡರ್ | 1 | 1 |
| 16. | ಸೇವಕರು | 2 | 2 |
| 17. | ಜೇನುಸಹಾಯಕರು | 3 | 2 |
| | **ಒಟ್ಟು** | **152** | **64** |

*****

ಮಾಹಿತಿ ಮೂಲ : ಜಿಲ್ಲಾ ತೋಟಗಾರಿಕಾ ಇಲಾಖೆ, ಶಿರಸಿ

# ರೇಷ್ಮೆ ಇಲಾಖೆ

ಉತ್ತರಕನ್ನಡ ಜಿಲ್ಲೆಯ 11 ತಾಲೂಕುಗಳಲ್ಲಿಯೂ ಸಹ ಹಿಪ್ಪುನೇರಳೆ ವ್ಯವಸಾಯ ಮಾಡುವ ರೈತರು ಇರುತ್ತಾರೆ. ರೇಷ್ಮೆ ಕೃಷಿಯ ಅಭಿವೃದ್ಧಿಗಾಗಿ ಈ ಕೆಳಗಿನಂತೆ ಕಾರ್ಯ ನಿರ್ವಹಿಸಲಾಗುತ್ತಿದೆ.

ರೇಷ್ಮೆ ಕೃಷಿಯ ಉಪನಿರ್ದೇಶಕರ ಕಾರ್ಯಾಲಯವು ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿದ್ದು ವಿಸ್ತರಣಾ ಚಟುವಟಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರ ವ್ಯಾಪ್ತಿಯಲ್ಲಿ ಒಂದು ರೇಷ್ಮೆ ಕೃಷಿ ಸಹಾಯಕ ನಿರ್ದೇಶಕರ ಕಾರ್ಯಲಯ, 07 ತಾಂತ್ರಿಕ ಸೇವಾ ಕೇಂದ್ರಗಳು, 05 ವಿಸ್ತರಣಾ ಹಾಗೂ ಚಾಕಿ ಸಾಕಾಣಿಕಾ ಕೇಂದ್ರಗಳು, 05 ಚಾಕಿ ಸಾಕಾಣಿಕ ಕೇಂದ್ರಗಳು, 01 ರೇಷ್ಮೆ ಗೂಡು ಮಾರುಕಟ್ಟೆ, 01 ರೇಷ್ಮೆ ಬಿತ್ತನೆ ಕೋಠಿ ಹಾಗೂ 01 ರೇಷ್ಮೆ ಕೃಷಿ ಕ್ಷೇತ್ರ ಇರುತ್ತದೆ. ಈ ಎಲ್ಲಾ ಸಂಸ್ಥೆಗಳಿಗೆ ಸೇರಿ ಒಟ್ಟು 01 ಲಿಪಿಕ ನೌಕರರು ಹಾಗೂ 10 ತಾಂತ್ರಿಕ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಉತ್ತರಕನ್ನಡ ಜಿಲ್ಲಾದ್ಯಂತ ರೇಷ್ಮೆ ಇಲಾಖೆಯು ಸ್ವಂತ ಕಟ್ಟಡವನ್ನು ಹೊಂದಿದ್ದು, ಚಾಕಿ ಸಾಕಾಣಿಕ ಕೇಂದ್ರ ಕಛೇರಿಗಳು ಹಾಗೂ ರೇಷ್ಮೆ ಕೃಷಿ ಕ್ಷೇತ್ರಗಳ ಕಟ್ಟಡಗಳು ಎಲ್ಲಾ ಸೇರಿ 38 ಕಟ್ಟಡಗಳಿರುತ್ತವೆ. 04 ಚಾಕಿ ಸಾಕಾಣಿಕಾ ಕೇಂದ್ರ ಕಟ್ಟಡಗಳನ್ನು ತಾತ್ಕಲಿಕವಾಗಿ ಗ್ರಾಮ ಪಂಚಾಯತಗಳಿಗೆ, ರೇಷ್ಮೆ ಕೃಷಿ ಕ್ಷೇತ್ರ ಬಾಣಸಗೇರಿಯಲ್ಲಿನ ಹೆಚ್ಚುವರಿ ಕಟ್ಟಡಗಳನ್ನು ಸರ್ಕಾರಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಹಾಗೂ ಶಿರಸಿ ಸರ್ಕಿಣದಲ್ಲಿರುವ ಹೆಚ್ಚುವರಿ ಕಟ್ಟಡಗಳನ್ನು ತೋಟಗಾರಿಕಾ ಮಹಾವಿದ್ಯಾಲಯ ನಡೆಸಲು ತಾತ್ಕಾಲಿಕವಾಗಿ ವಹಿಸಿಕೊಡಲಾಗಿರುತ್ತದೆ. ವಿಸ್ತರಣಾ ಕೆಲಸಗಳಿಗಾಗಿ 2 ಇಲಾಖಾ ವಾಹನಗಳಿರುತ್ತದೆ. ಜಿಲ್ಲೆಯಲ್ಲಿ ಹಾಲಿ ಒಟ್ಟು 408.10 ಎಕರೆ ಹಿಪ್ಪುನೇರಳೆ ಪ್ರದೇಶವಿದ್ದು, ಒಟ್ಟು 330 ಜನ ರೈತರು 175 ಗ್ರಾಮಗಳಲ್ಲಿ ಹಿಪ್ಪುನೇರಳೆ ವ್ಯವಸಾಯ ಕೈಗೊಂಡಿದ್ದಾರೆ. ರೇಷ್ಮೆ ವ್ಯವಸಾಯವನ್ನು ಕೈಗೊಂಡ ರೈತರಲ್ಲಿ 21 ಜನ ಪರಿಶಿಷ್ಟ ಜಾತಿಗೂ, 04 ಜನ ರೈತರು ಪರಿಶಿಷ್ಟ ಪಂಗಡಕ್ಕೂ, 46 ಮಹಿಳಾ ರೇಷ್ಮೆ ಬೆಳೆಗಾರರು ಹಾಗೂ 13 ಜನ ಅಲ್ಪಸಂಖ್ಯಾತ ರೈತರಿರುತ್ತಾರೆ.

ಈ ಜಿಲ್ಲೆಯಲ್ಲಿ ಭೌಗೋಳಿಕವಾಗಿ ಕರಾವಳಿ, ಮಲೆನಾಡು, ಬಯಲುಸೀಮೆ ಎಂಬ 3 ಪ್ರದೇಶಗಳಾಗಿ ಗುರುತಿಸಲಾಗಿದ್ದು, ಸಮಶೀತೋಷ್ಣ ಹವಾಗುಣವನ್ನು ಹೊಂದಿರುತ್ತದೆ. ಇಲ್ಲಿನ ಹವಾಮಾನವು ರೇಷ್ಮೆ ವ್ಯವಸಾಯಕ್ಕೆ ಪೂರಕವಾಗಿದ್ದು ಆರ್ಥಿಕ ಬೆಳೆಗಳಲ್ಲಿ ರೇಷ್ಮೆಯು ಒಂದಾಗಿರುತ್ತದೆ. ಇಲ್ಲಿ ಉತ್ತಮ ಗುಣಮಟ್ಟದ ದ್ವಿತಳಿ ಬಿತ್ತನೆಯ ರೇಷ್ಮೆ ಗೂಡುಗಳನ್ನು ಬೆಳೆಸಲಾಗುತ್ತಿದೆ. ಇಲ್ಲಿಯ ದ್ವಿತಳಿ ರೇಷ್ಮೆ ಗೂಡುಗಳನ್ನು ಮೊಟ್ಟೆ ತಯಾರಿಸಲು ಬಳಸುವುದರಿಂದ ಬಿತ್ತನೆ ವಲಯವೆಂದು ಪರಿಗಣಿಸಲಾಗಿದೆ. ನಮ್ಮ ರಾಜ್ಯದಲ್ಲಿಯೇ ಅತ್ಯುತ್ತಮ ಗುಣಮಟ್ಟದ ರೇಷ್ಮೆ ಗೂಡುಗಳನ್ನು ಬೆಳೆಸಿದ ಹೆಗ್ಗಳಿಕೆ ಈ ಜಿಲ್ಲೆಗೆ ಇರುತ್ತದೆ. ಈ ಜಿಲ್ಲೆಯ ರೈತರಿಗೆ ಬೇಕಾಗುವ ಮೊಟ್ಟೆಗಳನ್ನು ರೇಷ್ಮೆ ಬಿತ್ತನೆ ಕೋಠಿ, ಶಿರಸಿಯಲ್ಲಿಯೇ ತಯಾರಿಸಿ ನೀಡಲಾಗುತ್ತಿದೆ. ರೈತರು ಬೆಳೆದ ಬಿತ್ತನೆ ಗೂಡುಗಳನ್ನು, ಇಲ್ಲಿನ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಅವಶ್ಯಕತೆಗನುಗುಣವಾಗಿ ಶಿರಸಿಯಲ್ಲಿಯೇ ಬೇಡಿಕೆ ಆಧಾರದ ಮೇಲೆ ಖರೀದಿಸುವ ವ್ಯವಸ್ಥೆಯು ಈ ಹಿಂದೆ ಇದ್ದು, ಸದ್ಯಕ್ಕೆ ಇಲ್ಲಿನ ವಹಿವಾಟು ಕಡಿಮೆ ಆದ ಕಾರಣ ರೈತರು ತಾವು ಬೆಳೆದ ರೇಷ್ಮೆ ಗೂಡು ಮಾರುಕಟ್ಟೆ, ಬೆಂಗಳೂರು, ತುಮಕೂರು ರಾಯಾಪುರ, (ಧಾರವಾಡ), ಶಿರಹಟ್ಟಿ, ರಾಮನಗರ ಹಾಗೂ ಹಾವೇರಿಗೆ ಮಾರಾಟ ಮಾಡಿ ಹೆಚ್ಚಿನ ದರವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಜಿಲ್ಲೆಯ ರೈತರು ಹೊಸ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಉತ್ತಮ ರೇಷ್ಮೆ ಗೂಡುಗಳನ್ನು ಬೆಳೆದು, ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳುತ್ತಿದ್ದಾರೆ.

**ಹೊಸ ಹಿಪ್ಪುನೇರಳೆ ನಾಟಿ ಸಾಧನೆ :**

2018–19ನೇ ಸಾಲಿನಲ್ಲಿ 90–00 ಎಕರೆ ಹಿಪ್ಪುನೇರಳೆ ನಾಟಿ ಗುರಿಯನ್ನು ಹೊಂದಲಾಗಿದ್ದು, 92.25 ಎಕರೆ ಹಿಪ್ಪುನೇರಳೆ ನಾಟಿ ಆಗಿರುತ್ತದೆ. ಶೇಕಡಾ 102.9 ರಷ್ಟು ಸಾಧನೆ ಆಗಿದೆ.

ರೇಷ್ಮೆ ಕೃಷಿ ಅಭಿವೃದ್ದಿಗಾಗಿ 2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ ಹಾಗೂ ರಾಜ್ಯ ವಲಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಸಾಧನೆಯ ವಿವರಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ.

**1. ಇಲಾಖೆಗಳು ನಿರ್ವಹಿಸುತ್ತಿರುವ ಯೋಜನೆಗಳ ಪಟ್ಟಿ ಈ ಕೆಳಗಿನಂತಿದೆ :**

1. ಜಿಲ್ಲಾ ವಲಯ ಯೋಜನೆ
2. ತಾಲೂಕಾ ಪಂಚಾಯತ ಕಾರ್ಯಕ್ರಮಗಳು
3. ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ
4 ರಾಜ್ಯ ರೇಷ್ಮೆ ಅಭಿವೃದ್ಧಿ ಯೋಜನೆ
5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

**2. 2018–19 ರ ಸಾಲಿನಲ್ಲಿನ ಯೋಜನಾವಾರು ಸಾಧನೆ ವಿವರಗಳು**

## ಜಿಲ್ಲಾ ವಲಯ ಯೋಜನೆ

### 1. ಸಲಹಾ ಸೇವೆಗಳು, ಪ್ರಾತ್ಯಕ್ಷಿತೆ, ಪ್ರಚಾರ, ಶ್ರವಣ ಮತ್ತು ವಸ್ತು ಪ್ರದರ್ಶನ ಕ್ಷೇತ್ರಗಳು:

ರೇಷ್ಮೆ ಕೃಷಿಯ ಅಭಿವೃದ್ದಿಯ ದೃಷ್ಟಿಯಿಂದ ರೈತರಿಗಾಗಿ ಹೊಸ ತಾಂತ್ರಿಕತೆಗಳು ಹಾಗೂ ಇಲಾಖೆ ಸೌಲಭ್ಯಗಳ ಕುರಿತ ಮಾಹಿತಿ ನೀಡಲು ಕ್ಷೇತ್ರೋತ್ಸವಗಳು, ಜಿಲ್ಲಾ ಮಟ್ಟದ ಉತ್ಸವಗಳಲ್ಲಿ ವಸ್ತು ಪ್ರದರ್ಶನ ಏರ್ಪಡಿಸುವುದು, ರೇಷ್ಮೆ ಬೆಳೆಗಾರರಿಗೆ ಜಿಲ್ಲೆಯ ಹೊರಗಡೆ ಅಧ್ಯಯನ ಪ್ರವಾಸ ಏರ್ಪಡಿಸಲಾಗಿದೆ.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಗುರಿ | | ಹಣ ಬಿಡುಗಡೆ | ಸಾಧನೆ | | ಪ್ರತಿಶತ ಸಾಧನೆ |
|---|---|---|---|---|---|---|---|
| | | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | |
| 1. | ವಸ್ತು ಪ್ರದರ್ಶನ / ಕ್ಷೇತ್ರೋತ್ಸವ, ಅಧ್ಯಯನ ಪ್ರವಾಸ | 1.25 ಲಕ್ಷ | 65 | 1.25 ಲಕ್ಷ | 1.22605 ಲಕ್ಷ | 65 | 98.0% |

### 2. ರೇಷ್ಮೆ ಬೆಳೆಗಾರರಿಗೆ ಸಹಾಯ ಕಾರ್ಯಕ್ರಮ:

ಹೊಸದಾಗಿ ಹಿಪ್ಪುನೇರಳೆ ತೋಟ ಸ್ಥಾಪನೆ ಮಾಡುವ ರೇಷ್ಮೆ ಕೃಷಿಕರಿಗೆ ಜಿಲ್ಲಾವಲಯ ಯೋಜನೆಯಡಿಯಲ್ಲಿ 1–00 ಎಕರೆಗೆ ರೂ.10500/–ಗಳ ಸಹಾಯಧನ ನೀಡಲಾಗುವುದು. ಅದರಂತೆ ನರ್ಸರಿ ಹೊಸದಾಗಿ ಮಾಡುವ ರೈತರಿಗೆ 1–00 ಎಕರೆಗೆ ಗರಿಷ್ಟ ರೂ. 75000–00 ಗಳ ಸಹಾಯಧನ ನೀಡಲಾಗುವುದು. ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ಶೇ.90 ರಂತೆ 1–00 ಎಕರೆಗೆ ರೂ. 12600/– ಗಳ ಸಹಾಯಧನ ನೀಡಲಾಗುವುದು. ಅದರಂತೆ ನರ್ಸರಿ ಹೊಸದಾಗಿ ಮಾಡುವ ರೈತರಿಗೆ 1.00 ಎಕರೆಗೆ ಶೇ.90 ರಂತೆ ರೂ. 1.35 ಲಕ್ಷಗಳ ಸಹಾಯಧನ ನೀಡಲಾಗುವುದು.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಗುರಿ | | ಹಣ ಬಿಡುಗಡೆ | ಸಾಧನೆ | | ಪ್ರತಿಶತ ಸಾಧನೆ |
|---|---|---|---|---|---|---|---|
| | | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | |
| 1. | ಹೊಸದಾಗಿ ಹಿಪ್ಪುನೇರಳೆ ತೋಟ ಸ್ಥಾಪನೆಗೆ ಸಹಾಯಧನ | 8.75 | 83.20 ಎಕರೆ | 8.75 | 7.11376 | 67.30 ಎಕರೆ | 81.3 |
| 2. | ಕಿಸಾನ ನರ್ಸರಿಗೆ ಸಹಾಯಧನ | 7.50 | 10.00 ಎಕರೆ | 7.50 | 4.50 | 6.00 ಎಕರೆ | 60.0 |
| 3. | ವಿಶೇಷ ಘಟಕ ಯೋಜನೆ | | | | | | |
| | 1. ಹೊಸದಾಗಿ ಹಿಪ್ಪುನೇರಳೆ ತೋಟ ಸ್ಥಾಪನೆಗೆ ಸಹಾಯಧನ | 0.65 | 5.00 ಎಕರೆ | 0.65 | 0.63 | 5.00 ಎಕರೆ | 96.9 |
| | 2. ನರ್ಸರಿಗೆ ಸಹಾಯಧನ | 1.35 | 2.00 ಎಕರೆ | 1.35 | 1.35 | 2.00 ಎಕರೆ | 100.0 |

### 3. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ :

**1. ಹನಿ ನೀರಾವರಿ ಘಟಕ ಅಳವಡಿಕೆಗೆ ಸಹಾಯಧನ :** (Non DPAP)

ಪ್ರತಿ ಹೆಕ್ಟೇರ್ ಹನಿ ನೀರಾವರಿ ಘಟಕ ಅಳವಡಿಕೆ ಘಟಕ ವೆಚ್ಚ ರೂ. 103427/– ಗಳ ಘಟಕ ವೆಚ್ಚದ ಶೇ.90 ರ ಸಹಾಯಧನ ಅಂದರೆ ರೂ. 90380/– ಗಳನ್ನು ನೀಡಲಾಗುವುದು. ಒಂದು ಎಕರೆ ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆ ಘಟಕ ವೆಚ್ಚ ರೂ. 41369/– ಘಟಕ ವೆಚ್ಚಕ್ಕೆ ರೂ. 37232–00 ಗಳ ಸಹಾಯಧನ ನೀಡಲಾಗಿದೆ.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|---|
| | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1. | ಹನಿ ನೀರಾವರಿ ಘಟಕ (ಹೆಕ್ಟೇರ) | 24.00 | 24.00 | 21.59776 | 23.41 ಹೆಕ್ಟೇರ್ | 97.5 | 89.9 |

## ರಾಜ್ಯ ರೇಷ್ಮೆ ಅಭಿವೃದ್ಧಿ ಯೋಜನೆ (ಸಾಮಾನ್ಯ)

**1. ರೇಷ್ಮೆ ಹುಳು ಸಾಕುವ ಮನೆಗೆ ಸಹಾಯಧನ:**

400 ರಿಂದ 600 ಚದರ ಅಡಿ ಹುಳು ಸಾಕುವ ಮನೆ ನಿರ್ಮಾಣಕ್ಕೆ ರೂ. 3.00 ಲಕ್ಷ ಘಟಕ ವೆಚ್ಚವಿದ್ದು, ರೂ. 2.25 ಲಕ್ಷ ಸಾಮಾನ್ಯ ರೈತರಿಗೆ ಹಾಗೂ ರೂ. 2.70 ಲಕ್ಷ ಪ.ಜಾ & ಪ.ಪಂ. ಗಳ ರೈತರಿಗೆ ಸಹಾಯಧನ ದೊರೆಯುವುದು. 225 ಚದರ ಅಡಿ ಹುಳು ಸಾಕುವ ಮನೆ ನಿರ್ಮಾಣಕ್ಕೆ ರೂ. 0.90 ಘಟಕ ವೆಚ್ಚವಿದ್ದು, ಗರಿಷ್ಠ ರೂ. 0.63 ಗಳವರೆಗೆ ಸಹಾಯಧನ ದೊರಕುವುದು ಹಾಗೂ ತಾತ್ಕಾಲಿಕ ಶೆಡ್ ನಿರ್ಮಾಣಕ್ಕೆ ಘಟಕ ವೆಚ್ಚ ರೂ. 0.30 ಇದ್ದು, ಗರಿಷ್ಠ ರೂ. 0.21 ಸಹಾಯಧನ ದೊರೆಯುವುದು.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|---|---|
| | | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1. | ಹುಳು ಸಾಕುವ ಮನೆ ನಿರ್ಮಾಣಕ್ಕೆ **ಸಹಾಯಧನ 600 ಚ.ಅ.** | 13.750 | 10 | 8.725 | 1.375 | 1 | 15.7 | 10.0 |
| 2. | ಹುಳು ಸಾಕುವ ಮನೆ ನಿರ್ಮಾಣಕ್ಕೆ **ಸಹಾಯಧನ 225 ಚ.ಅ.** | – | – | – | 7.350 | 35 | 660.0 | 0 |
| | **ಒಟ್ಟು** | **13.75** | **10** | **8.725** | **8.725** | **36** | **100.0** | **360.0** |

## 2. ರೇಷ್ಮೆ ಹುಳು ಸಾಕುವ ಸಲಕರಣೆ ಖರೀದಿ :

ಹುಳು ಸಾಕುವ ಸಲಕರಣೆ ಘಟಕ ವೆಚ್ಚ ರೂ.25,000/– ಗಳಿದ್ದು, ಗರಿಷ್ಠ ರೂ. 18,750/– ಗಳವರೆಗೆ ಶೇ.75 ರಷ್ಟು ಸಹಾಯಧನ ನೀಡಲಾಗುವುದು. ಬ್ಯಾಂಕ್ ಸಾಲ ಅಥವಾ ಸ್ವಂತ ವೆಚ್ಚದಿಂದ ಸಲಕರಣೆ ತಯಾರಿಸಿಕೊಳ್ಳಲು ಅವಕಾಶವಿರುತ್ತದೆ.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಗುರಿ | | ಅನುದಾನ ಬಿಡುಗಡೆ | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|---|---|
| | | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1. | ರೇಷ್ಮೆ ಹುಳು ಸಾಕುವ ಸಲಕರಣೆ | 9.375 | 50 | 9.563 | 9.54949 | 81 | 99.8 | 162.0 |

## 3. ನೂತನ ಕತೃತ್ವ ಶಕ್ತಿ ಹಾಗೂ ಭಾಗಿದಾರರಿಗೆ ಸವಲತ್ತು ಯೋಜನೆ

ಜಿಲ್ಲೆಯಲ್ಲಿರುವ ರೇಷ್ಮೆ ಕೃಷಿಕರು ಉತ್ಪಾದಿಸುವ ಗೂಡಿಗೆ ಪ್ರೋತ್ಸಾಹಧನ ನೀಡಲಾಗಿದೆ.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಗುರಿ | | ಬಿಡುಗಡೆ | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|---|---|
| | | ಆರ್ಥಿಕ | ಭೌತಿಕ | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1. | ಬಿತ್ತನೆ ಗೂಡು ಉತ್ತೇಜಕಗಳು (ರೂ. 150/–) | 5.00 | 2857.14 ಕೆ.ಜಿ | 5.37124 | 5.37102 | 3069.15 ಕೆ.ಜಿ | 99.9 | 107.4 |
| 2. | ದ್ವಿತಳಿ ಗೂಡಿಗೆ ಪ್ರೋತ್ಸಾಹ (ರೂ. 50) | 8.00 | 11428.57 ಕೆಜಿ | 5.35676 | 5.34808 | 7640.11 | 99.8 | 66.8 |
| 3. | ಗೂಡು ಸಾಗಾಣಿಕಾ ವೆಚ್ಚ (ರೂ. 10 ಪ್ರತಿ ಕೆಜಿಗೆ) | 1.00 | 10000.0 ಕೆ.ಜಿ | 1.750 | 1.74996 | 11499.0 ಕೆ.ಜಿ | 99.9 | 174.9 |
| 4. | ದ್ವಿತಳಿ ಚಾಕಿ ವೆಚ್ಚಗಳು | 2.90 | 29000 ಮೊಟ್ಟೆ | 2.512 | 2.512 | 25120 ಮೊಟ್ಟೆ | 100.0 | 100.0 |
| | **ಒಟ್ಟು** | **16.990** | | **14.990** | **14.98106** | | **88.1** | **99.9** |

## 4. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :

ಈ ಯೋಜನೆಯಲ್ಲಿ ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್ ಕಾರ್ಯಕ್ರಮದಡಿ ಘಟಕ ದರ ರೂ. 12125–00 ಗಳಿಗೆ ಶೇ. 50ರಂತೆ ರೂ. 6263–00 ಸಹಾಯಧನ ನೀಡಲಾಗಿದೆ. ಹಾಗೂ ಹಿಪ್ಪು ನೇರಳೆ ತೋಟಕ್ಕೆ ಟ್ರೆಂಚಿಂಗ್ & ಮಲ್ಚಿಂಗಗಾಗಿ ಘಟಕ ದರ ರೂ. 30000–00 ಶೇ. 50ರಂತೆ ರೂ. 15000–00 ಸಹಾಯಧನ ನೀಡಲಾಗಿದೆ.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಗುರಿ | | ಸಾಧನೆ | | ಶೇಕಡಾವಾರು ಸಾಧನೆ | |
|---|---|---|---|---|---|---|---|
| | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1. | ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್ | 1.25260 | 20.00 ಎಕರೆ | 1.25246 | 18.00 | 99.9 | 90.0 |
| 2. | ಟ್ರೆಂಚಿಂಗ್ & ಮಲ್ಚಿಂಗ್ | 3.750 | 25.00 | 3.750 | 25.00 | 100.0 | 100.0 |
| | **ಒಟ್ಟು** | 5.0026 | 45.00 ಎಕರೆ | 5.00246 | 43.00 | 95.5 | 99.9 |

2018–2019 ಸಾಲಿನಲ್ಲಿ 51670 ಮೊಟ್ಟೆ ಚಾಕಿ ಮಾಡಿ 30.665 ಮೆ.ಟನ್ ರೇಷ್ಮೆ ಗೂಡಿನ ಪ್ರಗತಿ ಸಾಧಿಸಲಾಗಿದೆ.

**ಯೋಜನೇತರ ಕಾರ್ಯಕ್ರಮಗಳು:**

ರೇಷ್ಮೆ ಕೃಷಿ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಶಿರಸಿ, ಏಳು ತಾಂತ್ರಿಕ ಸೇವಾ ಕೇಂದ್ರಗಳ ಹಾಗೂ 5 ವಿಸ್ತಾರಣಾ ಮತ್ತು ಚಾಕಿ ಸಾಕಾಣಿಕಾ ಕೇಂದ್ರಗಳು ಹಾಗೂ ಯೋಜನೆತರ ಚಾಕಿ ಸಾಕಾಣಿಕ ಕೇಂದ್ರಗಳು ಸಿಬ್ಬಂದಿಗಳ ವೇತನ, ಪ್ರಯಾಣ ಭತ್ಯೆ, ಸಾದಿಲ್ವಾರು ವೆಚ್ಚ, ವಾಹನಗಳ ಇಂಧನ, ದುರಸ್ತಿ ವೆಚ್ಚ, ಕಚೇರಿ ಬಾಡಿಗೆ, ದೂರವಾಣಿ, ವಿದ್ಯುತ್ ವೆಚ್ಚ, ದಿನಗೂಲಿ ಕೆಲಸಗಾರರ ವೇತನ ಇತ್ಯಾದಿ ವೆಚ್ಚಗಳನ್ನು ಯೋಜನೇತರ ಲೆಕ್ಕ ಶೀರ್ಷಿಕೆಯಲ್ಲಿ ರೂ. 190.46 ಲಕ್ಷ ಅನುದಾನದಲ್ಲಿ ರೂ. 104.01183 ಲಕ್ಷಗಳ ವೆಚ್ಚ ಭರಿಸಲಾಗಿದೆ.

**1. 2018–19 ನೇ ಸಾಲಿನಲ್ಲಿ ನಿಗದಿಪಡಿಸಲಾಗಿದ್ದ ಆರ್ಥಿಕ/ಭೌತಿಕ ಗುರಿ ಸಾಧಿಸಲಾಗಿದೆಯೇ? ಸಾಧಿಸಿಲ್ಲವಾದಲ್ಲಿ ಕಾರಣಗಳು:**

2018–19 ನೇ ಸಾಲಿನಲ್ಲಿ ಹೊಸತಳಿ ಹಿಪ್ಪುನೇರಳೆ ನಾಟಿ ಕಾರ್ಯಕ್ರಮದಲ್ಲಿ 102.9% ರಷ್ಟು ಸಾಧನೆ ಆಗಿರುತ್ತದೆ. 2019–20 ನೇ ಸಾಲಿಗೆ 100.00 ಎಕರೆಗೆ ಹೊಸ ನಾಟಿ ಮಾಡಿಸಲು ಕ್ರಮ ವಹಿಸಲಾಗುತ್ತಿದೆ.

**2. 2018–19 ರ ಸಾಲಿನಲ್ಲಿ ಗುರುತಿಸಲಾದ ಸಮಸ್ಯೆಗಳು 2019–20 ನೇ ಸಾಲಿನಲ್ಲಿ ಮರುಕಳಿಸದಂತೆ ನಿಯಂತ್ರಿಸಲು ಕೈಗೊಳ್ಳಲಾದ ಮುಂಜಾಗ್ರತಾ ಕ್ರಮಗಳ ಮಾಹಿತಿ**

1. ಹಿಪ್ಪುನೇರಳೆ ತೋಟಕ್ಕೆ ಕಾಡು ಪ್ರಾಣಿಗಳ ಕಾಟ
2. ನೀರಿನ ಕೊರತೆ
3. ಸಿಬ್ಬಂದಿಗಳ ಕೊರತೆ

ಈ ರೀತಿಯಾದ ಸಮಸ್ಯೆಗಳನ್ನು ಗುರುತಿಸಲಾಗಿದ್ದು 2019–20 ನೇ ಸಾಲಿನಲ್ಲಿ ಸದರಿ ಸಮಸ್ಯೆಗಳನ್ನು ನೀಗಿಸಲು ಮರಗಡ್ಡೆಗಳನ್ನು ಬೆಳೆಸುವುದು, ಸಾಕಷ್ಟು ಹಿಪ್ಪುನೇರಳೆ ನರ್ಸರಿ ತಯಾರಿಸಿಟ್ಟುಕೊಳ್ಳಲಾಗಿದೆ ಹಾಗೂ ಪ್ರಸ್ತುತ ಲಭ್ಯವಿರುವ ಸಿಬ್ಬಂದಿಗಳಿಗೆ ಹೆಚ್ಚುವರಿ ಹೊಣೆಯನ್ನು ನೀಡಲಾಗಿದೆ.

**3. 2019–20 ನೇ ಸಾಲಿನ ಯೋಜನಾವಾರು ಗುರಿಸಾಧಿಸಲು ಹಂತವಾರು ನಿಗದಿಪಡಿಸಿಕೊಳ್ಳಲಾದ ಕಾರ್ಯಕ್ರಮಗಳ ವಿವರ**

1. 2019–20 ನೇ ಸಾಲಿನ ಜಿಲ್ಲಾವಲಯ ಯೋಜನೆಗಳ ಅನುಷ್ಠಾನಕ್ಕಾಗಿ ಕರಡು ಪ್ರತಿಗಳನ್ನು ತಯಾರಿಸಿ ಈಗಾಗಲೇ ಜಿಲ್ಲಾಪಂಚಾಯತ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಸದರಿ ಕರಡು ಪ್ರತಿಗಳು ಅನುಮೋದನೆ ಪಡೆದು ಹಂತವಾರು ಕಾರ್ಯಕ್ರಮಗಳನ್ನು ನಿಗದಿಪಡಿಸಿಕೊಂಡು ಅನುಷ್ಠಾನಗೊಳಿಸಲಾಗುವುದು.

2. 2019–20 ನೇ ಸಾಲಿಗಾಗಿ ರಾಜ್ಯವಲಯ ಯೋಜನೆಗಳಡಿ ಗುರಿ ಪ್ರಕಾರ ಸಾಧನೆಗೆ ಕ್ರಮ ವಹಿಸಲಾಗುವುದು.

**4. ಯೋಜನಾ ಕಾರ್ಯಕ್ರಮಗಳು ಅನುಷ್ಠಾನಗೊಳಿಸುವಲ್ಲಿ ಎದುರಿಸಬೇಕಾಗಿ ಬರಬಹುದಾದ ಸಮಸ್ಯೆಗಳು**

1. ಹಿಪ್ಪುನೇರಳೆ ತೋಟಕ್ಕೆ ಕಾಡು ಪ್ರಾಣಿಗಳ ಕಾಟ
2. ನೀರಿನ ಕೊರತೆ
3. ಸಿಬ್ಬಂದಿಗಳ ಕೊರತೆ
4. ನರ್ಸರಿಗಳ ಅಲಭ್ಯತೆ

## 5. ಸಮಸ್ಯೆಗಳನ್ನು ಬಗೆಹರಿಸಲು ರೂಪಿಸಿಕೊಳ್ಳಲಾಗುವ ಕಾರ್ಯತಂತ್ರಗಳು

1. ನೀರಿನ ಕೊರತೆಯನ್ನು ನೀಗಿಸಲು 2019–20 ನೇ ಸಾಲಿನಿಂದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ನೀಡಿರುವ ನಿರ್ದೇಶನದಂತೆ ಮರಗಡ್ಡೆಗಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸಲಾಗಿದೆ.

2. ಕಾಡುಪ್ರಾಣಿಗಳ ಹತೋಟಿಗಾಗಿ ಶೇಡ್ ನೆಟ್‌ಗಳನ್ನು ತೋಟದ ಸುತ್ತಲೂ ಅಳವಡಿಸಿಕೊಳ್ಳುವಂತೆ ಕಾರ್ಯಕ್ರಮ ರೂಪಿಸಲಾಗಿದೆ.

3. 2019–20ನೇ ಸಾಲಿನಲ್ಲಿ ನಿವೃತ್ತಿ ಹೊಂದುವ ಸಿಬ್ಬಂದಿ/ಅಧಿಕಾರಿಗಳು ಬಹಳ ಸಂಖ್ಯೆಯಲ್ಲಿರುವುದರಿಂದ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಉಂಟಾಗಿರುತ್ತದೆ. ಪ್ರಸ್ತುತ ಹಾಲಿ ಇರುವ ಸಿಬ್ಬಂದಿಗಳಿಗೆ ಹೆಚ್ಚಿನ ಹೊಣೆಯನ್ನು ನೀಡಲಾಗಿದೆ.

4. ನರ್ಸರಿಗಳ ಕೊರತೆ ಆಗದಂತೆ 2019–20 ನೇ ಸಾಲಿಗಾಗಿ ಈಗಾಗಲೇ ಎಲ್ಲಾ ತಾಲೂಕಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ನರ್ಸರಿಯನ್ನು ತಯಾರಿಸಿಟ್ಟುಕೊಳ್ಳಲಾಗಿದೆ.

## 6. MGNREGA

MGNREGA ಯೋಜನೆಯಡಿ ಅತೀ ಸಣ್ಣ ರೈತರನ್ನು ಗುರುತಿಸಿ, ಇಲಾಖೆಯಿಂದ ಸಿಗುವ ಸವಲತ್ತುಗಳ ಕುರಿತು ಕ್ಷೇತ್ರ ಮಟ್ಟದಲ್ಲಿ ಗುಂಪು ಸಭೆ ಏರ್ಪಡಿಸಿ, ಮಾಹಿತಿ ಒದಗಿಸಲಾಗುತ್ತಿದೆ. ಈ ಕೆಳಗೆ ನಮೂದಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಹೊಸ ಹಿಪ್ಪು ನೇರಳೆ ತೋಟದ ಸ್ಥಾಪನೆ
2. ನರ್ಸರಿ ಬೆಳೆಸುವುದು.
3. ಎರಡು ಮತ್ತು ಮೂರನೇ ವರ್ಷದ ವರೆಗೆ ನಿರ್ವಹಣೆ
4. ಕಾಂಪೋಸ್ಟ ಗುಂಡಿ
5. ಮರ ಪದ್ಧತಿಯ ಬೇಸಾಯ ಕ್ರಮ

## 7. ಯೋಜನಾ ಅನುಷ್ಠಾನದಲ್ಲಿ ಅಳವಡಿಸಬಹುದಾದ ಆವಿಷ್ಕಾರಾತ್ಮಕ/ಸಕಾರಾತ್ಮಕ ಚಿಂತನೆಗಳ ಬಗ್ಗೆ ಮಾಹಿತಿ

ಈಗಾಗಲೇ 2019–20 ನೇ ಸಾಲಿನ ಕ್ರಿಯಾಯೋಜನೆ ಅನುಸಾರ ಹೊಸತಳಿ ಹಿಪ್ಪು ನೇರಳೆ ನಾಟಿಗಾಗಿ ರೈತರನ್ನು ಗುರುತಿಸಲಾಗಿದೆ ಹಾಗೂ ನರ್ಸರಿಯನ್ನು ಸಾಕಷ್ಟು ಪ್ರಮಾಣದಲ್ಲಿ ತಯಾರಿಸಿಟ್ಟುಕೊಳ್ಳಲಾಗಿದೆ. ಕೇಂದ್ರ ಕಛೇರಿಯಿಂದ ನಿಗದಿಪಡಿಸಲಾದ ಗುರಿಯನುಸಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. MGNREGA ಅಡಿ ಅತಿ ಸಣ್ಣ ರೈತರನ್ನು ಗುರುತಿಸಿ ಹೊಸತಳಿ ಹಿಪ್ಪು ನೇರಳೆ ನಾಟಿ ಕೈಗೊಳ್ಳಲು ಕ್ರಿಯಾಯೋಜನೆ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಮರಗಡ್ಡೆ ಬೆಳೆಸಲು ರೈತರನ್ನು ಜಿಲ್ಲಾವಲಯ ಯೋಜನೆಯಡಿ ಅಧ್ಯಯನ ಪ್ರವಾಸ ಮೂಲಕ ಸಾಂಪ್ರದಾಯಿಕ ಪ್ರದೇಶಗಳಿಗೆ (ಕೋಲಾರ ಜಿಲ್ಲೆಗೆ) ಕರೆದುಕೊಂಡು ಹೋಗಿ ಪ್ರಾತ್ಯಕ್ಷಿಕೆ ಹಾಗೂ ಸಂವಾದ ನಡೆಸುವ ಮೂಲಕ ರೈತರಿಗೆ ಮನವರಿಕೆ ಮಾಡಿಸಲಾಗಿದೆ. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಹಾಗೂ ಸಂಶೋಧನಾ ಸಂಸ್ಥೆ ತಲಘಟ್ಟಪುರ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಿ ಈ ಪ್ರದೇಶದಲ್ಲಿರುವ ರೇಷ್ಮೆ ಕೃಷಿ ಎಡರು ತೊಡರುಗಳ ಬಗ್ಗೆ ಸಂದೇಹಗಳನ್ನು ನಿವಾರಿಸಲಾಗಿದೆ.

*****

ಮಾಹಿತಿ ಮೂಲ : ಜಿಲ್ಲಾ ರೇಷ್ಮೆ ಕೃಷಿ ಇಲಾಖೆ, ಶಿರಸಿ

# ಜಿಲ್ಲಾ ಪಂಚಾಯತ, ಕೈಗಾರಿಕಾ ವಿಭಾಗ

**ಇಲಾಖೆಯ ಮುಖ್ಯ ಉದ್ದೇಶ :**

ಕೈಗಾರಿಕೆಗಳಿಗೆ ಸರ್ಕಾರದಿಂದ ಲಭ್ಯವಿರುವ ಸೌಲಭ್ಯಗಳ ಬಗ್ಗೆ ತಿಳುವಳಿಕೆ ನೀಡಲು ತಾಲೂಕಾ ಮಟ್ಟದಲ್ಲಿ ಜಾಗೃತಿ ಶಿಬಿರ, ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ ಹಾಗೂ ವಸ್ತು ಪ್ರದರ್ಶನ ಏರ್ಪಡಿಸುವುದು. ಗ್ರಾಮೀಣ ಕುಶಲಕರ್ಮಿಗಳಿಗೆ ಹಳೆಯ ಮಾದರಿಯ ಹಾಗೂ ಹೆಚ್ಚು ಉತ್ಪಾದನೆಗೆ ಸಹಾಯಕವಲ್ಲದ ಉಪಕರಣಗಳನ್ನು ಉಪಯೋಗಿಸುತ್ತಿದ್ದು, ಸುಧಾರಿತ ಹಾಗೂ ಉತ್ತಮ ಉಪಕರಣಗಳನ್ನು ಖರೀದಿಸಲು ಸಾಮರ್ಥ್ಯವಿಲ್ಲದಿರುವುದರಿಂದ ಉಚಿತವಾಗಿ ಸುಧಾರಿತ ಉಪಕರಣ/ಪವರಟೂಲ್ಸ ವಿತರಿಸುವ ಮೂಲಕ ಹಾಗೂ ಸಾಲ ಸೌಲಭ್ಯ ಒದಗಿಸುವ ಮೂಲಕ ಅವರನ್ನು ಆರ್ಥಿಕವಾಗಿ ಹೆಚ್ಚು ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶವಿರುತ್ತದೆ. ಈ ಉದ್ದೇಶವನ್ನು ಈಡೇರಿಸಲು ಈ ಕೆಳಕಂಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ

## ಅ) ಜಿಲ್ಲಾ ಉದ್ಯಮ ಕೇಂದ್ರ. (ಬಂಡವಾಳ ಹೂಡಿಕೆ ಸಹಾಯಧನ) : ಅನುದಾನ ರೂ. 6.00 ಲಕ್ಷ.

ಈ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವೃತ್ತಿಪರ ಕುಶಲಕರ್ಮಿಗಳಿಗೆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವಂತೆ ಯೋಜನಾ ವೆಚ್ಚದ ಶೇ. 60 ರಷ್ಟು ಗರಿಷ್ಟ ರೂ.10000-00 ರವರೆಗಿನ ಸಹಾಯಧನ ಹಾಗೂ ಉಳಿಕೆ ಯೋಜನಾ ವೆಚ್ಚವು ಬ್ಯಾಂಕಿನ ಸಾಲ ಹಾಗೂ ಕುಶಲಕರ್ಮಿಯ ವತಿಯಿಂದ ಪೂರೈಸುವುದು. ಈ ಕಾರ್ಯಕ್ರಮದ ಅಡಿಯಲ್ಲಿ 60 ಫಲಾನುಭವಿಗಳಿಗೆ ತಲಾ ರೂ. 10000-00 ರಂತೆ ರೂ. 6.00 ಲಕ್ಷ ಖರ್ಚಾಗಿದ್ದು, ಶೇ. 100 ರಷ್ಟು ಗುರಿಯನ್ನು ಸಾಧಿಸಲಾಗಿದೆ.

## ಬ) ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಉಪಕರಣ ಸರಬರಾಜು: ಅನುದಾನ ರೂ. 13.00 ಲಕ್ಷ.

ಗ್ರಾಮೀಣ ಪ್ರದೇಶದಲ್ಲಿರುವ ಕುಶಲಕರ್ಮಿಗಳು ಹಳೆಯ ಮಾದರಿಯ ಹಾಗೂ ಹೆಚ್ಚು ಉತ್ಪಾದನೆಗೆ ಸಹಾಯಕವಲ್ಲದ ಉಪಕರಣಗಳನ್ನು ಉಪಯೋಗಿಸುತ್ತಿದ್ದು, ಸುಧಾರಿತ ಉತ್ತಮ ಉಪಕರಣ, ಹೊಲಿಗೆ ಯಂತ್ರ ಹಾಗೂ ಪವರ ಟೂಲ್ಸ ಕೊಳ್ಳಲು ಸಾಮರ್ಥ್ಯವಿಲ್ಲದಿರುವುದರಿಂದ ಉಚಿತವಾಗಿ ಸದ್ರಿ ಉಪಕರಣಗಳನ್ನು ವಿತರಿಸುವ ಮೂಲಕ ಅವರನ್ನು ಆರ್ಥಿಕವಾಗಿ ಹೆಚ್ಚು ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಪ್ರತಿ ಫಲಾನುಭವಿಗೆ ರೂ. 5000-00 ರವರೆಗೆ ಒಳ್ಳೆಯ ಗುಣಮಟ್ಟದ ಒಟ್ಟು 260 ಸುಧಾರಿತ ಉಪಕರಣ, ಬಡಿಗತನ ಪವರ ಟೂಲ್ಸ ಹಾಗೂ ಹೊಲಿಗೆ ಯಂತ್ರ ಸರಬರಾಜು ಮಾಡಲಾಗಿದೆ. ಈ ಕಾರ್ಯಕ್ರಮಕ್ಕಾಗಿ 2018-19ನೇ ಸಾಲಿಗೆ ನಗಧಿಪಡಿಸಿದ ಅನುದಾನ ರೂ. 13.00 ಲಕ್ಷ ಖರ್ಚಾಗಿದ್ದು, ಶೇ. 100 ರಷ್ಟು ಗುರಿಯನ್ನು ಸಾಧಿಸಲಾಗಿದೆ.

**1) 2018–19ನೇ ಸಾಲಿಗೆ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆಯಾದ ಅನುದಾನ ರೂ. 19.00 ಲಕ್ಷ.**

| | | |
|---|---|---|
| 1) ಜಿಲ್ಲಾ ಉದ್ಯಮ ಕೇಂದ್ರ. (ಬಂಡವಾಳ ಹೂಡಿಕೆ ಸಹಾಯಧನ) | ರೂ. | 6.00 ಲಕ್ಷ. |
| 2) ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಉಪಕರಣ ಸರಬರಾಜು. | ರೂ. | 13.00 ಲಕ್ಷ. |
| **ಒಟ್ಟೂ** | **ರೂ.** | **19.00 ಲಕ್ಷ** |

**ರೂ. 19.00 ಲಕ್ಷ ಖರ್ಚಾಗಿದ್ದು, ಶೇ. 100 ರಷ್ಟು ಪ್ರಗತಿ ಸಾಧಿಸಲಾಗಿದೆ.**

2) ಯಾವುದೇ ಕ್ಷೇತ್ರದಲ್ಲಿ ಉಲ್ಲೇಖನೀಯ ಸಾಧನೆ ಮಾಡಿದ್ದು, ಇರುವುದಿಲ್ಲ.

3) 2018–19ನೇ ಸಾಲಿನಲ್ಲಿ ಇತರೇ ಯಾವುದೇ ಅಭಿವೃದ್ಧಿ ಕಾಮಗಾರಿಗಳು ಇರುವುದಿಲ್ಲ. ವೃತ್ತಿಪರ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣ ಪೂರೈಕೆ ಯೋಜನೆಯಡಿ ಹೋನ್ನಾವರ ಹಾಗೂ ಹಳಿಯಾಳ ತಾಲೂಕಿನಲ್ಲಿ ಫಲಾನುಭವಿಗಳಿಗೆ ಉಪಕರಣ ವಿತರಿಸಿದ ಬಗ್ಗೆ 02 ಫೋಟೋಗಳು ಸಲ್ಲಿಸಿದೆ.

4) 2018–19ನೇ ಸಾಲಿನಲ್ಲಿ ಯಾವುದೇ ಹೊಸ ಯೋಜನೆಗಳು ಅನುಷ್ಠಾನಗೊಂಡಿರುವುದಿಲ್ಲ.

*****

ಮಾಹಿತಿ ಮೂಲ : ಜಿಲ್ಲಾ ಪಂಚಾಯತ ಕೈಗಾರಿಕಾ ವಿಭಾಗ, ಕಾರವಾರ

# ಸಾಮಾಜಿಕ ಅರಣ್ಯ ವಿಭಾಗ

## ಉದ್ದೇಶ / ಪ್ರಸ್ತಾವನೆ

ಕಾರವಾರ ಸಾಮಾಜಿಕ ವಿಭಾಗವು ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಹನ್ನೊಂದು ತಾಲ್ಲೂಕುಗಳನ್ನು ಒಳಗೊಂಡಿದ್ದು ಜಿಲ್ಲಾ ಪಂಚಾಯತದ ನಿಯಂತ್ರಣದಲ್ಲಿ ಬರುತ್ತದೆ.

ಕಾರವಾರ ಜಿಲ್ಲಾ ಪಂಚಾಯತ ಅರಣ್ಯ ವಿಭಾಗವು ಏಪ್ರಿಲ 1987 ರಿಂದ ಅಸ್ತಿತ್ವದಲ್ಲಿ ಬಂದಿರುವುದು. ಇದರ ಮುಖ್ಯ ಉದ್ದೇಶ ಭೂಸಾರ ಸಂರಕ್ಷಣೆ (ಅರಣ್ಯೀಕರಣ) ಬೀಳು ಭೂಮಿಗಳ ಮಣ್ಣಿನ ಫಲವತ್ತತೆ ಹಾಗೂ ಮೇಲ್ಪದರದ ಮಣ್ಣಿನ ಸವಕಳಿ ತಡೆಗಟ್ಟಲು ನೆಡುತೋಪುಗಳನ್ನು ಬೆಳೆಸುವುದು. ಸಸಿಗಳನ್ನು ಬೆಳೆಸಿ ಅಭಿವೃದ್ಧಿ ಪಡಿಸುವುದು, ಅಲ್ಲದೇ ಗ್ರಾಮೀಣ ಜನರಿಗೆ ಹಾಗೂ ಸಾರ್ವಜನಿಕರಿಗೆ ಸಸಿಗಳನ್ನು ಬೆಳೆಸಿ ನೆಡುವ ಬಗ್ಗೆ ಪ್ರೋತ್ಸಾಹ ಕೊಡುವ ಉದ್ದೇಶ ಹೊಂದಲಾಗಿದೆ.

ಅಲ್ಲದೇ ರೈತರಿಗೆ ತಮ್ಮ ಕ್ಷೇತ್ರದಲ್ಲಿ ನೆಡುತೋಪು ಬೆಳೆಸುವುದು, ಕಂದಾಯ ಇಲಾಖೆಯ ಬಂಜರು ಭೂಮಿಯಲ್ಲಿ ಸಸಿ ನೆಟ್ಟು ಅಭಿವೃದ್ಧಿಪಡಿಸುವುದು. ರೈತರ ಗದ್ದೆಯ ಗಡಿ ಸುತ್ತಲೂ ರಸ್ತೆ ಅಂಚಿನಲ್ಲಿ ಹಳ್ಳ ಕೊಳ್ಳದ ಬದಿಯಲ್ಲಿ, ಖಾಲಿ ಬಿದ್ದ ಅರಣ್ಯ, ಶಾಲೆ ಬಯಲು ಹಾಗೂ ಸರಕಾರಿ ಜಮೀನಿನಲ್ಲಿ ಗಿಡ ಬೆಳೆಸಿ ನಾಡನ್ನು ಹಸಿರಾಗಿಸುವುದು ಸಾಮಾಜಿಕ ಅರಣ್ಯದ ಮುಖ್ಯ ಉದ್ದೇಶವಾಗಿರುವುದು.

ಕಾರವಾರ ಜಿಲ್ಲೆಯ ಉತ್ತರಕ್ಕೆ ಗೋವಾ ಹಾಗೂ ಬೆಳಗಾವಿ ದಕ್ಷಿಣಕ್ಕೆ ದಕ್ಷಿಣಕನ್ನಡ, ಪಶ್ಚಿಮಕ್ಕೆ ಅರಬ್ಬೀ ಸಮುದ್ರ ಹಾಗೂ ಪೂರ್ವಕ್ಕೆ ಧಾರವಾಡ, ಶಿವಮೊಗ್ಗ, ಹೊಂದಿಕೊಂಡಿರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿ ಹನ್ನೊಂದು ತಾಲೂಕುಗಳು ಹಾಗೂ 231 ಗ್ರಾಮ ಪಂಚಾಯತಗಳಿವೆ.

ಸಾಮಾಜಿಕ ಅರಣ್ಯ ವಿಭಾಗವು ಉತ್ತರ ಕನ್ನಡ ಜಿಲ್ಲಾ ಪಂಚಾಯತದಡಿ ಕಾರ್ಯ ನಿರ್ವಹಿಸುತ್ತಿದ್ದು ಯಾವತ್ತು ಆರ್ಥಿಕ ಸೌಲಭ್ಯಗಳು/ಅನುದಾನ ಅರಣ್ಯ ಇಲಾಖೆ ಮತ್ತು ಜಿಲ್ಲಾ ಪಂಚಾಯತ ಅನುಮೋದಿತ ಯೋಜನೆಯಿಂದ ಬರುತ್ತದೆ. ಸಾರ್ವಜನಿಕ ಸಂಘ ಸಂಸ್ಥೆ, ಶಾಲೆ ಹಾಗೂ ಗ್ರಾಮೀಣ ಜನರ ಸಹಕಾರ ಸಹಭಾಗಿತ್ವದಿಂದ ಜಿಲ್ಲಾ ಪಂಚಾಯತ ಅರಣ್ಯ ವಿಭಾಗವು ಹೆಚ್ಚಿನ ಪ್ರಗತಿ ಸಾಧಿಸಿದೆ. 2018-19ನೇ ಸಾಲಿನಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ತಾಲೂಕುಗಳಾದ ಹಳಿಯಾಳ, ಜೋಯಿಡಾ, ಕಾರವಾರ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ, ಅಂಕೋಲಾ, ಕುಮಟಾ, ಯಲ್ಲಾಪುರ, ಮುಂಡಗೋಡ ತಾಲೂಕುಗಳಲ್ಲಿ ಅರಣ್ಯೀಕರಣ ಕಾಮಗಾರಿಯನ್ನು ಕೈಗೊಂಡಿದ್ದು ಇರುತ್ತದೆ. ಸಾರ್ವಜನಿಕರಿಗೆ ಸಸಿ ವಿತರಣೆ ಹಾಗೂ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿಯಲ್ಲಿ (RSPD) 2018-19 ಸಾಲಿನಲ್ಲಿ ಯಲ್ಲಾಪುರ ತಾಲೂಕಿನ ಇಡಗುಂದಿ ವಲಯದ ಸಸ್ಯಪಾಲನಾ ಕ್ಷೇತ್ರದಲ್ಲಿ 8"X12" ಅಳತೆಯ 3,100 ಹಾಗೂ ಕಾರವಾರ ತಾಲೂಕಿನ ಕಾಜುಬಾಗ ಸಸ್ಯಪಾಲನಾ ಕ್ಷೇತ್ರದಲ್ಲಿ 6"X9" ಅಳತೆಯ 70000 ಸಸಿಗಳನ್ನು ಹಾಗೂ 8"X12" ಅಳತೆಯ 1500 ಸಸಿಗಳನ್ನು ಬೆಳೆಸಿದ್ದು ಇರುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ ವಿಭಾಗದ ಕಾರ್ಯನಿರ್ವಹಣೆ ಮಾಡುತ್ತಿರುತ್ತಾರೆ. ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಬೇಕಾದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಹುದ್ದೆ ಖಾಲಿ ಇದ್ದು ಪ್ರಾದೇಶಿಕ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರನ್ನು ಪ್ರಭಾರೆಯಾಗಿ ಕರ್ತವ್ಯ ನಿರ್ವಹಿಸುವಂತೆ ಅರಣ್ಯ ಪಡೆ ಮುಖ್ಯಸ್ಥರು ಆದೇಶಿಸಿದ್ದು ಅದರಂತೆ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಕಾರವಾರ, ಕುಮಟಾ, ಹೊನ್ನಾವರ, ಸಿದ್ದಾಪುರ, ಶಿರಸಿ, ಯಲ್ಲಾಪುರ ಮತ್ತು ಮುಂಡಗೊಡ ಅಂತೂ ಏಳು ಸಾಮಾಜಿಕ ವಲಯಗಳಿದ್ದು ಅವುಗಳಲ್ಲಿ ವಲಯ ಅರಣ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಎರಡು ಉಪ ವಲಯ ಅರಣ್ಯಾಧಿಕಾರಿಗಳು ಕಾರವಾರ ಹಾಗೂ ಅಂಕೋಲಾ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮುಂದುವರಿದು ಏಳು ಸಾಮಾಜಿಕ ಅರಣ್ಯ ವಲಯಗಳಲ್ಲಿ ಒಟ್ಟು 37 ಅರಣ್ಯ ಪ್ರೇರಕರಿದ್ದು, ಸದರ ಅರಣ್ಯ ಪ್ರೇರಕರು ವಲಯ ಅರಣ್ಯಾಧಿಕಾರಿಗಳ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

**ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಜಿಲ್ಲಾ ಪಂಚಾಯತ, ಕಾರವಾರ**

2018–19 ನೇ ಸಾಲಿಗೆ ಕಾರವಾರ ಸಾಮಾಜಿಕ ಅರಣ್ಯ ವಿಭಾಗಕ್ಕೆ ಜಿಲ್ಲಾ ಪಂಚಾಯತ ವಿವಿಧ ಯೋಜನೆಯಡಿ ಒಟ್ಟೂ ರೂ. 170.7 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಿದ್ದು, 2406–00–101–0–27–090 ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ 105.21 ಲಕ್ಷ ಅನುದಾನದ ಹಾಗೂ 2406–00–101–0–140 ಕಟ್ಟಡಕ್ಕೆ 6.00 ಲಕ್ಷ ಅನುದಾನ ಬಿಡುಗಡೆಗೊಳಿಸಿದ್ದು, 2018–19 ನೇ ಸಾಲಿಗೆ ನಿಗದಿಪಡಿಸಿದ ಗುರಿಯನ್ನು ಸಾಧಿಸಲಾಗಿದೆ. ಮುಂದುವರೆದು 2406–00–101–0–26 ವೇತನೇತರ ಶೀರ್ಷಿಕೆಯಡಿ 001–ವೇತನಕ್ಕೆ 36.00 ಲಕ್ಷ (ಹೆಚ್ಚುವರಿ 2.61 ಲಕ್ಷ) 090– ಕಛೇರಿ ವೆಚ್ಚ–14.88 ಲಕ್ಷ, 034–ಹೊರಗುತ್ತಿಗೆಗೆ 6.00 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಿದ್ದು ಇರುತ್ತದೆ.

*****

ಮಾಹಿತಿ ಮೂಲ : ಜಿಲ್ಲಾ ಸಾಮಾಜಿಕ ಅರಣ್ಯ ವಿಭಾಗ, ಕಾರವಾರ

# ಕೃಷಿ ಮಾರಾಟ ಇಲಾಖೆ

1) **ಇಲಾಖೆಯ ಕಾರ್ಯಕ್ರಮ / ಯೋಜನೆಗಳ ಮುಖ್ಯ ಉದ್ದೇಶ :-**

ಕೃಷಿ ಮಾರಾಟ ಇಲಾಖೆಯು ಪರಿವರ್ತನೆಯ ಹಾದಿಯಲ್ಲಿದೆ. ಕೃಷಿ ಮಾರಾಟ ಚಟುವಟಿಕೆಗಳು ಇಂದು ಕೃಷಿ ವ್ಯಾಪಾರ ಚಟುವಟಿಕೆಗಳಾಗಿ ಬೆಳೆದಿವೆ. ರಾಜ್ಯವು ಈ ಕ್ಷೇತ್ರಗಳಲ್ಲಿ ವಿಶೇಷತೆಯನ್ನು ಕಾಯ್ದುಕೊಂಡು ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲು ಅವಿರತ ಪ್ರಯತ್ನಗಳು ಮುಂದುವರೆದಿದೆ.

i) ಕರ್ನಾಟಕ ರಾಜ್ಯದ ಏಕೀಕೃತ ಮಾರುಕಟ್ಟೆ ಸೌಲಭ್ಯ ಜಾರಿಗೆ ತರಲಾಗಿದ್ದು, ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದ್ಧಾಪುರ, ಯಲ್ಲಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಈ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆ.

ii) 2015-16ನೇ ಸಾಲಿನ ಆಯ-ವ್ಯಯದಲ್ಲಿ ಘೋಷಿಸಿದ ಯೋಜನೆಗಳಾದ ಆಧುನಿಕ ಶೌಚಾಲಯ ನಿರ್ಮಾಣ, ಮಾರುಕಟ್ಟೆ ಆಧುನೀಕರಣ, ಘನತಾಜ್ಯ ವಿಲೇವಾರಿ, ಏಕೀಕೃತ ಮಾರುಕಟ್ಟೆ ಮತ್ತು ವರ್ಗಿಕರಣ ಪ್ರಯೋಗಾಲಯ ಹಾಗೂ ಸಮಿತಿಯ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ-ವಹಿವಾಟುಗಳಿಗಾಗಿ ಬರುವ ರೈತರಿಗಾಗಿ **"ಶುದ್ಧ ಕುಡಿಯುವ ನೀರಿನ ಘಟಕ"** ಗಳನ್ನು 7 ಸಮಿತಿಗಳ ಮಾರುಕಟ್ಟೆ ಪ್ರಾಂಗಣದಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

iii) ಹಮಾಲರ ಕ್ಷೇಮಾಭಿವೃದ್ದಿಗಾಗಿ ಕಾಯಕ ನಿಧಿ ಯೋಜನೆಯನ್ನು ಕೈಕೊಳ್ಳಲಾಗಿದೆ.

iv) ಆರ್. ಕೆ. ವಿ. ವೈ ಯೋಜನೆಯಡಿ ಶಿರಸಿ, ಯಲ್ಲಾಪುರ, ಹಳಿಯಾಳ, ಕುಮಟಾ, ಹೊನ್ನಾವರ, ಕಾರವಾರ ಸಮಿತಿಗಳಲ್ಲಿ 1000 ಮೆಟ್ರಿಕ್ ಟನ್ ಸಾಮರ್ಥ್ಯದ ಗೋದಾಮು ನಿರ್ಮಾಣ ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತದೆ.

v) ಕೃಷಿ ಮಾರಾಟ ಇಲಾಖೆಯಲ್ಲಿ ಜಾರಿಗೆ ತರಲಾದ ರೈತ ಸಂಜೀವಿನಿ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗುತ್ತಿದೆ. ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಆಕಸ್ಮಿಕವಾಗಿ ಮರಣ ಅಥವಾ ಶಾಶ್ವತ ಅಂಗವಿಕಲತೆ ಸಂಭವಿಸಿದರೆ ಅವರಿಗೆ ಅನುಕೂಲವಾಗುವಂತೆ ರೂ: 10,000 ರಿಂದ 1 ಲಕ್ಷ ರೂ.ಗಳವರೆಗೆ ಪರಿಹಾರ ಹಣ ಪಾವತಿಸಲಾಗುತ್ತದೆ.

ಖಾಸಗಿ ಲೇವಾದೇವಿಗಾರರಿಂದ ರೈತರನ್ನು ಮುಕ್ತಗೊಳಿಸಲು ಅಡಮಾನ ಸಾಲ ಯೋಜನೆಯನ್ನು ಜಾರಿಗೆ ತಂದಿದ್ದು, ಆರ್ಥಿಕವಾಗಿ ಸದೃಢವಾಗಿರುವ ಮಾರುಕಟ್ಟೆಗಳು ತಮ್ಮ ಆದಾಯದ ಶೇ. 10 ಭಾಗವನ್ನು ಮೀಸಲಿರುವ ವ್ಯವಸ್ಥೆ ಮಾಡಲಾಗಿದೆ. ಅನೇಕ ರೈತರು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

vi) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಹಮಾಲರು, ಚಕ್ಕಡಿಯವರು, ತೂಕದವರಿಗೆ ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಜನಶ್ರೀ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ.

vii) ರೈತ ಮಾರಾಟಗಾರರಿಗೆ ಶೀಘ್ರ ಹಾಗೂ ಪಾರದರ್ಶಕ ರೀತಿಯಲ್ಲಿ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಿಸಿಕೊಡುವ ನಿಟ್ಟಿನಲ್ಲಿ ಇ-ಟೆಂಡರಿಂಗ್ ಪದ್ಧತಿಯನ್ನು ರಾಜ್ಯದ ಕೃಷಿ ಮಾರುಕಟ್ಟೆ ಸಮಿತಿಗಳಲ್ಲಿ ಜಾರಿಗೆ ತರಲಾಗಿದೆ.

viii) ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ **1167** ವರ್ತಕರು, ವರ್ತಕರ ಲೈಸೆನ್ಸನ್ನು ಪಡೆದು ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದಾರೆ **271**–ದಲಾಲರು, **235816** ರೈತರು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಮಾರುಕಟ್ಟೆ ಕ್ಷೇತ್ರದಲ್ಲಿ ತಮ್ಮ ವ್ಯಾಪಾರ–ವಹಿವಾಟುಗಳನ್ನು ಪ್ರಾರಂಭಿಸಿದ್ದಾರೆ. ರೈತರಿಗೆ ನೇರವಾಗಿ ಅವರ ಖಾತೆಗಳಿಗೆ ಹಣ ಸಂದಾಯವಾಗುವಂತೆ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

## II) 2018–19 ನೇ ಸಾಲಿಗೆ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆಯಾದ ಖರ್ಚಾದ ಹಾಗೂ ಶಿಲ್ಕು ಇರುವ ಅನುದಾನದ ವಿವರ :–

ಜಿಲ್ಲಾ ಪಂಚಾಯತಿಯಿಂದ ಸನ್ **2018–19** ನೇ ಸಾಲಿಗೆ ರೂ: 25.**00** ಲಕ್ಷ ಬಿಡುಗಡೆಯಾಗಿದ್ದು, **2018–19**ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕಾರವಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಉಪ–ಮಾರುಕಟ್ಟೆ ಅಂಕೋಲಾ ಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ರೂ: **25.00** ಲಕ್ಷಗಳ ಅನುದಾನವನ್ನು ವಿನಿಯೋಗಿಸಿಕೊಳ್ಳಲು ತಿಳಿಸಲಾಗಿತ್ತು.

2018–19 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಬಿಡುಗಡೆಯಾದ ರೂ: 25.00 ಲಕ್ಷಗಳಲ್ಲಿ ರೂ: 10.00 ಲಕ್ಷಗಳು ಕಾರವಾರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 03 ಸಂಖ್ಯೆಯ ಚಿಕ್ಕ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿಗಳನ್ನು ಕೈಕೊಳ್ಳಲಾಗಿದೆ. ಉಳಿದ 15.00 ಲಕ್ಷಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಳಿಯಾಳದಲ್ಲಿ 03 ಸಣ್ಣ ಮಳಿಗೆಗಳ ನಿರ್ಮಾಣ ಕಾರ್ಯಗಳನ್ನು ಕೈಕೊಳ್ಳಲಾಗಿದೆ.

ಸದರಿ ಅನುದಾನ ರೂ: 15.00 ಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಳಿಯಾಳದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 03 ಸಂಖ್ಯೆಯ ಚಿಕ್ಕ ಮಳಿಗೆಗಳ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡಲಾಗಿದ್ದು, ಸದ್ರಿ ಅನುದಾನವು ಜಿಲ್ಲಾ ಪಂಚಾಯತ್ ಅನುದಾನವಾಗಿದ್ದು, ಸಂಬಂಧಿತ ಕಾಮಗಾರಿಯನ್ನು ಅನುಮೋದಿತ ಕ್ರಿಯಾ ಯೋಜನೆಯಂತೆ ನಿಯಮಾನುಸಾರ ಅನುಷ್ಠಾನಗೊಳಿಸಲು ಆದೇಶಿರುವ ಪ್ರಕಾರ. ಜಿಲ್ಲಾ ಪಂಚಾಯತ್ ನಿರ್ದೇಶನದಂತೆ, ಕಾರ್ಯನಿರ್ವಾಹಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಬೆಳಗಾವಿ ವಿಭಾಗ, ಬೆಳಗಾವಿ ಇವರು ನೀಡಿರುವ ತಾಂತ್ರಿಕ ಮಂಜೂರಾತಿ ಹಾಗೂ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಹಳಿಯಾಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಚಿಕ್ಕ ಮಳಿಗೆಗಳ ನಿರ್ಮಾಣ ಕಾಮಗಾರಿಯನ್ನು ಕೈಕೊಳ್ಳಲು ಟೆಂಡರನ್ನು ಕರೆಯಲಾಗಿರುತ್ತದೆ.

ಮುಂದುವರೆದು, ಈ ಎರಡು ಕಾಮಗಾರಿಗಳನ್ನು ಕೈಕೊಳ್ಳುವ ಉದ್ದೇಶದಿಂದ ರೂ: 25.00 ಲಕ್ಷಗಳಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೃಷಿ ಮಾರಾಟ ಇಲಾಖೆ. ಶಿರಸಿಯವರಿಂದ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದ್ದು, ನಿಯಮಾನುಸಾರ ಟೆಂಡರ ಕರೆದು ಆದಷ್ಟು ಶೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಲಾಗಿದೆ.

*****

ಮಾಹಿತಿ ಮೂಲ : ಜಿಲ್ಲಾ ಕೃಷಿ ಮಾರಾಟ ಇಲಾಖೆ, ಶಿರಸಿ

# ಕೈಮಗ್ಗ ಮತ್ತು ಜವಳಿ ಇಲಾಖೆ

**1) ಇಲಾಖೆಯ ಮುಖ್ಯ ಉದ್ದೇಶ:**

ಜಿಲ್ಲೆಯಲ್ಲಿರುವ ಅಸಂಘಟಿತ ವಲಯದಲ್ಲಿರುವ ಕೈಮಗ್ಗ ನೇಕಾರರನ್ನು ಒಂದುಗೊಡಿಸಿ ಸಂಘಟಿತ ವಲಯದಲ್ಲಿ ಅಂದರೆ ಸಹಕಾರಿ ಸಂಘಗಳ ತತ್ವದಡಿಯಲ್ಲಿ ಸಂಘಟಿತ ನೇಕಾರರಿಗೆ ಸ್ಪರ್ಧಾತ್ಮಕ ಮಾರುಕಟ್ಟೆಗೆ ಅನುಗುಣವಾಗಿ ಕೈಮಗ್ಗದ ಉತ್ಪನ್ನಗಳನ್ನು ತಯಾರಿಸಲು ತಾಂತ್ರಿಕ, ಕಚ್ಚಾಮಾಲಿನ ಲಭ್ಯತೆ ಹಾಗೂ ಮಾರುಕಟ್ಟೆಯ ಬಗ್ಗೆ ಮಾಹಿತಿಯನ್ನು ಒದಗಿಸಿ ಆಸಕ್ತ ನೇಕಾರರಿಗೆ ಇಲಾಖೆಯಿಂದ ಕೈಮಗ್ಗ ನೇಕಾರಿಕೆ ತರಬೇತಿ, ಸುಧಾರಿತ ಕೈಮಗ್ಗ ಹಾಗೂ ಸಲಕರಣೆ ಮತ್ತು ದುಡಿಯುವ ಬಂಡವಾಳವನ್ನು ಒದಗಿಸಿ, ನೇಕಾರರಿಗೆ ನಿರಂತರ ಉದ್ಯೋಗ ಮಾಡಿಕೊಂಡು ಹೋಗಲು ಹಾಗೂ ಆರ್ಥಿಕವಾಗಿ ಸಬಲರನ್ನಾಗಿಸುವ ಉದ್ದೇಶ ಹೊಂದಿರುತ್ತದೆ.

**2) 2018–19ನೇ ಸಾಲಿಗೆ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆಯಾದ, ಖರ್ಚಾದ ಹಾಗೂ ಶಿಲ್ಕು ಇರುವ ಅನುದಾನದ ವಿವರ**

**ಅ. ಕೈಮಗ್ಗ ಉದ್ಯಮಿಗಳಿಗೆ ಸಹಾಯ – ರೂ. 100000=00**

ಕೈಮಗ್ಗ ಉದ್ಯಮಿಗಳಿಗೆ ಸಹಾಯ ಯೋಜನೆಯಡಿಯಲ್ಲಿ ಲೆಕ್ಕಶೀರ್ಷಿಕೆ :2851–00–107–0–31–(100) ದುಡಿಯುವ ಬಂಡವಾಳಕ್ಕಾಗಿ ರೂ.100000=00ಗಳಲ್ಲಿ ಜಿಲ್ಲೆಯಲ್ಲಿರುವ 1) ಜಿವನ್ಮುಖಿ ಕೈಮಗ್ಗ ನೇಕಾರರ ಸಹಕಾರಿ ಸಂಘ.ನಿ. ಮುಡ್ಕಣಿ, ತಾ. ಹೊನ್ನಾವರ ಸಂಘಕ್ಕೆ ರೂ. 50000=00. 2) ಶ್ರೀ ವೀರಭದ್ರೇಶ್ವರ ಕೈಮಗ್ಗ ನೇಕಾರರ ಸಹಕಾರಿ ಸಂಘ, ನಿ., ಯಲ್ಲಾಪುರ ಸಂಘಕ್ಕೆ ರೂ.50000=00ಗಳನ್ನು ಹೀಗೆ ಒಟ್ಟು ರೂ.100000=00ಗಳನ್ನು ವೆಚ್ಚ ಮಾಡಲಾಗಿದೆ. ಅನುದಾನ ಶಿಲ್ಕು ಇರುವುದಿಲ್ಲ.

**ಆ. ಕೈಮಗ್ಗ ಉದ್ಯಮಿಗಳಿಗೆ ಸಹಾಯ – ರೂ. 100000=00–**

ಕೈಮಗ್ಗ ಉದ್ಯಮಿಗಳಿಗೆ ಸಹಾಯ ಯೋಜನೆಯಡಿಯಲ್ಲಿ ಲೇಕ್ಕಶೀರ್ಷಿಕೆ :2851–00–107–0–31–(422) ರೂ. 100000=00ಗಳಲ್ಲಿ ಜಿಲ್ಲೆಯಲ್ಲಿರುವ ಕೈಮಗ್ಗ ನೇಕಾರರ ಸಹಕಾರಿ ಸಂಘದಲ್ಲಿರುವ ಮೂರು ಜನ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಘಟಕದ ವೆಚ್ಚ ರೂ. 30000=00ಗಳಲ್ಲಿ ಶೇಕಡಾ 90 ರ ಅನುದಾನದಲ್ಲಿ ಸುಧಾರಿತ ಕೈಮಗ್ಗ ಮತ್ತು ಸಲಕರಣೆ ಅಳವಡಿಸಲಾಗಿದೆ. 1) ಜಿವನ್ಮುಖಿ ಕೈಮಗ್ಗ ನೇಕಾರರ ಸಹಕಾರಿ ಸಂಘ.ನಿ. ಮುಡ್ಕಣಿ, ತಾ. ಹೊನ್ನಾವರ ಸಂಘಕ್ಕೆ ರೂ. 27000=00 ಒಂದು ಫಲಾನುಭವಿಗೆ. 2) ಶ್ರೀ ವೀರಭದ್ರೇಶ್ವರ ಕೈಮಗ್ಗ ನೇಕಾರರ ಸಹಕಾರಿ ಸಂಘ, ನಿ. ಯಲ್ಲಾಪುರ ಸಂಘಕ್ಕೆ ರೂ.54000=00ಗಳನ್ನು ಎರಡು ಫಲಾನುಭವಿಗೆ., ಹೀಗೆ ಒಟ್ಟು ರೂ.81000=00ಗಳನ್ನು ಮೂರು ಪರಿಶಿಷ್ಟ ಜಾತಿ ಫಲನುಭವಿಗಳಿಗೆ ವೆಚ್ಚ ಮಾಡಲಾಗಿದೆ. ಶಿಲ್ಕು ರೂ. 19000=00 ಅನುದಾನವನ್ನು ಹಿಂದೆ ಪಡೆಯುವಂತೆ ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಉತ್ತರಕನ್ನಡ ಕಾರವಾರ ಇವರಿಗೆ ದಿನಾಂಕ: 27–12–2018 ರಂದು ಪತ್ರ ಬರೆಯಲಾಗಿದೆ.

*****

ಮಾಹಿತಿ ಮೂಲ : ಜಿಲ್ಲಾ ಕೈಮಗ್ಗ ಮತ್ತು ಜವಳಿ ಇಲಾಖೆ, ಕಾರವಾರ

# ಸಹಕಾರ ಇಲಾಖೆ

ಸಹಕಾರ ಸಂಘಗಳ ಉನ್ನತಿಕರಣಕ್ಕಾಗಿ ಸಹಾಯ ಒದಗಿಸುವ ಉದ್ದೇಶ ಹೊಂದಿರುತ್ತದೆ. ಈ ಉದ್ದೇಶವನ್ನು ಈಡೇರಿಸಲು ಜಿಲ್ಲಾ ಪಂಚಾಯತ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮವನ್ನು ಹಮ್ಮಿಕೊಂಡು ಅನುದಾನ ವಿನಿಯೋಗಿಸಲಾಗಿದೆ.

**2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ ಯೋಜನೆಗಳ ಅನುಷ್ಠಾನ ಕುರಿತು ಸಾಧಿಸಿದ ಪ್ರಗತಿ**

**(ರೂ. ಲಕ್ಷಗಳಲ್ಲಿ)**

| ಕ್ರ ಸಂ. | ಯೋಜನೆಯ ಹೆಸರು | ಜಿಲ್ಲೆ | ಗುರಿ | | ಮಂಜೂರು ಮಾಡಿರುವ ಆರ್ಥಿಕ | | ಬಿಡುಗಡೆ ಮಾಡಿರುವ ಆರ್ಥಿಕ ನೆರವು | | ಷರಾ |
|---|---|---|---|---|---|---|---|---|---|
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| 1 | 2 | 3 | 4 | 5 | 6 | 7 | 8 | 9 | 10 |
| 1 | ವಿವಿಧ ವರ್ಗಗಳ ಸಹಕಾರಿ ಸಂಘಗಳಿಗೆ ಶೇರು ಬಂಡವಾಳದ ಸಹಾಯ [ಸಾಮಾನ್ಯ] ನಬಾರ್ಡ/ ಎನ್.ಸಿ.ಡಿ.ಸಿ 4425–00–101–0–26 | ಉ.ಕ. | 0 | 0.00 | 0 | 0.00 | 0 | 0.00 | ಸದರಿ ಮೊತ್ತವನ್ನು ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ |
| 2 | ವಿವಿಧ ಸಹಕಾರ ಸಂಘಗಳಿಗೆ ಸಹಾಯಧನ/ಎನ್‌ಸಿಡಿಸಿ ಯೋಜನೆ 2425–00–101–0–28 | | 8 | 4.00 | 8 | 3.99 | 8 | 3.99 | ಸದರಿ ಮೊತ್ತವನ್ನು ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ |

*****

ಮಾಹಿತಿ ಮೂಲ : ಜಿಲ್ಲಾ ಸಹಕಾರಿ ಸಂಘಗಳ ಇಲಾಖೆ, ಕಾರವಾರ

# ವಯಸ್ಕರ ಶಿಕ್ಷಣ ಇಲಾಖೆ

**ಇಲಾಖೆಯ ಮುಖ್ಯ ವಿಷಯಗಳು:**

**ಮೂಲ ಸಾಕ್ಷರತಾ ಕಾರ್ಯಕ್ರಮ:**

**ಉದ್ದೇಶ:**

ಜಿಲ್ಲೆಯ ಹಿಂದುಳಿದ ತಾಲ್ಲೂಕುಗಳಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಸಾಕ್ಷರತಾ ಪ್ರಮಾಣ ಹೆಚ್ಚಿಸುವುದು ಮತ್ತು ಆರ್ಥಿಕವಾಗಿ ಹಿಂದುಳಿದ ನವ ಸಾಕ್ಷರರಿಗೆ ಆದಾಯ ಹೆಚ್ಚಳ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಿ ಅವರ ಜೀವನ ಗುಣಮಟ್ಟ ಸುಧಾರಣೆ ಮಾಡುವುದು ಈ ಕಛೇರಿಯ ಮುಖ್ಯ ಉದ್ದೇಶವಾಗಿದೆ.

ಲೋಕಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಮತ್ತು ಜಿಲ್ಲಾ ಪಂಚಾಯತ್, ಉತ್ತರಕನ್ನಡ ಇವುಗಳ ನಿರ್ದೇಶನದಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಮೂಲಕ ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮಗಳು ಅನುಷ್ಠಾನಗೊಂಡಿರುತ್ತವೆ.

2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್ ಯೋಜನಾ ಅನುದಾನದ ಅಡಿಯಲ್ಲಿ ಡಾ। ನಂಜುಂಡಪ್ಪ ವರದಿಯನ್ವಯ ಹಿಂದುಳಿದ ತಾಲೂಕುಗಳಾದ ಅಂಕೋಲಾ, ಭಟ್ಕಳ, ಸಿದ್ದಾಪುರ ಮತ್ತು ಜೋಯಿಡಾ ಹಾಗೂ ಶೇಕಡಾ 85 ಕ್ಕಿಂತ ಕಡಿಮೆ ಸಾಕ್ಷರತಾ ಪ್ರಮಾಣವನ್ನು ಹೊಂದಿರುವ ತಾಲೂಕುಗಳಾದ ಹೊನ್ನಾವರ, ಯಲ್ಲಾಪುರ, ಮುಂಡಗೋಡ ಮತ್ತು ಹಳಿಯಾಳ ತಾಲೂಕುಗಳ ಅತೀ ಹೆಚ್ಚು ಅನಕ್ಷರಸ್ಥರಿರುವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೂಲ ಸಾಕ್ಷರತಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಇಲಾಖೆಯ ಉದ್ದೇಶವಾಗಿದೆ.

8 ತಾಲೂಕುಗಳ 394 ಕಲಿಕಾ ಕೇಂದ್ರಗಳ ಮೂಲಕ ಒಟ್ಟೂ 3940 ಅನಕ್ಷರಸ್ಥ ಕಲಿಕಾರ್ಥಿಗಳಿಗೆ ಮೂಲ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. 6 ತಿಂಗಳ ಅವಧಿಯ ಈ ಕಾರ್ಯಕ್ರಮದ ಅಡಿಯಲ್ಲಿ ಅನಕ್ಷರಸ್ಥ ಕಲಿಕಾರ್ಥಿಗಳಿಗೆ ಸರಳವಾಗಿ ಓದುವ, ಬರೆಯುವ, ಮತ್ತು ಲೆಕ್ಕಾಚಾರ ಮಾಡುವ ಕೌಶಲ್ಯಗಳನ್ನು ಬೆಳೆಸಲಾಗಿದೆ. ಕಲಿಕಾರ್ಥಿಗಳಿಗೆ ಅಕ್ಷರಾಭ್ಯಾಸ ಮಾಡಿಸುವ ಸಲುವಾಗಿ 394 ಬೋಧಕರಿಗೆ ಸುಧಾರಿತ ಕ್ರಮದಲ್ಲಿ ಐ.ಪಿ.ಸಿ.ಎಲ್. ಬೋದನಾ ವಿಧಾನದ ಬಗ್ಗೆ ತರಬೇತಿ ನೀಡಿ ಕಲಿಕಾ ಚಟುವಟಿಕೆ ನಡೆಸಲಾಗಿದೆ.

ಜಿಲ್ಲೆಯ ಅಭಿವೃದ್ಧಿ ಇಲಾಖೆಗಳ ಸಹಕಾರ ಪಡೆದು, ಕಲಿಕಾ ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾದ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಸದಸ್ಯರು, ಅಭಿವೃದ್ಧಿ ಅಧಿಕಾರಿಗಳು ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರವನ್ನು ಅನುಷ್ಠಾನಗೊಳಿಸಲಾಗಿದ್ದು, ಗ್ರಾಮಗಳಲ್ಲಿ ಕಲಿಕಾ ವಾತಾವರಣ ನಿರ್ಮಿಸುವುದರ ಜೊತೆಗೆ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಿ, ಸುಶಿಕ್ಷಿತ ಸಮಾಜ ರೂಪಿಸುವುದು. ಕಲಿಸುವ ಬೋಧಕರಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರೋತ್ಸಾಧನವನ್ನು ನೀಡಲಾಗಿದೆ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕುಮಟಾ ಇವರಿಂದ ಕಲಿಕಾರ್ಥಿಗಳ ಬಾಹ್ಯ ಮೌಲ್ಯಮಾಪನ ಕಾರ್ಯ ಹಮ್ಮಿಕೊಳ್ಳಲಾಗಿದ್ದು ಒಟ್ಟೂ 3726 ಕಲಿಕಾರ್ಥಿಗಳು ಉತ್ತೀರ್ಣರಾಗಿದ್ದು ನವಸಾಕ್ಷರರಾಗಿರುತ್ತಾರೆ.

## ಅನುಬಂಧ–01

| ತಾಲ್ಲೂಕು | 2018–19 ನೇ ಸಾಲಿನಲ್ಲಿ ಕಲಿಕಾ ಕೇಂದ್ರದಲ್ಲಿ ದಾಖಲಾದ ಕಲಿಕಾರ್ಥಿಗಳ ಸಂಖ್ಯೆ | ಬಾಹ್ಯ ಮೌಲ್ಯ ಮಾಪನದಲ್ಲಿ ಭಾಗವಹಿಸಿದವರ ಸಂಖ್ಯೆ | 2018–19 ನೇ ಸಾಲಿನಲ್ಲಿ ಸಾಕ್ಷರರಾದವರ ಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟೂ |
| ಅಂಕೋಲಾ | 500 | 485 | 27 | 443 | 470 |
| ಹೊನ್ನಾವರ | 500 | 474 | 35 | 422 | 457 |
| ಭಟ್ಕಳ | 500 | 485 | 44 | 415 | 459 |
| ಸಿದ್ದಾಪುರ | 500 | 487 | 165 | 291 | 456 |
| ಯಲ್ಲಾಪುರ | 480 | 462 | 67 | 388 | 455 |
| ಮುಂಡಗೋಡ | 480 | 471 | 210 | 254 | 464 |
| ಹಳಿಯಾಳ | 480 | 479 | 169 | 310 | 479 |
| ಜೋಯಿಡಾ | 500 | 488 | 208 | 278 | 486 |
| ಒಟ್ಟೂ | 3940 | 3831 | 925 | 2801 | 3726 |

## ಅನುಬಂಧ–02

| ಅ.ನಂ. | ವಿವರ | ಬಿಡುಗಡೆಯಾದ ಮೊತ್ತ | ಖರ್ಚಾದ ಅನುದಾನ | ಉಳಿಕೆ |
|---|---|---|---|---|
| 1 | ಮೂಲ ಸಾಕ್ಷರತಾ ಕಾರ್ಯಕ್ರಮ | **11,81,000=00** | **9,33,010=00** | **2,47,990=00** |

*****

ಮಾಹಿತಿ ಮೂಲ : ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಕಾರವಾರ

# ಅಕ್ಷರದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆ

**"ಅನ್ನ ದೇವರ ಮುಂದೆ ಅನ್ಯ ದೇವರಿಲ್ಲ", "ಎಲ್ಲಾ ದಾನಗಳಲ್ಲಿ ಅನ್ನ ದಾನವೇ ಮೇಲು"** ಎನ್ನುವ ನಾಣ್ನುಡಿಗಳಂತೆ ಪ್ರಾಚೀನ ಗುರುಕುಲ ಪದ್ದತಿಯಿಂದ ಅನ್ನ ದಾಸೋಹ ಕಾರ್ಯಕ್ರಮ ನಡೆದು ಬಂದಿರುತ್ತದೆ.

6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣ ಒದಗಿಸುವುದು ಮಕ್ಕಳ ಹಕ್ಕುಗಳಡಿಯಲ್ಲಿ ಸಂವಿಧಾನಾತ್ಮಕ ಜವಾಬ್ದಾರಿಯಾಗಿದ್ದು ಈ ಹಿನ್ನಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರಾಥಮಿಕ ಶಿಕ್ಷಣವನ್ನು ಸಂವಿಧಾನದ ಕಲಂ.45 ರ ಅಡಿಯಲ್ಲಿ ಸಾರ್ವತ್ರಿಕರಣಗೊಳಿಸಿ ಕಡ್ಡಾಯ ಶಿಕ್ಷಣ ಹಕ್ಕು ಅನುಷ್ಠಾನಗೊಳಿಸುವ ದಿಶೆಯಲ್ಲಿ ಕಾಲಕಾಲಕ್ಕೆ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ. ಸರ್ಕಾರದ ವಿವಿಧ ಯೋಜನೆಗಳಲ್ಲಿ ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆಗಳು ಸರ್ಕಾರದ ಮಹತ್ವಕಾಂಕ್ಷೆ ಯೋಜನೆಗಳಾಗಿರುತ್ತದೆ.

ದಿನಾಂಕ: 11–07–2017 ರಂತೆ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಕ್ಷೀರಭಾಗ್ಯ ಯೋಜನೆಯನ್ನು ರಾಜ್ಯದಲ್ಲಿ 17–07–2017 ರಿಂದ ವಾರಕ್ಕೆ ಐದು ದಿನ ಜಾರಿಗೊಳಿಸಲಾಗಿದೆ.

**ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆಯ ಮುಖ್ಯ ಉದ್ದೇಶಗಳು:–**

- ದಾಖಲಾತಿ ಹಾಗೂ ಹಾಜರಾತಿಯನ್ನು ಉತ್ತಮ ಪಡಿಸುವುದು.
- ಶಾಲೆಯನ್ನು ಮಧ್ಯದಲ್ಲಿ ತೊರೆಯುವುದನ್ನು ತಪ್ಪಿಸುವುದು.
- ಪೌಷ್ಠಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು.
- ಕಲಿಕೆಯ ಗುಣಮಟ್ಟವನ್ನು ಉತ್ತಮ ಪಡಿಸುವುದು.

ಈ ಯೋಜನೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ 2098 ಪ್ರಾಥಮಿಕ ಹಾಗೂ 265 ಪ್ರೌಢ ಶಾಲೆಯ ಒಟ್ಟೂ 2363 ಅಡುಗೆ ಕೇಂದ್ರಗಳಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯಡಿಯಲ್ಲಿ 4342 ಅಡುಗೆಯವರು ಶಾಲಾ ಅಡುಗೆ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಒಟ್ಟೂ 157544 ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ.

**ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ಖರ್ಚು ಮಾಡುತ್ತಿರುವ ಅಂದಾಜು ವೆಚ್ಚದ ವಿವರ**

(ರೂ.ಗಳಲ್ಲಿ)

| ವಿವರ | 1–5 ನೇ ತರಗತಿ | | 6–8 ನೇ ತರಗತಿ | | 9–10 ನೇ ತರಗತಿ | |
|---|---|---|---|---|---|---|
| | ಪ್ರಮಾಣ (ಗ್ರಾಂ. ಗಳಲ್ಲಿ) | ಅಡುಗೆ ತಯಾರಿಕಾ ವೆಚ್ಚ (ರೂ.ಗಳಲ್ಲಿ) | ಪ್ರಮಾಣ (ಗ್ರಾಂ. ಗಳಲ್ಲಿ) | ಅಡುಗೆ ತಯಾರಿಕಾ ವೆಚ್ಚ (ರೂ.ಗಳಲ್ಲಿ) | ಪ್ರಮಾಣ (ಗ್ರಾಂ. ಗಳಲ್ಲಿ) | ಅಡುಗೆ ತಯಾರಿಕಾ ವೆಚ್ಚ (ರೂ.ಗಳಲ್ಲಿ) |
| ಅಕ್ಕಿ | 100 | ಉಚಿತ | 150 | ಉಚಿತ | 150 | – |
| ಬೇಳೆ | 20 | 1.71 | 30 | 2.53 | 30 | 2.53 |
| ತರಕಾರಿ | 50 | 1.17 | 75 | 1.73 | 75 | 1.73 |
| ಎಣ್ಣೆ | 5 | 0.36 | 7.5 | 0.57 | 7.5 | 0.57 |
| ಉಪ್ಪು | 2 | 0.02 | 4 | 0.04 | 4 | 0.04 |
| ಇಂಧನ | – | 0.69 | – | 1.03 | – | 1.03 |
| ಸಾಂಬಾರ ಪದಾರ್ಥ/ ಸಾಗಾಣಿಕೆ ವೆಚ್ಚ/ ಇತ್ಯಾದಿ | 5 | 0.18 | 7.5 | 0.28 | 7.5 | 0.28 |
| **ಒಟ್ಟೂ** | **182** | **4.13** | **274** | **6.18** | **274** | **6.18** |

(ರೂ.ಗಳಲ್ಲಿ)

| ವಿವರ | ಪ್ರಮಾಣ ಗ್ರಾಂ. ಗಳಲ್ಲಿ | ಹಾಲು ತಯಾರಿಕಾ ವೆಚ್ಚ |
|---|---|---|
| ಹಾಲಿನ ಪುಡಿ | 18 | 4.82 |
| ಸಕ್ಕರೆ | 10 | 0.32 |
| ಇಂಧನ | – | 0.15 |
| ಇತರೆ | – | 0.12 |
| ಒಟ್ಟೂ | **28** | **5.41** |

**ಅನುದಾನದ ವಿವರ :**

2017–18 ನೇ ಸಾಲಿನಲ್ಲಿ ಅಕ್ಷರ ದಾಸೋಹ ಅನುಷ್ಠಾನಕ್ಕೆ ಲಿಂಕ್ ಡಾಕ್ಯೂಮೆಂಟನಲ್ಲಿ 4005.76 ಲಕ್ಷ ಮತ್ತು 2018–19 ನೇ ಸಾಲಿನಲ್ಲಿ 5187.52 ಲಕ್ಷ ನಿಗದಿಯಾಗಿರುತ್ತದೆ. ಜಿಲ್ಲಾ ಪಂಚಾಯತದಿಂದ ತ್ರೈಮಾಸಿಕವಾರು ಬಿಡುಗಡೆಯಾದ ಅನುದಾನವನ್ನು ತಾಲೂಕುಗಳಿಗೆ ಮಕ್ಕಳ ಸಂಖ್ಯೆ ಆಧಾರದ ಮೇಲೆ ಬಿಡುಗಡೆ ಮಾಡಲಾಗುತ್ತಿದೆ.

ಅಕ್ಷರದಾಸೋಹ ಕಾರ್ಯಕ್ರಮದಡಿ 2018–19 ನೇ ಸಾಲಿಗೆ ಬಿಡುಗಡೆಯಾದ ಹಾಗೂ ಬಳಕೆಯಾದ ಅನುದಾನ ವಿವರ.

**2018–19** **(ರೂ. ಲಕ್ಷಗಳಲ್ಲಿ)**

| ಆರಂಭದ ಶಿಲ್ಕು | ಬಿಡುಗಡೆ | ಖರ್ಚು | ಉಳಿಕೆ |
|---|---|---|---|
| 0.00 | 5187.52 | 4941.74 | 245.78 |

## ಅಡುಗೆ ಕೋಣೆ ಪ್ರಗತಿ ವಿವರ :

| ವರ್ಷ | ಬಿಡುಗಡೆಯಾದ ಅಡುಗೆ ಕೋಣೆಗಳ ಸಂಖ್ಯೆ | ಅನುದಾನ (ರೂ. ಲಕ್ಷಗಳಲ್ಲಿ) | ಪೂರ್ಣಗೊಂಡ ಅಡುಗೆ ಕೋಣೆಗಳ ಸಂಖ್ಯೆ | ಖರ್ಚು (ರೂ. ಲಕ್ಷಗಳಲ್ಲಿ) | ವಿವಿಧ ಹಂತದಲ್ಲಿರುವ ಅಡುಗೆ ಕೋಣೆಗಳ ಸಂಖ್ಯೆ | ಪ್ರಾರಂಭವಾಗದೇ ಇರುವ ಅ.ಕೋ.ಗಳ ಸಂಖ್ಯೆ |
|---|---|---|---|---|---|---|
| 2006–07 | 268 | 160.80 | 268 | 160.80 | 0 | 0 |
| 2007–08 | 1495 | 897.00 | 1495 | 897.00 | 0 | 0 |
| 2011–12 | 284 | 1037.85 | 284 | 1037.85 | 0 | 0 |
| 2013–14 | 92 | 388.59 | 92 | 388.59 | 0 | 0 |
| ಒಟ್ಟೂ | **2139** | **2484.24** | **2139** | **2484.24** | **0** | **0** |

ಈ ಯೋಜನೆಯ ಪ್ರಯೋಜನ ಪಡೆಯುತ್ತಿರುವ ಸರ್ಕಾರಿ ಹಾಗೂ ಅನದಾನತ ಶಾಲೆಯಲ್ಲಿಯ 1 ರಿಂದ 5 ನೇ ತರಗತಿ ಮತ್ತು 6 ರಿಂದ 8 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದಿಂದ ನೇರವಾಗಿ ಅಕ್ಕಿಯನ್ನು ಪೂರೈಕೆ ಮಾಡಲಾಗುತ್ತಿದೆ. 9 ರಿಂದ 10 ನೇ ತರಗತಿಗೆ ಅಕ್ಕಿ ಹಾಗೂ 1 ರಿಂದ 10 ನೇ ತರಗತಿಯ ಮಕ್ಕಳಿಗೆ ತೊಗರಿಬೇಳೆ(ಪಟ್ಕಾ), ಎಣ್ಣೆ, ಉಪ್ಪನ್ನು ಕರ್ನಾಟಕ ಸರಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಿ ಫಲಾನುಭವಿಗಳಿಗೆ ಯೋಜನೆಯ ಪ್ರಯೋಜನವನ್ನು ನೀಡಲಾಗುತ್ತದೆ.

ಈ ಯೋಜನೆಯ ಪ್ರಯೋಜನ ಪಡೆಯುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಶಾಲೆಯಲ್ಲಿ 1 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಫಲಾನುಭವಿಗಳಿಗೆ ಕೆ.ಎಂ.ಎಫ್.ನಿಂದ ನೇರವಾಗಿ ಹಾಲಿನ ಪುಡಿಯನ್ನು ಪೂರೈಕೆ ಮಾಡಲಾಗುತ್ತಿದೆ. ಕರ್ನಾಟಕ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಿ ಫಲಾನುಭವಿಗಳಿಗೆ ಯೋಜನೆಯ ಪ್ರಯೋಜನವನ್ನು ನೀಡಲಾಗುತ್ತಿದೆ.

ಅಕ್ಷರ ದಾಸೋಹ ಯೋಜನೆಯನ್ನು ಸುಗಮವಾಗಿ ನಡೆಸಲು ಜಿಲ್ಲಾ ಹಾಗೂ ತಾಲೂಕಾ ಮಟ್ಟದಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಕಾರವಾರ ರವರ ಆದೇಶದಂತೆ ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲನಾ ಜಂಟಿ ತಪಾಸಣಾ ಸಮಿತಿ ಹಾಗೂ ಉಪಸಮಿತಿಯನ್ನು ರಚಿಸಲಾಗಿದ್ದು ಸದರಿ ಉಪಸಮಿತಿಯಿಂದ ಪರಿಶೀಲನಾ ವರದಿಯನ್ನು ಪಡೆಯಲಾಗುತ್ತದೆ. ಹಾಗೂ ಹಂತಹಂತವಾಗಿ ಕೆಳಮಟ್ಟದ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲು ಹಾಗೂ ಮೇಲ್ವಿಚಾರಣೆ ನಡೆಸಲು ಜಿಲ್ಲಾ ಪಂಚಾಯತ ಹಂತದಲ್ಲಿ ಒಬ್ಬ ಅಧಿಕಾರಿ ಹಾಗೂ ಶಿರಸಿ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರು(ಆ)ಸಾ.ಶಿ.ಇಲಾಖೆ ಶಿರಸಿ ಕಚೇರಿಗೆ ಒಬ್ಬ ಅಧಿಕಾರಿಯನ್ನು ನೇಮಿಸಿರುತ್ತಾರೆ. ಹಾಗೂ ಜಿಲ್ಲೆಯ ಎಲ್ಲಾ ತಾಲೂಕಾ ಪಂಚಾಯತ ಕಚೇರಿಗೆ ಒಬ್ಬರಂತೆ ಸಹಾಯಕ ನಿರ್ದೇಶಕರನ್ನು ನೇಮಿಸಿರುತ್ತಾರೆ. ಉಪನಿರ್ದೇಶಕರು(ಆ) ಸಾ.ಶಿ.ಇಲಾಖೆ ಕಾರವಾರ/ಶಿರಸಿ, ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿ,ಆರ್,ಪಿ. ರವರು ಶಾಲಾ ಹಂತದಲ್ಲಿ ಪರಿಶೀಲನೆ ಮಾಡುತ್ತಾರೆ.

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಅಕ್ಷರ ದಾಸೋಹ ಹಾಗೂ ಕ್ಷೀರಭಾಗ್ಯ ಯೋಜನೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಉತ್ತಮವಾಗಿ ನಡೆಯುತ್ತಿದೆ.

*****

ಮಾಹಿತಿ ಮೂಲ : ಜಿಲ್ಲಾ ಅಕ್ಷರ ದಾಸೋಹ ವಿಭಾಗ, ಕಾರವಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರವಾರ.

## 1. ಶೈಕ್ಷಣಿಕ ಸಂಸ್ಥೆಗಳು:

2018–19ನೇ ಸಾಲಿನಲ್ಲಿ ಉತ್ತರ ಕನ್ನಡ ಶೈಕ್ಷಣಿಕ ಜಿಲ್ಲೆಯಲ್ಲಿ 935 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 49 ಸರ್ಕಾರಿ ಪ್ರೌಢಶಾಲೆಗಳು ಒಟ್ಟೂ 984 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಇರುತ್ತವೆ.

28 ಅನುದಾನಿತ ಪ್ರಾಥಮಿಕ ಶಾಲೆಗಳು ಮತ್ತು 89 ಅನುದಾನಿತ ಪ್ರೌಢ ಶಾಲೆಗಳು ಒಟ್ಟೂ 117 ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಇರುತ್ತದೆ.

91 ಅನುದಾನ ರಹಿತ ಪ್ರಾಥಮಿಕ ಶಾಲೆಗಳು ಮತ್ತು 53 ಅನುದಾನ ರಹಿತ ಪ್ರೌಢಶಾಲೆಗಳು ಒಟ್ಟೂ 144 ಅನುದಾನ ರಹಿತ ಪ್ರಾಥಮಿಕ ಮತ್ತು ಪೌಢ ಶಾಲೆಗಳು ಇರುತ್ತವೆ.

## 2. ವಿದ್ಯಾರ್ಥಿಗಳ ದಾಖಲಾತಿ ವಿವರ:

2018–19ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿಯಲ್ಲಿ 50,006 ವಿದ್ಯಾರ್ಥಿಗಳು, 6 ರಿಂದ 8ನೇ ತರಗತಿಯಲ್ಲಿ 31,119 ವಿದ್ಯಾರ್ಥಿಗಳು ಹಾಗೂ 8 ರಿಂದ 10ನೇ ತರಗತಿಯಲ್ಲಿ 30,640 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. 1 ರಿಂದ 10ನೇ ತರಗತಿಯಲ್ಲಿ ಕಾರವಾರ ಶೈಕ್ಷಣಿಕ ಜಿಲ್ಲೆಯಲ್ಲಿ ಒಟ್ಟೂ **1,01,330** ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.

## 3. ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ:

2018–19ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ ಆಗಿರುವುದಿಲ್ಲ.

## 4. ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ:

2018–19ನೇ ಸಾಲಿನಲ್ಲಿ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ಆಗಿರುವುದಿಲ್ಲ.

## 5. ಅತಿಥಿ ಶಿಕ್ಷಕರ ನೇಮಕಾತಿ:

2018–19ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 65 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ 22 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

## 6. ಉಚಿತ ಪಠ್ಯ ಪುಸ್ತಕ ವಿತರಣೆ:

2018–19ನೇ ಸಾಲಿಗೆ ಸರ್ಕಾರಿ ಶಾಲೆಗಳು ಹಾಗೂ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ 1 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಒಟ್ಟೂ **6,86,639** ಉಚಿತ ಪಠ್ಯ ಪುಸ್ತಕಗಳನ್ನು ವಿತರಿಸಲಾಗಿದೆ.

## 7. ಬೈಸಿಕಲ್ ವಿತರಣೆಯ ಮಾಹಿತಿ:

2018–19ನೇ ಸಾಲಿನಲ್ಲಿ ಉತ್ತರ ಕನ್ನಡ ಶೈಕ್ಷಣಿಕ ಜಿಲ್ಲೆಯಲ್ಲಿ 8ನೇ ತರಗತಿ ಓದುತ್ತಿರುವ **3,444** ವಿದ್ಯಾರ್ಥಿಗಳಿಗೆ ಹಾಗೂ **3,101** ವಿದ್ಯಾರ್ಥಿನಿಯರಿಗೆ ಒಟ್ಟೂ **6,545** ಬೈಸಿಕಲ್‌ಗಳನ್ನು ವಿತರಣೆ ಮಾಡಲಾಗಿದೆ.

## 8. ಉಚಿತ ಸಮವಸ್ತ್ರ ವಿತರಣೆ:

2018–19ನೇ ಸಾಲಿಗೆ ಉತ್ತರಕನ್ನಡ ಜಿಲ್ಲೆಯಲ್ಲಿ ವಿದ್ಯಾ ವಿಕಾಸ ಯೋಜನೆಯಡಿ 1 ರಿಂದ 10ನೇ ತರಗತಿಯ **22,950** ವಿದ್ಯಾರ್ಥಿಗಳಿಗೆ ಹಾಗೂ **23,319** ವಿದ್ಯಾರ್ಥಿನಿಯರಿಗೆ ಒಟ್ಟೂ **46,269** ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಹಂಚಲಾಗಿದೆ.

## 9. ಜಿಲ್ಲಾ ವಲಯಯೋಜನೆ ಅಡಿಯಲ್ಲಿ ಅನುದಾನ ಬಿಡುಗಡೆಯಾದಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಿದ ವಿವರ:

2018–19ನೇ ಸಾಲಿನಲ್ಲಿ ಸೇರ್ಪಡೆ ಮತ್ತು ಮಾರ್ಪಾಡು ಲೆಕ್ಕ ಶೀರ್ಷಿಕೆ 2202–02–102–34 ಅಡಿಯಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡೊಕ್ಯೂಮೆಂಟ್‌ನಲ್ಲಿ 70 ಲಕ್ಷ ರೂ. ಬಿಡುಗಡೆಯಾದಂತೆ ಉತ್ತರ ಕನ್ನಡ ಜಿಲ್ಲೆಗೆ ಹಾಗೂ ಶಿರ್ಶಿ ಶೈಕ್ಷಣಿಕ ಜಿಲ್ಲೆಗೆ ಹಂಚಿಕೆ ಮಾಡಿ ಆದ್ಯತೆ ಮೇರೆಗೆ ಸರ್ಕಾರಿ ಪ್ರೌಢ ಶಾಲೆಗಳ ಕಟ್ಟಡ ರಿಪೇರಿಗೆ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತ್‌ದಿಂದ ಅನುಮೋದನೆ ಪಡೆದು, ಕಾಮಗಾರಿಯನ್ನು ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗದಿಂದ ಕಾರವಾರ/ಶಿರ್ಶಿ ಇವರಿಂದ ಅನುಷ್ಠಾನಗೊಳಿಸಲಾಗಿದೆ. ಸರ್ಕಾರಿ ಪ್ರೌಢಶಾಲೆಗಳಿಗೆ ಪೀಠೋಪಕರಣ ಸರಬರಾಜು ಲೆಕ್ಕಶೀರ್ಷಿಕೆ 2202–00–104–0–35ರ ಅಡಿಯಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡೊಕ್ಯೂಮೆಂಟ್‌ನಲ್ಲಿ ರೂ. 19 ಲಕ್ಷ ಅನುದಾನ ಬಿಡುಗಡೆಯಾದಂತೆ ಸದರಿ ಅನುದಾನವು ಉತ್ತರ ಕನ್ನಡ ಜಿಲ್ಲೆಗೆ ರೂ. 7 ಲಕ್ಷ ಹಾಗೂ ಶಿರಸಿ ಶೈಕ್ಷಣಿಕ ಜಿಲ್ಲೆಗೆ ರೂ. 12 ಲಕ್ಷ, ಹಾಗೂ ಎಲ್.ಸಿ.ಡಿ. ಪ್ರೊಜೆಕ್ಟರ್/ಸ್ಕ್ರೀನ್/ಲ್ಯಾಪ್‌ಟಾಪ್ ಹಾಗೂ ಇತರೇ ಪರಿಕರಕ್ಕೆ ಕಾರವಾರ ಶೈಕ್ಷಣಿಕ ಜಿಲ್ಲೆಗೆ 5 ಲಕ್ಷ ಹಾಗೂ ಶಿರ್ಸಿ ಶೈಕ್ಷಣಿಕ ಜಿಲ್ಲೆಗೆ 6 ಲಕ್ಷ ಹಂಚಿಕೆ ಮಾಡಿ ಹಾಗೂ ಕ್ರಿಯಾಯೋಜನೆಯಂತೆ ಸದರಿ ಅನುದಾನದಲ್ಲಿ ಸರ್ಕಾರಿ ಪ್ರೌಢ ಶಾಲೆಗಳಿಗೆ ಪೀಠೋಪಕರಣಗಳನ್ನು ಜಿಲ್ಲಾ ಪಂಚಾಯತ್‌ದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ಮುಖಾಂತರ ಪೀಠೋಪಕರಣಗಳನ್ನು ಖರೀದಿಸಿ ಕ್ರಿಯಾಯೋಜನೆಯಲ್ಲಿ ಸೇರ್ಪಡಿಸಿ ಶಾಲೆಗಳಿಗೆ ಸರಬರಾಜು ಮಾಡಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

*****

ಮಾಹಿತಿ ಮೂಲ : ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರವಾರ ಶೈಕ್ಷಣಿಕ ಜಿಲ್ಲೆ

# ಸಾರ್ವಜನಿಕ ಶಿಕ್ಷಣ ಇಲಾಖೆ, ಶೈಕ್ಷಣಿಕ ಜಿಲ್ಲೆ ಶಿರಸಿ (ಉ.ಕ.)

ಶಿರಸಿ ಶೈಕ್ಷಣಿಕ ಜಿಲ್ಲೆಯು ಸಮಗ್ರ ಉತ್ತರಕನ್ನಡ ಜಿಲ್ಲೆಯಿಂದ ವಿಭಜಿತಗೊಂಡಿದ್ದು, ದಿನಾಂಕ: 01–10–2009 ರಂದು ಸರಕಾರದ ಆದೇಶ ಸಂಖ್ಯೆ: ಇಡಿ:27ಯೋ:ಕ 2009–10ದಿನಾಂಕ:26–08–2009ರಂತೆ ಕಾರ್ಯಾರಂಭಗೊಂಡಿರುತ್ತದೆ. ಶಿರಸಿ ಶೈಕ್ಷಣಿಕ ಜಿಲ್ಲೆಯು ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ, ಜೊಯಿಡಾ ಹೀಗೆ 6 ತಾಲೂಕುಗಳನ್ನು ಹಾಗೂ 3 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ.

## ➢ ಜಿಲ್ಲೆಯ ಶಾಲೆಗಳ ಮಾಹಿತಿ :

ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ 1125 ಸರಕಾರಿ ಪ್ರಾಥಮಿಕ ಶಾಲೆಗಳು, 15 ಅನುದಾನಿತ ಪ್ರಾಥಮಿಕ ಶಾಲೆಗಳು, 52 ಅನುದಾನರಹಿತ ಪ್ರಾಥಮಿಕ ಶಾಲೆಗಳು ಹಾಗೂ 74 ಸರಕಾರಿ ಪ್ರೌಢಶಾಲೆಗಳು, 59 ಅನುದಾನಿತ ಪ್ರೌಢಶಾಲೆಗಳು, 33 ಅನುದಾನರಹಿತ ಪ್ರೌಢಶಾಲೆ ಇರುತ್ತವೆ.

## ➢ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿವರ

ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ 2018–19 ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 1ರಿಂದ8 ನೇ ತರಗತಿಯವರೆಗೆ 81699 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ ಹಾಗೂ 9ರಿಂದ 10 ನೇ ತರಗತಿಯವರೆಗೆ ಪ್ರೌಢಶಾಲೆಗಳಲ್ಲಿ 20775 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.

## ➢ ಜಿಲ್ಲೆಯಲ್ಲಿರುವ ಶಿಕ್ಷಕರ ಮಾಹಿತಿ:

ಪ್ರಾಥಮಿಕ ಶಾಲೆಗಳಲ್ಲಿ 3973 ಹುದ್ದೆಗಳು ಮಂಜೂರಾಗಿದ್ದು, 3259 ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. 714 ಹುದ್ದೆಗಳು ಖಾಲಿ ಇರುತ್ತವೆ. ಪ್ರೌಢಶಾಲೆಗಳಲ್ಲಿ 629 ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು 530 ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. 99 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ.

## ➢ ಶಿಕ್ಷಕರ ನೇಮಕಾತಿ :

ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ 65 ಶಿಕ್ಷಕರ ನೇಮಕಾತಿ ಮಾಡಲಾಗಿದೆ. 26 ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಮಾಡಲಾಗಿದೆ.

## ➢ ನೇಮಕಾತಿ ಮಾಡಿಕೊಂಡ ಅತಿಥಿ ಶಿಕ್ಷಕರು :

2018–19 ನೇ ಸಾಲಿನಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ 401 ಅತಿಥಿ ಶಿಕ್ಷಕರನ್ನು ಹಾಗೂ ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 50 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

## ❖ ರಾಜ್ಯವಲಯ ಪ್ರೋತ್ಸಾಹದಾಯಕ ಯೋಜನೆಗಳು :

### • ಉಚಿತ ಹಾಗೂ ಮಾರಾಟ ಪಠ್ಯಪುಸ್ತಕ ಮಾಹಿತಿ:

2018–19ನೇ ಸಾಲಿನಲ್ಲಿ 633134 ಉಚಿತ ಪಠ್ಯಪುಸ್ತಕಗಳ ಹಾಗೂ 124765 ಮಾರಾಟ ಪಠ್ಯಪುಸ್ತಕಗಳ ಬೇಡಿಕೆ ಇದ್ದು, ಅದರಂತೆ ಪೂರೈಕೆಯಾದ ಪಠ್ಯಪುಸ್ತಕಗಳನ್ನು ಫಲಾನುಭವಿ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ಶೇ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

- **ಸಮವಸ್ತ್ರ ಮಾಹಿತಿ :**

2018–19ನೇ ಸಾಲಿನಲ್ಲಿ ಸರಕಾರಿ ಶಾಲೆಗಳಲ್ಲಿ ಓದುತ್ತಿರುವ 1 ರಿಂದ 10 ನೇ ತರಗತಿಯವರೆಗಿನ 71241 ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಿಸಲಾಗಿದೆ.

- **ಉಚಿತ ಬೈಸಿಕಲ್ ಪೂರೈಕೆ:**

2018–19ನೇ ಸಾಲಿನಲ್ಲಿ ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 8 ನೇ ತರಗತಿಯಲ್ಲಿ ಓದುತ್ತಿರುವ ಒಟ್ಟೂ 8140 ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ ಮಾಡಲಾಗಿದೆ.

- **ಉಚಿತ ಶೂ–ಸಾಕ್ಸ್‌ವಿತರಣೆ:**

2018–19 ನೇ ಸಾಲಿನಲ್ಲಿ ರೂ. 207.44 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಒಟ್ಟೂ 73165 ಮಕ್ಕಳಿಗೆ ಶೂ–ಸಾಕ್ಸ್ ವಿತರಿಸಲಾಗಿದೆ.

## ❖ ಶೈಕ್ಷಣಿಕ ಕಾರ್ಯಕ್ರಮಗಳು

- **ಪ್ರತಿಭಾ ಕಾರಂಜಿ**

ಜಿಲ್ಲೆಯಲ್ಲಿ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಆಯೋಜಿಸಲು ಜಿಲ್ಲೆಯ 6 ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ರೂ. 18.39 ಲಕ್ಷ ಹಾಗೂ ಜಿಲ್ಲಾ ಮಟ್ಟಕ್ಕಾಗಿ 5.91 ಲಕ್ಷ ರೂ ಅನುದಾನ ಬಿಡುಗಡೆಯಾಗಿದ್ದು, ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಜಿಲ್ಲಾ ಮಟ್ಟಕ್ಕಾಗಿ ನೀಡಿದ ಅನುದಾನದಲ್ಲಿ ರೂ. 8500=00 ಉಳಿಕೆಯಾಗಿದ್ದು, ಸರಂಡರ್ ಮಾಡಲಾಗಿದೆ.

- **ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ**:

ಸರಕಾರಿ ಪ್ರೌಢಶಾಲಾ ಮಕ್ಕಳಿಗಾಗಿ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ ಕುರಿತಂತೆ ಜಿಲ್ಲೆಗೆ ರೂ. 8000=00 ಬಿಡುಗಡೆಯಾಗಿದ್ದು, ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

- **ಜಿಲ್ಲಾ ಮಟ್ಟದ ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮ:**

ಸರಕಾರಿ ಪ್ರೌಢಶಾಲಾ ಮಕ್ಕಳಿಗಾಗಿ ಜಿಲ್ಲಾ ಮಟ್ಟದ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮಕ್ಕಾಗಿ ರೂ.8900=00 ಬಿಡುಗಡೆಯಾಗಿದ್ದು, ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

- **ಕರ್ನಾಟಕ ದರ್ಶನ**

ಅಲ್ಪಸಂಖ್ಯಾತ, ಹಿಂದುಳಿದ ವರ್ಗ ಮತ್ತು ಇತರೆ ವರ್ಗ ಸೇರಿ ಒಟ್ಟೂ 245 ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸಕ್ಕಾಗಿ ರೂ.8.575 ಮಂಜೂರಾಗಿದೆ. ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

- **ಕ್ರೀಡಾ ಚಟುವಟಿಕೆ**

ಜಿಲ್ಲಾ ಮಟ್ಟದ ಕ್ರೀಡಾ ಚಟುವಟಿಕೆಗಾಗಿ ರೂ. 8.13 ಲಕ್ಷ ಅನುದಾದ ಬಿಡುಗಡೆಯಾಗಿರುತ್ತದೆ.

## ❖ ಅನುದಾನಿತ ವಿಭಾಗ:

1-6-1987 ರಿಂದ 1993-94 ಮತ್ತು 1994-95 ನೇ ಸಾಲಿನಲ್ಲಿ ಪ್ರಾರಂಭವಾಗಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಯುತ್ತಿದ್ದ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಶಿರಸಿ ಶೈಕ್ಷಣಿಕ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಂತೆ ಈವರೆಗೆ 6 ಪ್ರಾಥಮಿಕ ಶಾಲೆಗಳು ಮತ್ತು 13 ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಿ ಸರಕಾರ ಆದೇಶ ಹೊರಡಿಸಿದೆ. 2013-14 ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಬಾಕಿ ಉಳಿದ ಒಂದು ಕಿರಿಯ ಪ್ರಾಥಮಿಕ ಶಾಲೆಯನ್ನು ಸಹಾಯಾನುದಾನಕ್ಕೆ ಒಳಪಡಿಸಲಾಗಿದೆ.

2018-19 ನೇ ಸಾಲಿನಲ್ಲಿ 3 ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಮತ್ತು 1 ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

## ❖ ಶಿಕ್ಷಣ ಹಕ್ಕು ಕಾಯ್ದೆ ಅನುಷ್ಠಾನ :

2018-19 ನೇ ಸಾಲಿನಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಯಡಿಯಲ್ಲಿ ಅನುದಾನರಹಿತ ಪ್ರಾಥಮಿಕ ಶಾಲೆಗಳಲ್ಲಿ ಶೇ.25ರಷ್ಟು ಮೀಸಲಾತಿ ಕೋಟಾದಡಿಯಲ್ಲಿ ದಾಖಲಾದ ಮಕ್ಕಳು ಶಿರಸಿ ಶೈಕ್ಷಣಿಕ ಜಿಲ್ಲಾ ವ್ಯಾಪ್ತಿಗೊಳಪಟ್ಟಂತೆ ಎಲ್.ಕೆ.ಜಿಯಲ್ಲಿ 192 ಮಕ್ಕಳು, ಯು.ಕೆಜಿ.ಯಲ್ಲಿ 177 ಮಕ್ಕಳು, 1 ನೇ ತರಗತಿಯಲ್ಲಿ 320 ಮಕ್ಕಳು, 2ನೇ ತರಗತಿಯಲ್ಲಿ 251 ಮಕ್ಕಳು, 3 ನೇ ತರಗತಿಗೆ 211 ಮಕ್ಕಳು, 4 ನೇ ತರಗತಿಗೆ 240 ಮಕ್ಕಳು, 5 ನೇ ತರಗತಿಗೆ 198, 6 ನೇ ತರಗತಿಗೆ 141 ಮತ್ತು 7 ನೇ ತರಗತಿಗೆ 167 ಹೀಗೆ ಒಟ್ಟು 1897 ಮಕ್ಕಳು ದಾಖಲಾಗಿರುತ್ತಾರೆ. ಈ ಮಕ್ಕಳಿಗೆ 2018-19 ನೇ ಸಾಲಿನಲ್ಲಿ ರೂ 114.29 ಲಕ್ಷ ರೂ ಶುಲ್ಕ ಮರುಪಾವತಿ ನೀಡಲಾಗಿದೆ.

## ❖ ಪ್ರಸಕ್ತ ಸಾಲಿನ ಹೆಮ್ಮೆಯ ಸಾಧಕರಿಗೆ ಸನ್ಮಾನ:

2018-19 ನೇ ಸಾಲಿನಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರತಿಭಾ ಕಾರಂಜಿ, ಕ್ರೀಡಾಕೂಟ ಮೊದಲಾದ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿ ಜಿಲ್ಲೆಯ ಹೆಮ್ಮೆಯನ್ನು ಹೆಚ್ಚಿಸಿದ ಶಿಕ್ಷಕರು, ವಿದ್ಯಾರ್ಥಿಗಳನ್ನು ಅಭಿನಂದಿಸಲಾಗಿದೆ.

## ❖ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆ :-

2019 ರ ಏಪ್ರಿಲ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶದಲ್ಲಿ ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ 84.67ರಷ್ಟು ಫಲಿತಾಂಶ ಬಂದಿದ್ದು ರಾಜ್ಯಕ್ಕೆ 12 ನೇ ಸ್ಥಾನ ಪಡೆದಿರುತ್ತದೆ. ರಾಜ್ಯದಲ್ಲಿ ಸಿದ್ದಾಪುರ 1ನೇ ಸ್ಥಾನ ಪಡೆದಿರುತ್ತದೆ. ಸಿದ್ದಾಪುರ ತಾಲೂಕಿನ ನಿತ್ಯಾ ಮಹೇಶ ಭಟ್ಟ 624 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ, ಹಾಗೂ ಅವನಿ ಶಶಿಭೂಷಣ ಹೆಗಡೆ ಮತ್ತು ಶಿರಸಿ ತಾಲೂಕಿನ ವಿಭಾ ಪರಮೇಶ್ವರ ಭಟ್ಟ 623 ಪಡೆದು ರಾಜ್ಯಕ್ಕೆ 3 ನೇ ಸ್ಥಾನ ಪಡೆದುಕೊಂಡಿರುತ್ತಾರೆ.

## ಸಿವಿಲ್ ಕಾಮಗಾರಿ

- **ರಾಜ್ಯವಲಯ ಯೋಜನೆ**

**ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕೊಠಡಿ ನಿರ್ಮಾಣ, ಪೀಠೋಪಕರಣ ಖರೀದಿ, ಕಂಪೌಂಡ್ ನಿರ್ಮಾಣ, ದುರಸ್ತಿಗಾಗಿ ಅನುದಾನ ಬಿಡುಗಡೆ :** ಶಿರಸಿ ಶೈಕ್ಷಣಿಕ ಜಿಲ್ಲೆಯ ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕೊಠಡಿ ನಿರ್ಮಾಣ, ಪೀಠೋಪಕರಣ ಖರೀದಿ, ಕಂಪೌಂಡ್ ನಿರ್ಮಾಣ, ದುರಸ್ತಿಗಾಗಿ ರಾಜ್ಯವಲಯ ಯೋಜನೆಯಡಿ 512.449 ಲಕ್ಷರೂ  ಅನುದಾನ ಮಂಜೂರಾಗಿರುತ್ತದೆ. ಕಾಮಗಾರಿ ಪೂರ್ಣಗೊಳಿಸಲಾಗಿದೆ.

- **ಜಿಲ್ಲಾವಲಯ ಯೋಜನೆ :**
- **ಸೇರ್ಪಡೆ ಮತ್ತು ಮಾರ್ಪಾಡು :**

ಜಿಲ್ಲಾ ವಲಯ ಸೇರ್ಪಡೆ ಮಾರ್ಪಾಡು ಯೋಜನೆಯಡಿಯಲ್ಲಿ 17 ಸರಕಾರಿ ಪ್ರೌಢಶಾಲೆಗಳ ದುರಸ್ತಿಗಾಗಿ ಒಟ್ಟೂ 21.00 ಲಕ್ಷ ರೂ ಅನುದಾನ ಅನುಷ್ಠಾನಾಧಿಕಾರಿಗಳಾದ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತರಾಜ್ ಇಂಜಿನಿಯರಿಂಗ್ ವಿಭಾಗ, ಶಿರಸಿರವರಿಗೆ ಮಂಜೂರಾಗಿ ಬಿಡುಗಡೆಯಾಗಿರುತ್ತದೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

- **ಸಾಮಗ್ರಿ ಸರಬರಾಜು:**

ಜಿಲ್ಲೆಯ 19 ಸರಕಾರಿ ಪ್ರೌಢಶಾಲೆಗಳಿಗೆ ರೂ.8.00 ಲಕ್ಷ ವೆಚ್ಚದಲ್ಲಿ ಡೆಸ್ಕ್, ಬೆಂಚ್‌ಗಳ ಖರೀದಿಗಾಗಿ ಹಾಗೂ ಆಯ್ದ 5 ಸರಕಾರಿ ಪ್ರೌಢಶಾಲೆಗಳಿಗೆ ರೂ.5.00 ಲಕ್ಷ ವೆಚ್ಚದಲ್ಲಿ ಎಲ್.ಸಿ.ಡಿ. ಪ್ರೊಜೆಕ್ಟರ್ ಖರೀದಿಗಾಗಿ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಟೆಂಡರುದಾರರಿಗೆ ಪೂರೈಕೆ ಆದೇಶ ನೀಡಲಾಗಿದೆ.

## ❖ ಸರ್ವ ಶಿಕ್ಷಣ ಅಭಿಯಾನ,

➢ ಶಿರಸಿ ಶೈಕ್ಷಣಿಕ ಜಿಲ್ಲೆಗೆ ಅಂತೂ 890 ಅಧಿಕಾರಿಗಳು ಮತ್ತು ಶಿಕ್ಷಕರ ಹುದ್ದೆ ಮಂಜೂರಾಗಿದ್ದು, ಅವುಗಳಲ್ಲಿ 634 ಅಧಿಕಾರಿಗಳು ಮತ್ತು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಬಗ್ಗೆ ಅಂತೂ ರೂ. 3214.88 ಲಕ್ಷ ಬಿಡುಗಡೆಯಾಗಿದ್ದು, ರೂ. 2947.80 ಲಕ್ಷ ಅನುದಾನವನ್ನು ಸರ್ವ ಶಿಕ್ಷಣ ಅಭಿಯಾನ ಅಧಿಕಾರಿ, ಶಿಕ್ಷಕರ ವೇತನಕ್ಕಾಗಿ ಉಪಯೋಗಿಸಲಾಗಿದೆ.

➢ ಶಿರಸಿ ಶೈಕ್ಷಣಿಕ ಜಿಲ್ಲೆಗೆ ಜಿಲ್ಲಾ ಉಪಸಮನ್ವಯಾಧಿಕಾರಿಗಳು 1 ಹುದ್ದೆ ಮಂಜೂರಿಯಿದ್ದು ಕಾರ್ಯನಿರ್ವಹಿಸುತ್ತಿದ್ದಾರೆ. ಸಹಾಯಕ ಸಮನ್ವಯಾಧಿಕಾರಿಗಳು 1 ಹುದ್ದೆ ಮಂಜೂರಿಯಿದ್ದು, ಹುದ್ದೆ ಖಾಲಿ ಇರುತ್ತದೆ. ಲೆಕ್ಕ ಅಧೀಕ್ಷಕರು 1 ಹುದ್ದೆ ಮಂಜೂರಿಯಿದ್ದು, ಹುದ್ದೆ ಖಾಲಿ ಇರುತ್ತದೆ. ಪ್ರ.ದ.ಸ 1 ಹುದ್ದೆ ಮಂಜೂರಿಯಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. 6 ಕ್ಷೇತ್ರ ಸಮನ್ವಯಾಧಿಕಾರಿಗಳ ಹುದ್ದೆ ಮಂಜೂರಿಯಿದ್ದು, ಅವುಗಳಲ್ಲಿ 2 ಹುದ್ದೆ ಕಾರ್ಯನಿರ್ವಹಿಸುತ್ತಿದ್ದು, 4 ಹುದ್ದೆ ಖಾಲಿ ಇರುತ್ತದೆ.

➢ ಶಿರಸಿ ಶೈಕ್ಷಣಿಕ ಜಿಲ್ಲೆಗೆ ಅಂತೂ 12 ಬಿ.ಆರ್.ಪಿ. ಪ್ರೌಢ, 18 ಬಿ.ಆರ್.ಪಿ. ಪ್ರಾಥಮಿಕ ಹಾಗೂ 96 ಸಿ.ಆರ್.ಪಿ ಹುದ್ದೆ ಮಂಜೂರಾಗಿದ್ದು, ಅವುಗಳಲ್ಲಿ 6 ಬಿ.ಆರ್.ಪಿ. ಪ್ರೌಢ, 12 ಬಿ.ಆರ್.ಪಿ. ಪ್ರಾಥಮಿಕ ಹಾಗೂ 74 ಸಿ.ಆರ್.ಪಿ ಹುದ್ದೆ ಕಾರ್ಯನಿರ್ವಹಿಸುತ್ತಿದ್ದು, 6 ಬಿ.ಆರ್.ಪಿ. ಪ್ರೌಢ, 6 ಬಿ.ಆರ್.ಪಿ. ಪ್ರಾಥಮಿಕ ಹಾಗೂ 22 ಸಿ.ಆರ್.ಪಿ ಹುದ್ದೆ ಖಾಲಿ ಇರುತ್ತದೆ.

➢ ಸಮನ್ವಯ ಶಿಕ್ಷಣ ಚಟುವಟಿಕೆಗಳಿಗಾಗಿ ವೈದ್ಯಕೀಯ ಶಿಬಿರ, ಸಾಧನ ಸಲಕರಣೆ, ಸಾರಿಗೆ ಭತ್ಯೆ, ಬೆಂಗಾವಲು ಭತ್ಯೆ, ವಿಶೇಷ ಶಿಕ್ಷಕರ ವೇತನಗಳಿಗಾಗಿ ಅಂತೂರೂ. 82.70 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 51.79 ಲಕ್ಷ ಅನುದಾನವನ್ನು ಬಳಸಿಕೊಳ್ಳಲಾಗಿರುತ್ತದೆ.

➢ 2018–19 ನೇ ಸಾಲಿನಲ್ಲಿ ಶಾಲೆ ಬಿಟ್ಟ 802 ಮಕ್ಕಳನ್ನು ಗುರುತಿಸಲಾಗಿದ್ದು, 61 ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಗಿದೆ. ಇನ್ನುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

➢ ಶಾಲಾ ಅನುದಾನ ಅಂತೂ 1124 ಶಾಲೆಗಳಿಗೆ ಅಂತೂ ರೂ. 143.37 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 143.37 ಲಕ್ಷ ಅನುದಾನವನ್ನು ಬಳಸಿಕೊಳ್ಳಲಾಗಿರುತ್ತದೆ.

➢ ಆಡಳಿತಾತ್ಮಕ/ಇತರೆ ವೆಚ್ಚದಡಿಯಲ್ಲಿ ಅಂತೂ ರೂ. 16.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 6.06 ಲಕ್ಷ ಅನುದಾನವನ್ನು ಬಳಸಿಕೊಳ್ಳಲಾಗಿರುತ್ತದೆ.

## ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ,

➢ **ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ,**

ಶಿರಸಿ ಶೈಕ್ಷಣಿಕ ಜಿಲ್ಲೆಗೆ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿ ಅಂತೂ 41 ಶಿಕ್ಷಕರು ಮತ್ತು 6 ಮುಖ್ಯ ಶಿಕ್ಷಕರ ಹುದ್ದೆ ಮಂಜೂರಿ ಇದ್ದು, ಅವುಗಳಲ್ಲಿ 30 ಶಿಕ್ಷಕರು ಮತ್ತು 3 ಮುಖ್ಯ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ಉಪ ಸಮನ್ವಯಾಧಿಕಾರಿಗಳು 1 ಹುದ್ದೆ ಮಂಜೂರಿಯಿದ್ದು ಕಾರ್ಯನಿರ್ವಹಿಸುತ್ತಿದ್ದಾರೆ. ಸಹಾಯಕ ಸಮನ್ವಯಾಧಿಕಾರಿಗಳು 1 ಹುದ್ದೆ ಮಂಜೂರಿಯಿದ್ದು, ಹುದ್ದೆ ಖಾಲಿ ಇರುತ್ತದೆ. ತಾಂತ್ರಿಕ ಸಹಾಯಕರ ಹುದ್ದೆ 1 ಹುದ್ದೆ ಮಂಜೂರಿಯಿದ್ದು, ಹುದ್ದೆ ಖಾಲಿ ಇರುತ್ತದೆ. ಈ ಬಗ್ಗೆ ಆರ್.ಎಮ.ಎಸ್.ಎ. ಪ್ರೌಢಶಾಲೆಗಳಿಗೆ ರೂ. 195.03 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.180.98 ಲಕ್ಷ ಅನುದಾನವನ್ನು ಶಿಕ್ಷಕರ & ಮುಖ್ಯ ಶಿಕ್ಷಕರ ವೇತನಕ್ಕಾಗಿ ಉಪಯೋಗಿಸಲಾಗಿದೆ. ಆರ್.ಎಂ.ಎಸ್.ಎ ಜಿಲ್ಲಾ ಕಛೇರಿಗೆ ವೇತನಕ್ಕಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

➢ ಶಾಲಾ ಅನುದಾನ ಅಂತೂ 74 ಶಾಲೆಗಳಿಗೆ ಅಂತೂ ರೂ. 18.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 18.00 ಲಕ್ಷ ಅನುದಾನವನ್ನು ಬಳಸಿಕೊಳ್ಳಲಾಗಿರುತ್ತದೆ.

➢ ಸರ್ಕಾರಿ ಮತ್ತು ಅನುದಾನಿತ ಒಟ್ಟೂ 122 ಪ್ರೌಢ ಶಾಲೆಗಳಿಗೆ ಇಕೋ ಕ್ಲಬ್ ಚಟುವಟಿಕೆಗಳಿಗೆ ರೂ 6.10 ಲಕ್ಷ ಅನುದಾನ ಬಿಡುಗಡೆಯಾಗಿದ್ದು 6.10 ಬಳಸಿಕೊಳ್ಳಲಾಗಿರುತ್ತದೆ.

*****

ಮಾಹಿತಿ ಮೂಲ : ಸಾರ್ವಜನಿಕ ಶಿಕ್ಷಣ ಇಲಾಖೆ, ಶಿರಸಿ ಶೈಕ್ಷಣಿಕ ಜಿಲ್ಲೆ

# ಕೃಷಿ ಇಲಾಖೆ

## ಇಲಾಖೆಯ ಮುಖ್ಯ ಉದ್ದೇಶ:

ಜಿಲ್ಲೆಯ ಎಲ್ಲಾ ರೈತರ ಕುಟುಂಬಗಳ ಆರ್ಥಿಕಮಟ್ಟ ಸುಧಾರಿಸಲು ರೈತರಿಗೆ ಅವಶ್ಯವಿರುವ ಮತ್ತು ಇಲಾಖಾ ವತಿಯಿಂದ ದೊರೆಯಬಹುದಾದ ಸವಲತ್ತುಗಳನ್ನು ಸೂಕ್ತ ಸಮಯದಲ್ಲಿ ಸಮರ್ಪಕವಾಗಿ ಸಿಗುವಂತೆ ಕ್ರಮವಹಿಸುವುದು, ಕೃಷಿ ವಿಸ್ತರಣಾ ಚಟುವಟಿಕೆಗಳ ಮೂಲಕ ನೂತನ ಕೃಷಿ ತಾಂತ್ರಿಕತೆ, ಕೃಷಿ ಪರಿಕರಗಳು,ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ಸಸ್ಯ ಸಂರಕ್ಷಣಾ ಔಷಧಿ, ಕೃಷಿ ಯಂತ್ರೋಪಕರಣಗಳು ಇತ್ಯಾದಿ ಸಹಾಯಧನದಲ್ಲಿ ರೈತರಿಗೆ ಒದಗಿಸುವುದು,ತರಬೇತಿ, ಪ್ರಾತ್ಯಕ್ಷಿಕೆ ಮತ್ತು ಅಧ್ಯಯನ ಪ್ರವಾಸಗಳನ್ನು ಏರ್ಪಡಿಸಿ ವಿವಿಧ ನೂತನ ತಾಂತ್ರಿಕತೆಗಳ ಬಗ್ಗೆ ರೈತರಿಗೆ ಮನವರಿಕೆ ಮಾಡುವುದು, ಒಟ್ಟಾರೆ ಕೃಷಿ ಬೆಳೆಗಳ ಇಳುವರಿ ಮಟ್ಟವನ್ನು ಹೆಚ್ಚಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚುವರಿಗೊಳಿಸಿ ಆಹಾರ ಭದ್ರತೆಯನ್ನು ಕಾಪಾಡುವುದು.

## ಮಣ್ಣು ಆರೋಗ್ಯ ಅಭಿಯಾನ ಯೋಜನೆಯಡಿ ಮಣ್ಣು ಫಲವತ್ತತಾ ಚೀಟಿ ವಿತರಣೆ:

2018–19 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ **GPS** ಆಧಾರದ ಮೇಲೆ ಮಣ್ಣು ಮಾದರಿಗಳನ್ನು ಸಂಗ್ರಹಿಸಿ ಮಣ್ಣಿನ ರಸಸಾರ, ಲವಣಾಂಶ, ಪ್ರಧಾನ ಪೋಷಕಾಂಶ, ಸೆಕೆಂಡರಿ ಪೋಷಕಾಂಶಗಳಾದ ಗಂಧಕ ಪೊಟ್ಯಾಷ್ ಮತ್ತು ಲಘು ಪೋಷಕಾಂಶಗಳಾದ ಸತು, ತಾಮ್ರ, ಮ್ಯಾಂಗನೀಸ್, ಕಬ್ಬಿಣ ಮತ್ತು ಬೊರೊನ್ ಪೋಷಕಾಂಶಗಳು ಹೀಗೆ ಒಟ್ಟಾರೆ 12 ಮಾನದಂಡಗಳ ವಿಶ್ಲೇಷಣೆ ಕೈಗೊಂಡು ರೈತರಿಗೆ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸಲಾಗುತ್ತಿದೆ. ಇದರಿಂದಾಗಿ ರೈತರಿಗೆ ಸೂಕ್ತ ಶಿಪಾರಸ್ಸುಗಳನ್ನು ನೀಡಲಾಗುತ್ತಿದ್ದು, ರೈತರು ರಸಗೊಬ್ಬರಗಳನ್ನು ಸಮತೋಲನ ಪ್ರಮಾಣದಲ್ಲಿ ಬಳಸಿ ಅನಾವಶ್ಯಕ ಬಳಕೆಯನ್ನು ತಪ್ಪಿಸಬಹುದಾಗಿದೆ. ಇಲ್ಲಿಯವರೆಗೂ 88996 ಮಣ್ಣು ಆರೋಗ್ಯ ಚೀಟಿಗಳನ್ನು ರೈತರಿಗೆ ವಿತರಿಸಲಾಗಿದೆ.

## ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ:

ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭವಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಹನ್ನೆರಡನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೂ ಮುಂದುವರೆದಿದೆ. ಜಿಲ್ಲೆಯಲ್ಲಿ ಭತ್ತ ಮತ್ತು ದ್ವಿದಳಧಾನ್ಯ ಉತ್ಪಾದನೆಯನ್ನು ಹೆಚ್ಚಿಸುವ ಕುರಿತಾಗಿ ಎನ್.ಎಫ್.ಎಸ್.ಎಂ ಅಕ್ಕಿ ಮತ್ತು ಎನ್.ಎಫ್.ಎಸ್.ಎಂ ದ್ವಿದಳಧಾನ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದ್ರಿ ಯೋಜನೆಯಡಿ ಮಣ್ಣು ಪರೀಕ್ಷೆ ಆಧಾರದ ಮೇಲೆ ಲಘು ಪೋಷಕಾಂಶಗಳ ಬಳಕೆಗೆ ಒತ್ತು ನೀಡಿ ಕೃಷಿ ಪದ್ಧತಿಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆಯೊಂದಿಗೆ ಭತ್ತದ ಉತ್ಪಾದಕತೆ ಹೆಚ್ಚಿಸಿ ರೈತರ ಉತ್ಪಾದನಾ ವೆಚ್ಚ ಕಡಿತಗೊಳಿಸಿ ಆದಾಯವನ್ನು ಹೆಚ್ಚಿಸಲು ಭತ್ತದ ಬೆಳೆಯಲ್ಲಿ ನಿರ್ಧಿಷ್ಟ ಸುಧಾರಿತ ತಾಂತ್ರಕತೆ ಪ್ರಾತ್ಯಕ್ಷಿಕೆಗಳನ್ನು (ನೇರ ಬಿತ್ತನೆ ಮತ್ತು ಯಾಂತ್ರೀಕೃತ ನಾಟಿ ಪದ್ದತಿ) ರೈತರ ತಾಕುಗಳಲ್ಲಿ ಪ್ರತಿ ರೈತ ಫಲಾನುಭವಿಗೆ ಗರಿಷ್ಠ 2 ಹೆ.ಗೆ ಮೀರದಂತೆ ಕೈಗೊಳ್ಳಲು ನೇರ ಬಿತ್ತನೆ ಪ್ರಾತ್ಯಕ್ಷಿಕೆಗೆ ರೂ. 4000 ಪ್ರತಿ ಹೆ.ಗೆ ಸಹಾಯಧನವನ್ನು ಹಾಗೂ ಯಾಂತ್ರೀಕೃತ ನಾಟಿ ಪದ್ದತಿ ಪ್ರಾತ್ಯಕ್ಷಿಕೆಗೆ ರೂ. 9000 ಪ್ರತಿ ಹೆ.ಗೆ ಸಹಾಯಧನವನ್ನು ಅಗತ್ಯವಿರುವ ಪರಿಕರ ಖರೀದಿ ಮತ್ತು ತಾಂತ್ರಿಕತೆ ಅಳವಡಿಸಿಕೊಳ್ಳಲು ನೇರ ನಗದು ವರ್ಗಾವಣೆ (DBT) ಮೂಲಕ ರೈತರ ಖಾತೆಗೆ ಜಮಾ ಮಾಡಲಾಗಿರುತ್ತದೆ.

## ಪರಂಪರಾಗತ ಕೃಷಿ ವಿಕಾಸ ಯೋಜನೆ (PKVY):

ಕೇಂದ್ರ ಪುರಸ್ಕೃತ **National Mission on Sustainable Agriculture** ಅಭಿಯಾನದಡಿಯಲ್ಲಿ **Soil Health Management** ಅಡಿಯಲ್ಲಿ 60:40 ಅನುಪಾತದಲ್ಲಿ ಹೊಸ ಯೋಜನೆಯಾದ ಪರಂಪರಾಗತ ಕೃಷಿ ವಿಕಾಸ ಯೋಜನೆ (**PKVY**) ಯನ್ನು ಜಿಲ್ಲೆಯ ಪ್ರತಿ ತಾಲೂಕಿನಲ್ಲಿ 50 ಎಕರೆ ಪ್ರದೇಶ ವ್ಯಾಪ್ತಿಯಂತೆ ಮೂರು ಕ್ಲಸ್ಟರ್‌ಗಳನ್ನು ಆಯ್ಕೆ ಮಾಡಲಾಗಿದ್ದು, ಸಾವಯವ ಕೃಷಿ ಅನುಭವ ಪಡೆದ ಒಬ್ಬ ರೈತರ **Lead Resource Person(LRP)** ಮೂಲಕ ಪರಂಪರಾಗತ ಕೃಷಿ ಅಭಿವೃದ್ಧಿಪಡಿಸಲು ಕ್ಲಸ್ಟರನಲ್ಲಿ ತೆಗೆದುಕೊಳ್ಳುವ ಬೆಳೆಗಳ ಕುರಿತಾದ ವಾರ್ಷಿಕ ಕ್ರಿಯಾ ಯೋಜನೆ ಮತ್ತು **PGS** ಗುಂಪು ಪ್ರಮಾಣೀಕರಣ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಸ್ಥಳೀಯ ಪಾರಂಪರಿಕವಾಗಿ ಇರುವ ಬೆಳೆಗಳ ಅಭಿವೃದ್ಧಿಪಡಿಸುವಿಕೆ ಈ ಯೋಜನೆಯ ಮೂಲ ಉದ್ದೇಶವಾಗಿರುತ್ತದೆ.

## ಕೃಷಿ ಭಾಗ್ಯ:

ಸಮರ್ಪಕ ಮಳೆ ನೀರಿನ ಸಂಗ್ರಹಣೆ ಮತ್ತು ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮಪಡಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಬಿದ್ದ ಮಳೆ ನೀರನ್ನು ವ್ಯರ್ಥ ಮಾಡದೇ ಆಯ್ದ ಸ್ಥಳಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿಕೊಳ್ಳಲು ಸಾಮಾನ್ಯ ರೈತರಿಗೆ ಶೇ.80 ಮತ್ತು ಪ.ಜಾತಿ, ಪ.ಪಂ. ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ. ಅಲ್ಲದೇ, ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ, ಹೊಂಡದಿಂದ ನೀರೆತ್ತಲು ಡೀಸೆಲ್ ಪಂಪಸೆಟ್, ನೀರನ್ನು ಬೆಳೆಗೆ ಹಾಯಿಸಲು ತುಂತುರು/ಹನಿ ನೀರಾವರಿ ಘಟಕಗಳು, ಕೃಷಿ ಹೊಂಡದ ಸುತ್ತಲೂ ನೆರಳು ಪರದೆಯನ್ನು ಅಳವಡಿಸಲು ಸಹ ಮೇಲೆ ತಿಳಿಸಿದ ಸಹಾಯಧನವನ್ನು ವಿತರಣೆ ಮಾಡಲಾಗುತ್ತಿದೆ. ಕೃಷಿ ಭಾಗ್ಯ ಯೋಜನೆಯು ಪ್ರಸಕ್ತ ಸಾಲಿನಲ್ಲಿ ವಿಶೇಷವಾಗಿ ಜಿಲ್ಲೆಯ ಎಲ್ಲ ತಾಲ್ಲೂಕಗಳಲ್ಲಿ ಪ್ರಾರಂಭಗೊಂಡಿದ್ದು ಒಟ್ಟು 537 ವಿವಿಧ ಅಳತೆಯ ಕೃಷಿ ಹೊಂಡಗಳನ್ನು ರೈತರು ನಿರ್ಮಾಣ ಮಾಡಿಕೊಂಡು ಇಲಾಖೆಯಿಂದ ಸಹಾಯಧನ ಸೌಲಭ್ಯ ಪಡೆದಿರುತ್ತಾರೆ.

## ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ದತಿ (ZBNF) :

ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯಡಿಯಲ್ಲಿ ಪ್ರಮುಖವಾಗಿ ಬೀಜಾಮೃತ, ಜೀವಾಮೃತ, ಬೆಳೆಗಳ ಹೊದಿಕೆ, ಇತ್ಯಾದಿ ಘಟಕಗಳ ಬಗ್ಗೆ ಒತ್ತುಕೊಡಲಾಗುತ್ತಿದೆ. ಜಿಲ್ಲೆಯಲ್ಲಿ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಂಡಿರುವ/ಆಸಕ್ತಿ ಹೊಂದಿರುವ ಸ್ಥಳೀಯ ರೈತರನ್ನು ಗುರುತಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಅನುಷ್ಠಾನಕ್ಕಾಗಿ ಕ್ಲಸ್ಟರ್ ಮಟ್ಟದಲ್ಲಿ ಸೂಕ್ತ ರೈತ ಸದಸ್ಯರನ್ನು ಗುರುತಿಸಿ ಸಮಿತಿಗಳನ್ನು ರಚಿಸಲಾಗಿದೆ. ಆಯ್ಕೆಗೊಂಡ ರೈತರಿಗೆ ZBNF ಅಳವಡಿಸಿಕೊಳ್ಳಲು ಸಹಾಯಧನವನ್ನು DBT ಮುಖಾಂತರ ಪಾವತಿಸಲಾಗುವುದು. ವೈಯಕ್ತಿಕ ಚಟುವಟಿಕೆಗಳಾದ ನೆಲಹೊದಿಕೆ, ಬೀಜ ಮತ್ತು ಸಸಿ ವಿತರಣೆ, ಬೀಜಾಮೃತ, ಜೀವಾಮೃತ ತಯಾರಿಕೆಗೆ ಸಿಮೆಂಟ್ ತೊಟ್ಟಿ, ಪ್ಲಾಸ್ಟಿಕ್ ಡ್ರಂ, ಕಚ್ಚಾ ವಸ್ತುಗಳಿಗೆ ಬಯೋಡೈಜೆಸ್ಟರ್, ಗಂಜಲ ಸಂಗ್ರಹಣಾ ತೊಟ್ಟಿ, ಸಮುದಾಯ ಚಟುವಟಿಕೆಗಳಾದ ನಾಟಿ ತಳಿಗಳ ಬೀಜ ಬ್ಯಾಂಕ್, ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಮೂಲಕ ಕೃಷಿ ಯಂತ್ರೋಪಕರಣಗಳಿಗೆ ಶುಲ್ಕ ಪಾವತಿಸಲು ಶೇ.90 ರಂತೆ ಸಹಾಯಧನ ಅಥವಾ ಯೋಜನೆಯಡಿ ನಿಗದಿಪಡಿಸಿದ ಗರಿಷ್ಠ ಮೊತ್ತ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ನೀಡಲಾಗುತ್ತಿದೆ.

*****

ಮಾಹಿತಿ ಮೂಲ : ಜಿಲ್ಲಾ ಕೃಷಿ ಇಲಾಖೆ, ಕಾರವಾರ

# ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

**ಯೋಜನೇತರ :**

**1. 2205-00-104-0-26 : ಕ್ರೀಡಾಕೂಟ ಹಾಗೂ ರ್‍ಯಾಲಿ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸಿದವರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ**

| | |
|---|---|
| ಜಿಲ್ಲಾ ಪಂಚಾಯತ್ ಅನುದಾನ | : ರೂ. 38.00 ಲಕ್ಷ |
| ಬಿಡುಗಡೆಯಾದ ಅನುದಾನ | : ರೂ. 38.00 ಲಕ್ಷ |
| ಒಟ್ಟು ಖರ್ಚಾದ ಅನುದಾನ | : ರೂ. 38.00 ಲಕ್ಷ |
| ಸಾಧನೆ | : ಶೇ. 100% |

ಈ ಲೆಕ್ಕ ಶೀರ್ಷಿಕೆಯಡಿ ಜಿಲ್ಲಾ ಮಟ್ಟದ ಯುವಜನ ಮೇಳವನ್ನು ಕಾರವಾರ ತಾಲೂಕಿನ ಅಮದಳ್ಳಿಯ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಯಶಸ್ವಿಯಾಗಿ ಸಂಘಟಿಸಲಾಯಿತು. ಸದರಿ ಕಾರ್ಯಕ್ರಮವನ್ನು ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ ಮೊಗೇರ ರವರು ಉದ್ಘಾಟಿಸಿದರು. ಕಾರವಾರ ಮತ್ತು ಅಂಕೋಲ ವಿಧಾನಸಭೆಯ ಮಾನ್ಯ ಶಾಸಕರಾದ ಶ್ರೀಮತಿ. ರೂಪಾಲಿ ಎಸ್ ನಾಯ್ಕ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಮಟ್ಟದ ಯುವಜನ ಮೇಳದಲ್ಲಿ 650 ಸ್ಪರ್ಧಾಳುಗಳು ಭಾಗವಹಿಸಿದ್ದರು. ಜಿಲ್ಲಾ ಮಟ್ಟದ ಯುವಜನ ಮೇಳದಲ್ಲಿ ಭಾಗವಹಿಸಿದ ಸ್ಪರ್ಧಾಳುಗಳ ಪ್ರಯಾಣ ಭತ್ಯೆಯನ್ನು ಇಲಾಖಾ ವತಿಯಿಂದ ನೀಡಲಾಯಿತು. ಸಂಘಟನಾ ವೆಚ್ಚಕ್ಕಾಗಿ ರೂ. 6 ಲಕ್ಷ 31 ಸಾವಿರಗಳನ್ನು ಭರಿಸಲಾಯಿತು.

ಜಿಲ್ಲಾ ಮಟ್ಟದ ಯುವಜನೋತ್ಸವವನ್ನು ಅಮದಳ್ಳಿಯ ಗಣಪತಿ ಸಭಾಭವನದಲ್ಲಿ ಸಂಘಟಿಸಲಾಯಿತು. ಸದರಿ ಕಾರ್ಯಕ್ರಮವನ್ನು ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ. ಜಯಶ್ರೀ ಮೊಗೇರ ರವರು ಉದ್ಘಾಟಿಸಿದರು. ತುಮಕೂರು ಜಿಲ್ಲೆಯಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಉತ್ತರ ಕನ್ನಡ ಜಿಲ್ಲೆಯ 57 ಸ್ಪರ್ಧಾಳುಗಳು ಉತ್ತಮ ಪ್ರತಿಭೆಯನ್ನು ತೋರಿಸಿದರು. ಸದರಿ ಸ್ಪರ್ಧಾಳುಗಳ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಇಲಾಖಾ ವತಿಯಿಂದ ನೀಡಲಾಯಿತು.

ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಅಂಕೋಲ ತಾಲೂಕಿನ ತಾಲೂಕು ಕ್ರೀಡಾಂಗಣದಲ್ಲಿ ಯಶಸ್ವಿಯಾಗಿ ಸಂಘಟಿಸಲಾಯಿತು. ಸದರಿ ಕಾರ್ಯಕ್ರಮವನ್ನು ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ ಮೊಗೇರ ರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ 550 ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು.

ಉಳಿದಂತೆ, ಕ್ರೀಡಾ ಶಾಲೆ/ನಿಲಯಗಳ ಆಯ್ಕೆ ಪ್ರಕ್ರಿಯೆ, ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ, ಆಯ್ದ ಶಾಲೆಗಳಿಗೆ ಕ್ರೀಡಾ ಸಾಮಾಗ್ರಿ ವಿತರಣೆ, ಸಕ್ರೀಯವಾಗಿ ಕಾರ್ಯನಿರ್ವಹಿಸುವ ಯುವಕ ಸಂಘಗಳಿಗೆ ಗ್ರಾಮೀಣ ಕ್ರೀಡಾಕೂಟ ನಡೆಸಲು ಸಹಾಯಧನ ನೀಡಲಾಗಿರುತ್ತದೆ.

**2) 2205-00-104-0-28: ತಾಲೂಕು ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಾಣ ಮತ್ತು ನಿರ್ವಹಣೆ.**

| | |
|---|---|
| ಜಿಲ್ಲಾ ಪಂಚಾಯತ್ ಅನುದಾನ | : ರೂ. 58.00 ಲಕ್ಷ |
| ಬಿಡುಗಡೆಯಾದ ಅನುದಾನ | : ರೂ. 58.00 ಲಕ್ಷ |
| ಒಟ್ಟು ಖರ್ಚಾದ ಅನುದಾನ | : ರೂ. 58.00 ಲಕ್ಷ |
| ಸಾಧನೆ | : ಶೇ. 100% |

ಈ ಕಾರ್ಯಕ್ರಮದಡಿಯಲ್ಲಿ ಶಿರಸಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳೆಯರ ವಿಶ್ರಾಂತಿ ಕೊಠಡಿ ಮತ್ತು ಅಂಕೋಲ ತಾಲೂಕು ಕ್ರೀಡಾಂಗಣದ ಕಂಪೌಂಡ ನಿರ್ಮಾಣಕ್ಕಾಗಿ ಮತ್ತು ಯಲ್ಲಾಪುರ ತಾಲೂಕು ಕ್ರೀಡಾಂಗಣಕ್ಕೆ 100 ಮೀ ಪೆನ್ಸಿಂಗ್ ಅಳವಡಿಕೆಗೆ ಮತ್ತು ಮುಂಡಗೋಡ ತಾಲೂಕು ಕ್ರೀಡಾಂಗಣದ ವ್ಯಾಯಾಮ ಶಾಲೆಯ ಜಿಮ್ ಹಾಲ್‌ಗೆ ಮ್ಯಾಟ್ ಅಳವಡಿಸಲು ಮತ್ತು ಶಿರಸಿ, ಅಂಕೋಲಾ, ಜೋಯಿಡಾ, ಹಳಿಯಾಳ, ಮುಂಡಗೋಡು ತಾಲೂಕು ಕ್ರೀಡಾಂಗಣ ಮತ್ತು ಕುಸ್ತಿ ಅಖಾಡ ನಿರ್ವಹಣೆಗಾಗಿ ವೆಚ್ಚ ಭರಿಸಲು ವೆಚ್ಚ ಭರಿಸಲಾಗಿರುತ್ತದೆ.

**3) 2205–00–104–0–29 : ಕ್ರೀಡಾಶಾಲೆ**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 30.00 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 30.00 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ 30.00 ಲಕ್ಷ |
| ಸಾಧನೆ | : | ಶೇ. 100% |

ಈ ಕಾರ್ಯಕ್ರಮದಡಿಯಲ್ಲಿ ಕಾರವಾರ ಮತ್ತು ಹಳಿಯಾಳದಲ್ಲಿರುವ ಕ್ರೀಡಾ ವಸತಿ ನಿಲಯ ನಿರ್ವಹಣೆಗೆ ಕಾವಲುಗಾರರ ಮತ್ತು ಸ್ವಚ್ಛತಾ ಸಿಬ್ಬಂದಿಯವರ ಗೌರವ ಧನ, ಸಿ.ಸಿ ಟಿ ವಿ ಖರೀದಿ, ಸ್ಟ್ರೀಟ್ ಸೋಲಾರ್ ಬಲ್ಬ ಅಳವಡಿಕೆ, ವಿದ್ಯುತ್ ಬಾಬ್ತು ಪಾವತಿ, ಸ್ವಚ್ಛತಾ ಮತ್ತು ಇತರೆ ಸಾಮಗ್ರಿ ಹಾಗೂ 73 ಕ್ರೀಡಾಪಟುಗಳಿಗೆ ಶೂ ಖರೀದಿ, ಕಾಟ್‌ಗಳ ರಿಪೇರಿಗಾಗಿ ವೆಚ್ಚ ಭರಿಸಲಾಗಿದೆ.

**4) 2205–00–104–0–31 : ಗ್ರಾಮೀಣ ಕ್ರೀಡಾ ಕೇಂದ್ರಗಳು.**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 10.00 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 10.00 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ 10.00 ಲಕ್ಷ |
| ಸಾಧನೆ | : | ಶೇ. 100% |

ಈ ಕಾರ್ಯಕ್ರಮದಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ 40 ಜಿಲ್ಲಾ ಪಂಚಾಯತ್ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 1 ಶಾಲೆಯಂತೆ 40 ಶಾಲೆಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಕ್ರೀಡೆಯನ್ನು ಬೆಳೆಸುವ ಉದ್ದೇಶದಿಂದ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಿ ನೀಡಲಾಯಿತು.

**5) 2205–00–104–0–30 : ಕಷ್ಟ ಪರಿಸ್ಥಿತಿಯಲ್ಲಿರುವ ಹಿರಿಯ ಕುಸ್ತಿ/ ಇತರೆ ಕ್ರೀಡಾಪಟುಗಳಿಗೆ ಆರ್ಥಿಕ ನೆರವು.**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 10.00 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 10.00 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ 10.00 ಲಕ್ಷ |
| ಸಾಧನೆ | : | ಶೇ. 100% |

ಈ ಕಾರ್ಯಕ್ರಮದಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ 13 ರಾಷ್ಟ್ರ ಮಟ್ಟ ಹಾಗೂ 30 ರಾಜ್ಯ ಮಟ್ಟದ ಹಿರಿಯ ಕುಸ್ತಿ ಕ್ರೀಡಾಪಟುಗಳಿಗೆ ಮಾಸಾಶನ ನೀಡಲಾಗುತ್ತಿದೆ.

## ಯೋಜನೇತರ

**1) 2205–00–104–0–27 : ವೇತನ**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 18.00 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 18.00 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ. 17.00 ಲಕ್ಷ |
| ಸಾಧನೆ | : | ಶೇ. 98% |

ಈ ಲೆಕ್ಕ ಶೀರ್ಷಿಕೆಯಡಿ ಕಚೇರಿಯ ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ ಹಾಗೂ ಇತರ ಭತ್ಯೆ ಭರಿಸಲಾಗಿದೆ.

**2) 2205–00–104–0–27–050 : ವೇತನೇತರ (ಕಚೇರಿ ವೆಚ್ಚ)**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 3.43 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 3.43 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ. 3.43 ಲಕ್ಷ |
| ಸಾಧನೆ | : | ಶೇ. 100% |

ಈ ಲೆಕ್ಕ ಶೀರ್ಷಿಕೆಯಡಿ ಕಂಪ್ಯೂಟರ್ ಆಪರೇಟರ್ ವೇತನ ಮತ್ತು ಇತರ ಸಾಧಿಲ್ವಾರು ವೆಚ್ಚಗಳ್ಳು ಭರಿಸಲಾಯಿತು.

**3) 2205–00–104–0–32 : ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 2.29 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 2.29 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ. 2.29 ಲಕ್ಷ |
| ಸಾಧನೆ | : | ಶೇ. 100% |

ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ರಾಜ್ಯ/ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ 40 ಕ್ರೀಡಾಪಟುಗಳಿಗೆ ನಗದು ಪ್ರೋತ್ಸಾಹ ಧನಕ್ಕಾಗಿ ಭರಿಸಲಾಯಿತು.

**4) 2205–00–104–0–33 : ವಿದ್ಯಾ ಹಾಗೂ ಇತರ ಸಂಸ್ಥೆಗಳಿಗೆ ಕ್ರೀಡಾ ಸಾಮಗ್ರಿ ಕೊಳ್ಳಲು ಅಥವಾ ಆಟದ ಮೈದಾನ ಅಭಿವೃದ್ಧಿಪಡಿಸಲು ಸಹಾಯ.**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 2.28 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 2.28 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ. 2.28 ಲಕ್ಷ |
| ಸಾಧನೆ | : | ಶೇ. 100% |

ಈ ಲೆಕ್ಕ ಶೀರ್ಷಿಕೆಯಡಿ ಉತ್ತರ ಕನ್ನಡ ಜಿಲ್ಲೆಯ 22 ಯುವಕ ಸಂಘಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಿ ವಿತರಿಸಲಾಯಿತು.

**5) 2205–00–104–0–35 : ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಾಗಿ ಪ್ರೋತ್ಸಾಹ**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 1.14 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 1.14 ಲಕ್ಷ |

| | | |
|---|---|---|
| ಒಟ್ಟು ಖರ್ಚಾದ ಅನುದಾನ | : | ರೂ. 1.14 ಲಕ್ಷ |
| ಸಾಧನೆ | : | ಶೇ. 100% |

ಈ ಲೆಕ್ಕ ಶೀರ್ಷಿಕೆಯಡಿ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ಗ್ರಾಮೀಣ ಪ್ರದೇಶದ 60 ಕ್ರೀಡಾಪಟುಗಳಿಗೆ ಟ್ರ್ಯಾಕ್‌ಸೂಟ್ ಮತ್ತು ಶೂ ಖರೀದಿಸಲಾಗಿರುತ್ತದೆ.

**6) 2205–00–104–0–36 : ಯುವಜನ ಕ್ರೀಡಾ ಮಂಡಳಿಗೆ ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಸಹಾಯ**

| | | |
|---|---|---|
| ಜಿಲ್ಲಾ ಪಂಚಾಯತ್ ಅನುದಾನ | : | ರೂ. 1.14 ಲಕ್ಷ |
| ಬಿಡುಗಡೆಯಾದ ಅನುದಾನ | : | ರೂ. 1.14 ಲಕ್ಷ |
| ಒಟ್ಟು ಖರ್ಚಾದ ಅನುದಾನ | : | ರೂ. 1.14 ಲಕ್ಷ |
| ಸಾಧನೆ | : | ಶೇ. 100% |

ಈ ಲೆಕ್ಕ ಶೀರ್ಷಿಕೆಯಡಿ ತಾಲೂಕಿನಲ್ಲಿ ಅವಶ್ಯವಿರುವ ದಿನನಿತ್ಯದ ಅಭ್ಯಾಸಕ್ಕಾಗಿ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲಾಯಿತು.

2018–19 ನೇ ಸಾಲಿಗೆ ಇಲಾಖೆಯಲ್ಲಿ ರಾಜ್ಯ ವಲಯ ಯೋಜನೆ ಅಡಿಯಲ್ಲಿ ನಮ್ಮೂರ ಶಾಲೆಗೆ ನಮ್ಮ ಯುವಜನರು ಹೊಸ ಯೋಜನೆ ಅನುಷ್ಠಾನಗೊಂಡಿದ್ದು, ಸದರಿ ಯೋಜನೆಯಡಿ ಈ ಕೆಳಕಂಡ ಯುವಕ ಸಂಘಗಳಿಗೆ ಆಯಾ ಗ್ರಾಮದಲ್ಲಿ ಶಾಲೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಮೇರೆಗೆ ರೂ. 1.00 ಲಕ್ಷಗಳ ಪ್ರೋತ್ಸಾಹ ಧನವನ್ನು ನೀಡಲಾಗಿದೆ.

| | | |
|---|---|---|
| 1. | ಸರಕಾರಿ ಪ್ರೌಢ ಶಾಲೆ, ಕುಂಬಾರವಾಡಾ | ಜೋಯಿಡಾ |
| 2. | ಸರಕಾರಿ ಪ್ರೌಢ ಶಾಲೆ, ಬೆಳವಟಗಿ | ಹಳಿಯಾಳ |
| 3. | ಸರಕಾರಿ ಪ್ರೌಢ ಶಾಲೆ, ಮುಂಡಳ್ಳಿ | ಭಟ್ಕಳ |
| 4. | ಸರಕಾರಿ ಪ್ರೌಢ ಶಾಲೆ, ಉಮ್ಮಚಗಿ | ಯಲ್ಲಾಪುರ |
| 5. | ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಕೂಜಳ್ಳಿ | ಕುಮಟಾ |
| 6. | ಸರಕಾರಿ ಪ್ರೌಢ ಶಾಲೆ, ಇಸ್ಲೂರು | ಶಿರಸಿ |
| 7. | ಸರಕಾರಿ ಪ್ರೌಢ ಶಾಲೆ, ಕೋಲಸಿರ್ಸಿ | ಸಿದ್ದಾಪುರ |
| 8. | ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಗುಣವಂತೆ | ಹೊನ್ನಾವರ |
| 9. | ಸರಕಾರಿ ಪ್ರೌಢ ಶಾಲೆ, ಅಂಕೋಲ | ಅಂಕೋಲ |
| 10. | ಸರಕಾರಿ ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಳ್ನೂರು ಓಣಿ | ಮುಂಡಗೋಡು |
| 11. | ಸರಕಾರಿ ಪ್ರೌಢ ಶಾಲೆ, ಅಮದಳ್ಳಿ | ಕಾರವಾರ |

*****

ಮಾಹಿತಿ ಮೂಲ : ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರವಾರ

# ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲ ಉದ್ದೇಶ ಕನ್ನಡದ ಅನುಷ್ಠಾನ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪುರೋಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು ಅಲ್ಲದೇ ಗ್ರಾಮ ಪಂಚಾಯತಿಯಿಂದ ಹಿಡಿದು ರಾಜ್ಯಧಾನಿಯವರೆಗೂ ಆಡಳಿತದ ಎಲ್ಲ ಹಂತಗಳಲ್ಲಿ ನೂರಕ್ಕೆ ನೂರರಷ್ಟು ಕನ್ನಡವನ್ನು ಅನುಷ್ಠಾನಕ್ಕೆ ತರುವುದು ನಮ್ಮ ಇಲಾಖೆಯ ಪ್ರಮುಖ ಉದ್ದೇಶ ಮತ್ತು ನಮ್ಮ ನಾಡಿನ ಕಲೆ. ಸಾಂಸ್ಕೃತಿಕ ಮತ್ತು ಸಾಹಿತ್ಯವನ್ನು ಉಳಿಸಿ ಬೆಳಸುವ ಹಿನ್ನಲೆಯಲ್ಲಿ ಗ್ರಾಮ. ತಾಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಕಲಾವಿದರಲ್ಲಿರುವ ಕಲೆಗೆ ಪ್ರೋತ್ಸಾಹ ನೀಡಿ ನಮ್ಮ ನಾಡಿನ ಭವ್ಯ ಪರಂಪರೆಯನ್ನು ಇಂದಿನ ಯುವಕ/ಯುವತಿಯರಿಗೆ ಪರಿಚಯಿಸುವುದು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಪಾರವಾದ ಸಾಧನೆ ಮಾಡಿದ ಹಿರಿಯ ಕಲಾವಿದರನ್ನು ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಇತರೆ ದಾರ್ಶನಿಕರ ಹೆಸರಿನಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು 58ವರ್ಷ ವಯೋಮಿತಿ ಮೀರಿದ ಹಿರಿಯ ಕಲಾವಿದರಿಗೆ ಮಾಹೆಯಾನ ರೂ 1,500/-(ಒಂದು ಸಾವಿರದ ಐದುನೂರು) ಗಳಂತೆ ಮಾಸಾಶನ ಮತ್ತು ವೈದ್ಯಕೀಯ ನೆರವನ್ನು ನೀಡಲಾಗುವುದು ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುವುದರ ಉದ್ದೇಶದಿಂದ ಸಾಂಸ್ಕೃತಿಕ ಭವನಗಳನ್ನು ನಿರ್ಮಿಸುವುದು ಈ ಹಿನ್ನಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಜಿಲ್ಲಾ ರಂಗಮಂದಿರ, ಸಾಂಸ್ಕೃತಿಕ ಭವನಗಳನ್ನು ನಿರ್ಮಾಣ ಮಾಡಲಾಗುತ್ತಿವೆ. ಆದಿ ಕನ್ನಡ ಕವಿ ಪಂಪ ಹೇಳಿದಂತೆ "ಆರಂಕುಶ ವಿಟ್ಟೊಡೆಂ ನನೆಯುದೆನ್ನ ಮನಂ ಬನವಾಸಿ ದೇಶಮಂ" ಹೀಗೆ ಬನವಾಸಿ ಮತ್ತು ಕಾರವಾರ ರವೀಂದ್ರನಾಥ ಕಡಲ ತೀರದಲ್ಲಿ ಪ್ರತಿವರ್ಷ ಕರಾವಳಿ ಉತ್ಸವ ಮತ್ತು ಕದಂಬೋತ್ಸವವನ್ನು ನಡೆಸಿ ಉತ್ಸವದ ಸಂದರ್ಭದಲ್ಲಿ ಪಂಪ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಕಲಾವಿದರಿಗೆ ವಿಶೇಷ ಪ್ರೋತ್ಸಾಹ ನೀಡಿ ಕಲೆ ಪರಂಪರೆಯನ್ನು ಮುಂದುವರೆಸುವುದಕ್ಕಾಗಿ ಗುರು ಶಿಷ್ಯಪರಂಪರೆ ಯೋಜನೆಯ ಮೂಲಕ ವಿವಿಧ ಕಲಾಪ್ರಕಾರಗಳ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಿ ನುರಿತ ಹಿರಿಯ ಕಲಾವಿದರ ಮುಖಾಂತರ ತರಬೇತಿ ನೀಡಲಾಗುತ್ತಿದೆ.

ಸಾಮಾನ್ಯ ಯೋಜನೆಯಡಿಯಲ್ಲಿ ಸ್ಥಳಿಯ, ಸಾಂಸ್ಕೃತಿಕ ಸೌರಭ, ಯುವ ಸೌರಭ, ಚಿಗುರು, ಸುಗ್ಗಿ-ಹುಗ್ಗಿ ಉತ್ಸವ ಯೋಜನೆಗಳಗೆ ಬಿಡುಗಡೆಯಾದ 59,16,000/- ಅನುದಾನವನ್ನು ಬಳಸಿಕೊಂಡು 329 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2014-15ನೇ ಸಾಲಿನಲ್ಲಿ ಈ ಯೋಜನೆಗಳಗೆ ಬಿಡುಗಡೆಯಾದ 2,39,000/- ಅನುದಾನವನ್ನು ಬಳಸಿಕೊಂಡು 48 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2015-16ನೇ ಸಾಲಿನಲ್ಲಿ 23,22,000/- ಅನುದಾನವನ್ನು ಬಳಸಿಕೊಂಡು 88 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. ಅದೇ ರೀತಿ 2016-17ನೇ ಸಾಲಿನಲ್ಲಿ 27,00,000/- ಅನುದಾನವನ್ನು ಬಳಸಿಕೊಂಡು 96 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2017-18 ನೇ ಸಾಲಿನಲ್ಲಿ 32,00,000/- ಅನುದಾನವನ್ನು ಬಳಸಿಕೊಂಡು 186 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿದೆ.

2018–19ನೇ ಸಾಲಿನಲ್ಲಿ 33,66,000/–ಗಳ ಅನುದಾನವನ್ನು ಬಳಸಿಕೊಂಡು 190 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿದೆ.

ಪರಿಶಿಷ್ಠ ಜಾತಿಗೆ ಮೀಸಲಾದ ವಿಶೇಷ ಘಟಕ ಯೋಜನೆಯಡಿಯಲ್ಲಿ 2013–14ನೇ ಸಾಲಿನಲ್ಲಿ 24,18,000/– ಅನುದಾನವನ್ನು ಬಳಸಿಕೊಂಡು 89 ಕಾರ್ಯಕ್ರಮಗಳನ್ನು, 2014–15ನೇ ಸಾಲಿನಲ್ಲಿ 5,47,500/–ಅನುದಾನವನ್ನು ಬಳಸಿಕೊಂಡು 19 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2015–16ನೇ ಸಾಲಿನಲ್ಲಿ 10,00,000/– ಅನುದಾನವನ್ನು ಬಳಸಿಕೊಂಡು 29, 2016–17ನೇ ಸಾಲಿನಲ್ಲಿ 15,00,000/– ಅನುದಾನವನ್ನು ಬಳಸಿಕೊಂಡು 35 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2017–18 ನೇ ಸಾಲಿನಲ್ಲಿ 20,00,000/– ಅನುದಾನವನ್ನು ಬಳಸಿಕೊಂಡು 55 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2018–19ನೇ ಸಾಲಿನಲ್ಲಿ 18,50,000/–ಗಳ ಅನುದಾನವನ್ನು ಬಳಸಿಕೊಂಡು 76 ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಪರಿಶಿಷ್ಠ ಪಂಗಡಕ್ಕೆ ಮೀಸಲಾದ ಗಿರಿಜನ ಉಪಯೋಜನೆಯಡಿಯಲ್ಲಿ 2013–14ನೇ ಸಾಲಿನಲ್ಲಿ 11,39,000/– ಅನುದಾನವನ್ನು ಬಳಸಿಕೊಂಡು 46 ಕಾರ್ಯಕ್ರಮಗಳನ್ನು, 2014–15ನೇ ಸಾಲಿನಲ್ಲಿ 3,47,500/– ಅನುದಾನವನ್ನು ಬಳಸಿಕೊಂಡು 10 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2015–16ನೇ ಸಾಲಿನಲ್ಲಿ 8,00,000/– ಅನುದಾನವನ್ನು ಬಳಸಿಕೊಂಡು 29 ಹಾಗೂ 2016–17ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ 7,00,000/–ಅನುದಾನವನ್ನು ಬಳಸಿಕೊಂಡು 24 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2017–18 ನೇ ಸಾಲಿನಲ್ಲಿ 9,00,000/– ಅನುದಾನವನ್ನು ಬಳಸಿಕೊಂಡು 35 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. 2018–19ನೇ ಸಾಲಿನಲ್ಲಿ 8,00,000/–ಗಳ ಅನುದಾನವನ್ನು ಬಳಸಿಕೊಂಡು 36 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಏರ್ಪಡಿಸಲಾಗಿತ್ತು.

*****

ಮಾಹಿತಿ ಮೂಲ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

# ಆಯುಷ್ ಇಲಾಖೆ

**ಆಯುಷ್ ಇಲಾಖೆಯ ಮುಖ್ಯ ಉದ್ದೇಶ:**

ಆಯುಷ್ ಇಲಾಖೆಯ ಅಂಗಗಳಾದ ಆಯುರ್ವೇದ, ಯೋಗ ಹಾಗೂ ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಹಾಗೂ ಹೋಮಿಯೋಪಥಿ ಚಿಕಿತ್ಸಾ ಪದ್ಧತಿಗಳನ್ನು ಮುಖ್ಯವಾಹಿನಿಗೆ ತರುವುದು.

**ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳ ಸಂಕ್ಷಿಪ್ತ ವಿವರ**

| ಕ್ರ.ಸಂ. | ಪದ್ಧತಿ | ಆಸ್ಪತ್ರೆಗಳು | ಚಿಕಿತ್ಸಾಲಯಗಳು |
|---|---|---|---|
| 1. | ಆಯುರ್ವೇದ | 4 | 11 |

ಆಯುಷ್ ಎಂದರೆ ಆಯುರ್ವೇದ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಯುನಾನಿ ಸಿದ್ಧ ಮತು ಹೋಮಿಯೋಪತಿ ಚಿಕಿತ್ಸಾ ಪದ್ದತಿಗಳ ಮುಖಾಂತರ ಜೀವನಾರೋಗ್ಯ ಕಾಪಾಡುವುದು. ರೋಗ ಪ್ರತಿಭಂಧನಾಪಾಯಗಳನ್ನು ಜನರಿಗೆ ತಿಳಿಸುವುದು. ಆಯುಷ್ ಪದ್ದತಿಗಳನ್ನು ಸಾರ್ವಜನಿಕವಾಗಿ ಜನಪ್ರಿಯಗೊಳಿಸುವುದು. ಔಷಧಿ ಗಿಡಗಳ ಮೂಲಕ ಸೊಳ್ಳೆ ನಿಯಂತ್ರಣ ರಾಜ್ಯದ ಹಲವೆಡೆ ಮಲೇರಿಯಾ, ಡೆಂಗ್ಯೂ ಚಿಕಿನ್‌ಗುನ್ಯಾದಂತಹ ಸಾಂಕ್ರಾಮಿಕ ರೊಗಗಳು ಹರಡುತ್ತಿದೆ. ಇವುಗಳ ನಿಯಂತ್ರಣಕ್ಕೂ ರಾಸಾಯನಕ ಬಳಸಿದರೂ ಇವುಗಳ ಅಭಿವೃದ್ಧಿ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಸೊಳ್ಳೆ ನಿಯಂತ್ರಿಸುವ ಶಕ್ತಿಯುಳ್ಳ ಹಲವಾರು ಔಷಧಿಗಿಡಗಳು ಲಭ್ಯವಿದ್ದು ಇಂತಹ ಔಷಧಿ ಸಸ್ಯಗಳನ್ನು ಅಭಿವೃದ್ದಿಪಡಿಸುವುದರಿಂದ ಸೊಳ್ಳೆಗಳನ್ನು ನಿಯಂತ್ರಿಸಬಹುದಲ್ಲದೇ ರೋಗಗಳನ್ನೂ ತಡೆಗಟ್ಟಬಹುದಾಗಿದೆ.

ಪ್ರಾಚೀನ ಪದ್ದತಿಗಳಿಂದಾದ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಪದ್ಧತಿಯಿಂದ ಕಡಿಮೆ ಖರ್ಚಿನಲ್ಲಿ ಔಷಧಗಳಿಲ್ಲದ ಅತೀ ಹಿಂದುಳಿದ ಪ್ರದೇಶಗಳಲ್ಲಿ ಚಿಕಿತ್ಸೆಯನ್ನು ನೀಡಬಹುದಾಗಿದೆ. ಜಿಲ್ಲಾ ಮಟ್ಟದಲ್ಲಿ ತಾಲೂಕಾ ಮಟ್ಟದಲ್ಲಿ ಆಯುಷ್ ಸೆಮಿನಾರ ಮತ್ತು ವರ್ಕ್‌ಶಾಪ ಮಾಡುವುದರ ಮೂಲಕ ಆಯುಷ್ ಪದ್ಧತಿಯ ವಿಶೇಷ ಚಿಕಿತ್ಸೆಗಳ ಬಗ್ಗೆ ಅರಿವು ಮೂಡಿಸುವುದು ಪಂಚಕರ್ಮ. ಕ್ಷಾರಸೂತ್ರ, ರೆಜಿಮೆಂಟಲ್ ಥೆರಪಿಯ. ಉಪಯುಕ್ತತೆಯ ಬಗ್ಗೆ ತಿಳಿಸಿ ದೈನಂದಿನ ಚಿಕಿತ್ಸೆಯಲ್ಲಿ ಅಳವಡಿಸುವುದು.

ಮನೆಮದ್ದು ಸ್ವಸ್ಥ ವೃತ್ತ ಮತ್ತು ಆಯುಷ್ ಅರಿವು ಕಾರ್ಯಕ್ರಮದಿಂದ ಜನರನ್ನು ಪ್ರಾಥಮಿಕ ಆರೋಗ್ಯ ರಕ್ಷಣೆ ಮಾಡಿಕೊಳ್ಳುವಲ್ಲಿ ಸ್ವಾವಲಂಬಿಗಳಾಗಿಸುವುದು ಆಯುಷ್ ಪದ್ಧತಿಯನ್ನು ಮನೆಮನೆಗೂ ತಲುಪಿಸುವುದು. ಸ್ಥಳೀಯವಾಗಿ ದೊರೆಯುವ ಔಷಧಿ ಸಸ್ಯಗಳು ಹಾಗೂ ಅಡುಗೆ ಮನೆಯಲ್ಲಿ ದೊರೆಯುವ ಪದಾರ್ಥಗಳನ್ನು ಬಳಸಿ ಪ್ರಾಥಮಿಕ ರಕ್ಷಣೆ ವಿಧಾನ ತಿಳಿಸುವುದು. ನೆಗಡಿ, ಕೆಮ್ಮಿನಂತಹ ಸಾಮಾನ್ಯ ಕಾಯಿಲೆಗಳನ್ನು ಹಾಗೂ ಚರ್ಮರೋಗ, ವಾತರೋಗ, ಸ್ತ್ರೀಯರ ಸಮಸ್ಯೆಗಳು ಕೆಮ್ಮು, ದಮ್ಮು, ಕುಂಠಿತ ಬೆಳವಣಿಗೆಯ ಮಕ್ಕಳು ಇತ್ಯಾದಿ ದೀರ್ಘಕಾಲೀನ ರೋಗಗಳಲ್ಲಿ ಪರಿಣಾಮಕಾರಿ ಚಿಕಿತ್ಸೆ ನೀಡುವುದು.

ದಿನಚರ್ಯ, ಋತುಚರ್ಯ, ಯೋಗ, ಪ್ರಾಣಾಯಾಮ, ಆರೋಗ್ಯಕರ ಹಾಗೂ ಸುರಕ್ಷಿತ ಜೀವನ ಕ್ರಮಗಳ ಅರಿವು ಮೂಡಿಸಿ ರಕ್ತದೊತ್ತಡ, ಮಧುಮೇಹ, ಮಾನಸಿಕ ಒತ್ತಡ, ದೌರ್ಬಲ್ಯ, ಖಿನ್ನತೆ ಇತ್ಯಾದಿ ಆಧುನಿಕ ರೋಗಗಳು ಬಾರದಂತೆ ತಡೆಯುವ ಮುಂಜಾಗರೂಕತಾ ಕಾರ್ಯಕ್ರಮ ಅಳವಡಿಕೆಗೆ ಮತ್ತು ರೋಗನಿರೋಧಕ ಶಕ್ತಿ ಬೆಳೆಸಿಕೊಳ್ಳುವುದಕ್ಕೆ ಆದ್ಯತೆ ನೀಡುವುದು.

ಔಷಧಿ ಸಸ್ಯಗಳ ಉಪಯುಕ್ತತೆ ಜನರಿಗೆ ಮನದಟ್ಟು ಮಾಡಿ ಅವುಗಳನ್ನು ಸ್ವಂತ ಬೆಳೆಸಲು ಉತ್ತೇಜಿಸುವುದು ಮತ್ತು ಕಂಪನಿ ಔಷಧಿಗಳಲ್ಲಿ ಅನಾವಶ್ಯಕ ರಾಸಾಯನಿಕಗಳ ಕಲಬೆರೆಕೆಯಿಂದಾಗುವ ಅಡ್ಡಪರಿಣಾಮಗಳ ಹಾಗೂ ಅದರಿಂದಾಗುವ ಅನಾಹುತಗಳನ್ನು ತಪ್ಪಿಸುವಲ್ಲಿ ಸಫಲತೆ ಹೊಂದುವುದು.

ಕಛೇರಿಯಿಂದ ಆಯುಷ್ ಇಲಾಖೆಯ ಎಲ್ಲಾ ಆಸ್ಪತ್ರೆಗಳು ಹಾಗೂ ಚಿಕಿತ್ಸಾಲಯಗಳಲ್ಲಿನ ರೋಗಿಗಳ ಪ್ರತಿವರ್ಷ ಚಿಕಿತ್ಸೆ ಪಡೆದ ಒಳ/ಹೊರರೋಗಿಗಳ ಅಂಕಿಅಂಶಗಳ ಸರ್ಕಾರಕ್ಕೆ ಒದಗಿಸುವುದು.

**2018-19 ನೇ ವರ್ಷದ ಸಾಧನೆ :**

ಜಿಲ್ಲಾ ಆಯುಷ್ ಕಛೇರಿ ಕಾರವಾರ ಇಲ್ಲಿಯ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆ ಕಾರವಾರ, ಶಿರಸಿ, ಕುಮಟಾ ಮತ್ತು ಮುಂಡಗೋಡ 4 ಆಸ್ಪತ್ರೆಗಳಲ್ಲಿ 2018-19 ನೇ ಸಾಲಿನ ವಾರ್ಷಿಕ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ 74124, ಒಳರೋಗಿಗಳ ಸಂಖ್ಯೆ 639 ಹಾಗೂ 11 ಚಿಕಿತ್ಸಾಲಯಗಳಲ್ಲಿ ಹೊರರೋಗಿಗಳ ಸಂಖ್ಯೆ 32312 ಇರುತ್ತದೆ.

ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆ ಕಾರವಾರ. ಸರ್ಕಾರಿ ಆಯುರ್ವೇದ ಆಸ್ಪತ್ರೆ ಕುಮಟಾ ಮತ್ತು ಸರ್ಕಾರಿ ಆಯುರ್ವೇದ ಆಸ್ಪತ್ರೆ ಶಿರಸಿ ಮತ್ತು ಸರಕಾರಿ ಆಯುರ್ವೇದ ಆಸ್ಪತ್ರೆ ಮುಂಡಗೋಡ. ಇಲ್ಲಿ ಪಂಚಕರ್ಮ ಚಿಕಿತ್ಸೆಯ ಸೌಲಭ್ಯವಿದ್ದು ಹಲವಾರು ರೋಗಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಈ ನಾಲ್ಕು ಕೇಂದ್ರ ಪುರಸ್ಕೃತ ಮೇಲ್ದರ್ಜೆಗೇರಿಸಲಾದ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ತಜ್ಞವೈದ್ಯರು ಮತ್ತು ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ.

ಇಂದಿನ ಆಧುನಿಕ ಯುಗದಲ್ಲಿ ಪ್ರತಿಯೊಂದು ಸಣ್ಣಪುಟ್ಟ ಸಮಸ್ಯೆಗಳಿಗೂ ಅಗತ್ಯಕ್ಕೂ ಹೆಚ್ಚಾಗಿ ಔಷಧಿಗಳನ್ನು ಸೇವಿಸುವದರಿಂದ ಆಗುವ ದುಷ್ಪರಿಣಾಮಗಳ ಬಗೆ ಅರಿವು ಮೂಡಿಸುವುದು. ಆಹಾರದಲ್ಲಿನ ಪಥ್ಯ ಮನೆಯಲ್ಲಿಯೇ ಸುಲಭವಾಗಿ ದೊರಕುವ ವಸ್ತುಗಳಿಂದ ತಯಾರಿಸಬಹುದಾದ ಮನೆಮದ್ದುಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು ಯೋಗ ಶಿಕ್ಷಣದ ಮೂಲಕ, ರಕ್ತದೊತ್ತಡ ಮಧುಮೇಹ ಮುಂತಾದ ಕಾಯಿಲೆಗಳಿಗೆ ಚಿಕಿತ್ಸೆ ನೀಡುವುದು.

2018-19 ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದವರಿಗೆ 20 ಉಚಿತ ಆಯುಷ್ ಆರೋಗ್ಯ ಶಿಬಿರಗಳನ್ನು, 18 ಮನೆಮದ್ದು ಕಾರ್ಯಕ್ರಮಗಳನ್ನು ಹಾಗೂ ತಾಲೂಕ ಮಟ್ಟದ 04 ಸೆಮಿನಾರಗಳನ್ನು ಹಾಗೂ ಜಿಲ್ಲಾ ಮಟ್ಟದ 02 ಸೆಮಿನಾರ್‌ಗಳನ್ನು ನಡೆಸಲಾಗಿದೆ.

ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ದಿನಾಂಕ 20-06-2018 ರಂದು ಹಮ್ಮಿಕೊಂಡಿದ್ದ ಯೋಗ ಮ್ಯಾರಥಾನ (ಯೋಗ ನಡಿಗೆ) ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಗಣ್ಯರಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ॥ ಅಶೋಕಕುಮಾರ ಹಾಗೂ ರೋಟರಿ ಸಂಸ್ಥೆಯವರು ನರ್ಸಿಂಗ್ ವಿದ್ಯಾರ್ಥಿಗಳು, ನಾಗರಿಕರು ಮತ್ತು ಆಯುಷ್ ಇಲಾಖೆಯ ಎಲ್ಲಾ ಆಯುಷ್ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದರು.

ದಿನಾಂಕ 21-06-2018 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಕಾರವಾರದಲ್ಲಿ ಮಾನ್ಯ ಶಾಸಕರು ಶ್ರೀಮತಿ ರೂಪಾಲಿ ನಾಯ್ಕ ಹಾಗೂ ಇತರ ಗಣ್ಯರ ಉಪಸ್ಥಿತಿಯಲ್ಲಿ ಉದ್ಘಾಟನೆ ಮಾಡುವದರೊಂದಿಗೆ, ಯೋಗ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸುಮಾರು 350 ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವದರೊಂದಿಗೆ ಅಂತರಾಷ್ಟ್ರೀಯ ಯೋಗ ಕಾರ್ಯಕ್ರಮವನ್ನು ಡಾ॥ ಎ..ಜೆ ಪ್ರಕಾಶ ಯೋಗ ವೈದ್ಯರು ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಕಾರವಾರ ಇವರ ಮಾರ್ಗದರ್ಶನದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು.

ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ದಿನಾಂಕ 05-11-2018 ರಂದು "ಸ್ವಾಸ್ಥ ರಕ್ಷಣೆಯಲ್ಲಿ ಆಯುಷ್ ಪಾತ್ರ" ಎಂಬ ಘೊಷವಾಕ್ಯದೊಂದಿಗೆ ಜಿಲ್ಲಾ ಸರಕಾರಿ ಆಯುರ್ವೇದ ಆಸ್ಪತ್ರೆ, ಕಾರವಾರ ಇಲ್ಲಿ ನಡೆಸಲಾಯಿತು. ಆಯುಷ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಿ 200ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ಔಷಧಿ ಸಸ್ಯಗಳ ಪರಿಚಯ, ಸುಲಭ ಚಿಕಿತ್ಸಾ ವಿಧಾನಗಳ ಪ್ರಾತ್ಯಕ್ಷಿಕತೆ ಹಾಗೂ ಉಚಿತ ಚಿಕಿತ್ಸೆಗಳನ್ನು ನೀಡಲಾಯಿತು.

## ಉತ್ತರ ಕನ್ನಡ ಜಿಲ್ಲೆಯ ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ಸಿಬ್ಬಂದಿಗಳ ವಿವರಗಳು ಈ ಕೆಳಗಿನಂತಿದೆ.

**31–03–2019 ರಲ್ಲಿದ್ದಂತೆ**

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂ. | ಭರ್ತಿಯಾದ ಹುದ್ದೆಗಳ ಸಂ. | ಖಾಲಿ ಹುದ್ದೆಗಳ ಸಂ. |
|---|---|---|---|---|
| 1 | ಜಿಲ್ಲಾ ಆಯುಷ್ ಅಧಿಕಾರಿ | 1 | 0 | 1 ಪ್ರಭಾರಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 2 | ಸಹಾಯಕ ಆಡಳಿತಾಧಿಕಾರಿಗಳು | 1 | 0 | 1 |
| 3 | ಕಛೇರಿ ಅಧೀಕ್ಷಕರು | 1 | 0 | 1 |
| 4 | ಹಿರಿಯ ವೈದ್ಯಾಧಿಕಾರಿ | 3 | 1 | 2 |
| 5 | ವೈದ್ಯಾಧಿಕಾರಿ | 15 | 13 | 2 |
| 6 | ಶುಶ್ರೂಷಕಿ | 4 | 1 | 3 |
| 7 | ಪ್ರ.ದ.ಸ | 3 | 2 | 1 |
| 8 | ದ್ವಿ.ದ.ಸ | 2 | 1 | 1 |
| 9 | ಔಷಧಿ ವಿತರಕರು | 14 | 1 | 13 |
| | ಕಿ.ಮ.ಆ.ಸಹಾಯಕಿ | 10 | 1 | 09 |
| | ಗ್ರೂಪ "ಡಿ" | 24 | 6 | 18 |
| | **ಒಟ್ಟೂ** | **78** | **26** | **52** |

## ಉತ್ತರಕನ್ನಡ ಜಿಲ್ಲೆಯ ಆಯುಷ್ ಇಲಾಖೆಯಲ್ಲಿ ಕೇಂದ್ರ ಪುರಷ್ಕೃತ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕವಾದ ತಜ್ಞವೈದ್ಯರು ಮತ್ತು ಸಿಬ್ಬಂದಿಗಳ ವಿವರ

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂ. | ಭರ್ತಿಯಾದ ಹುದ್ದೆಗಳ ಸಂ. | ಖಾಲಿ ಹುದ್ದೆಗಳ ಸಂ. |
|---|---|---|---|---|
| 1 | ತಜ್ಞ ವೈದ್ಯರು | 8 | 7 | 1 |
| 2 | ಔಷಧಿ ವಿತರಕರು | 8 | 5 | 3 |
| 3 | ಮಸಾಜಿಸ್ಟ್ | 8 | 7 | 1 |
| 4 | ಕ್ಷಾರಸೂತ್ರ | 4 | 4 | 0 |
| 5 | ಸ್ತ್ರೀ ರೋಗ | 4 | 4 | 0 |

# N.H.M. ಯೋಜನೆಯಡಿಯಲ್ಲಿ ನೇಮಕವಾದ ಸಿಬ್ಬಂದಿಗಳ ವಿವರ

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂ. | ಭರ್ತಿಯಾದ ಹುದ್ದೆಗಳ ಸಂ. | ಖಾಲಿ ಹುದ್ದೆಗಳ ಸಂ. |
|---|---|---|---|---|
| 1 | ಕಂಪ್ಯೂಟರ್ ಆಪರೇಟರ್ | 1 | 1 | 0 |
| 2 | ಸ್ವಚ್ಛತಾ ಕೆಲಸಗಾರರು | 8 | 8 | 0 |

## ಜಿಲ್ಲಾ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಆಯುಷ್ ವೈದ್ಯರುಗಳು ಮತ್ತು ಸಿಬ್ಬಂದಿಗಳ ವಿವರ

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂ. | ಭರ್ತಿಯಾದ ಹುದ್ದೆಗಳ ಸಂ. | ಖಾಲಿ ಹುದ್ದೆಗಳ ಸಂ. |
|---|---|---|---|---|
| 1 | ವೈದ್ಯರು, ಆಯುಷ್ ವಿಭಾಗ, ಜಿಲ್ಲಾ ಆಸ್ಪತ್ರೆ ಕಾರವಾರ | ಹೋಮಿಯೋಪತಿ – 1<br>ಯುನಾನಿ – 1<br>ಪ್ರಕೃತಿ ಚಿಕಿತ್ಸೆ & ಯೋಗ – 1 | 3 | 0 |
| 2 | ಸಿಬ್ಬಂದಿಗಳು (ಹೊರಗುತ್ತಿಗೆ) | 3 | 3 | 0 |

## ಆಯುಷ್ ಯುನಾನಿ ಘಟಕ – ಭಟ್ಕಳ

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂ. | ಭರ್ತಿಯಾದ ಹುದ್ದೆಗಳ ಸಂ. | ಖಾಲಿ ಹುದ್ದೆಗಳ ಸಂ. |
|---|---|---|---|---|
| 1 | ವೈದ್ಯಾಧಿಕಾರಿಗಳು | 01 | 01 ಪ್ರಭಾರ | 01 ಪ್ರಭಾರ |
| 2 | ಶುಶ್ರೂಷಕಿಯರು | 01 | – | 01 |
| 3 | ಔಷಧಿ ವಿತರಕರು | 01 | – | 01 |
| 4 | ಪ್ರಥಮ ದರ್ಜೆ ಸಹಾಯಕರು | 01 | 01 | – |
| 5 | ಪಂಚಕರ್ಮ ಥೆರಪಿಸ್ಟ್ | 01 | – | 01 |
| 6 | ಕೊಠಡಿ ಅನುಚರ / ಆಯಾ | 01 | – | 01 |

## ಆಯುಷ್ ಆಸ್ಪತ್ರೆ, ದಾಂಡೇಲಿ

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂ. | ಭರ್ತಿಯಾದ ಹುದ್ದೆಗಳ ಸಂ. | ಖಾಲಿ ಹುದ್ದೆಗಳ ಸಂ. |
|---|---|---|---|---|
| 1 | ವೈದ್ಯಾಧಿಕಾರಿಗಳು | ಆಯುರ್ವೇದ –1<br>ಹೋಮಿಯೋಪತಿ –1<br>ಯುನಾನಿ –1<br>ಪ್ರಕೃತಿ ಚಿಕಿತ್ಸೆ & ಯೋಗ –1 | – | 04 |
| 2 | ಶುಶ್ರೂಷಕಿಯರು | 02 | – | 02 |
| 3 | ಔಷಧಿ ವಿತರಕರು | 01 | – | 01 |
| 4 | ಪ್ರಥಮ ದರ್ಜೆ ಸಹಾಯಕರು | 01 | – | 01 |
| 5 | ಪಂಚಕರ್ಮ ಥೆರಪಿಸ್ಟ್ | ಪುರುಷ – 01<br>ಮಹಿಳೆ – 01 | – | ಪುರುಷ – 01<br>ಮಹಿಳೆ – 01 |
| 6 | ಕೊಠಡಿ ಅನುಚರ / ಆಯಾ | 02 | – | 02 |
| 7 | ಗ್ರೂಪ್ 'ಡಿ' | 02 | – | 02 |

ಆಸ್ಪತ್ರೆಯ ಕಟ್ಟಡ ಕಾಮಗಾರಿಯು ನಿರ್ಮಾಣ ಹಂತದಲ್ಲಿದೆ

ಜಿಲ್ಲೆಯ ಎಲ್ಲಾ ತಾಲೂಕಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಇಬ್ಬಿಬ್ಬರು ಆಯುಷ್ ವೈದ್ಯರು ಎನ್.ಎಚ್.ಎಮ್. ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

# ಮೂರನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

## ದಿನಾಂಕ : 05-11-2018

## "ಸಾರ್ವಜನಿಕ ಆರೋಗ್ಯದಲ್ಲಿ ಆಯುರ್ವೇದದ ಪಾತ್ರ"

## AYURVEDA FOR PUBLIC HEALTH

ಆಯುರ್ವೇದದ ಮೂಲ ಉದ್ದೇಶ 'ಆರೋಗ್ಯವಂತನ ಆರೋಗ್ಯ ಕಾಪಾಡುವುದು ಹಾಗೂ ರೋಗ ಬಂದಾಗ ಅದರ ನಿವಾರಣೋಪಾಯ' ಅದನ್ನೇ "ಸ್ವಸ್ಥಸ್ಯ ಸ್ವಾಸ್ಥ್ಯ ರಕ್ಷಣಂ, ವಿಕಾರ ಪ್ರಶಮನಂಚ ಎಂದಿರುತ್ತಾರೆ. ಈ ವ್ಯಾಖ್ಯೆಯನ್ನೇ ಮುಂದಿಟ್ಟುಕೊಂಡು 'ಸಾರ್ವಜನಕ ಆರೋಗ್ಯದಲ್ಲಿ ಆಯುರ್ವೇದ ಪಾತ್ರ' ಎಂಬ ವಿಷಯದ ಮೂಲಕ ಸಾರ್ವಜನಕರಿಗೆ ತಿಳುವಳಿಕೆ ನೀಡುವುದು 3 ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಉದ್ದೇಶ.

ಆಯುರ್ವೇದ ಎಂದರೆ ಆರೋಗ್ಯವಂತ ಜೀವನ ಶೈಲಿಯನ್ನು ಒಳಗೊಂಡ ದಿನಚರ್ಯ, ಋತುಚರ್ಯ, ಸದ್ವೃತ್ತಗಳನ್ನೊಳಗೊಂಡ ಸ್ವಸ್ಥವೃತ್ತದ ಅರ್ಥಪೂರ್ಣ ಸೂತ್ರಗಳಿವೆ. ಆಹಾರಕ್ಕೆ ಸಂಬಂಧಿಸಿದಂತೆ ಹಿತ್‌ಭುಕ್, ಮಿತ್‌ಭುಕ್, ಋತ್‌ಭೂಕ್ ಅರ್ಥಾತ್ ಆರೋಗ್ಯಕರ ಹಿತವಾದ ಆಹಾರ ಮಿತವಾಗಿ ಹಾಗೂ ಋತುವಿಗನುಸಾರ ***(Seasonal Food)*** ಸೇವಿಸಬೇಕು ಎಂದು ತಿಳಿಸಿರುತ್ತಾರೆ. ಶುದ್ಧ ನೀರು, ಸುರಕ್ಷಿತ ಆಹಾರ, ಶುದ್ಧ ಗಾಳಿ ಪ್ರತಿಯೊಂದು ಜೀವಿಗಳಿಗೂ ಜೀವನಾಧಾರ. ಆದರೆ ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನ, ನಗರೀಕರಣದ ಪ್ರಭಾವದಿಂದ ಆರೋಗ್ಯಕರ ನೀರು, ಗಾಳಿ ಹಾಗೂ ಆಹಾರ ಸಿಗುವುದು ಕಷ್ಟಸಾಧ್ಯವಾಗಿ ಜೀವನಶೈಲಿ ಆಧಾರಿತ ರೋಗಗಳಾದ ಮಧುಮೇಹ, ರಕ್ತದೊತ್ತಡ, ಹೃದ್ರೋಗ, ಸಂದಿವಾತ, ಅರ್ಬುದ, ಮನೋದೈಹಿಕ ಕಾಯಿಲೆಗಳು ಸಾಂಕ್ರಾಮಿಕ ರೋಗಗಳನ್ನು ಹಿಂದಿಕ್ಕಿವೆ. ನೀರು, ಗಾಳಿ, ಸುರಕ್ಷಿತ ಆಹಾರಗಳೇ ಇಂದು ಮನುಷ್ಯನ ದೇಹಕ್ಕೆ ರೋಗವಾಹಕಗಳಾಗಿ ಪರಿಣಮಿಸಿವೆ. ಇಂತಹ ದೀರ್ಘಕಾಲೀನ ರೋಗಗಳ ***(Chronic Epidemics)*** ವಿಚಾರ ಬಂದಾಗ ರೋಗಕ್ಕೆ ಚಿಕಿತ್ಸೆಗಿಂತ ರೋಗ ಬಾರದಂತೆ ತಡೆಯುವುದೇ ಹೆಚ್ಚು ಪ್ರಾಮುಖ್ಯ ವಿಷಯ.

**ಆಯುರ್ವೇದದಲ್ಲಿ ಅಷ್ಟಾಂಗ ಎಂಬ ಎಂಟು ವಿಧಗಳಿವೆ**

1. ಕಾಯ ಚಿಕಿತ್ಸೆ (general medicine) 2. ಬಾಲ ಚಿಕಿತ್ಸೆ (paediatrics). 3. ಗ್ರಹ ಚಿಕಿತ್ಸೆ (psychiatrics) 4. ಉರ್ಧ್ವಾಂಗ (ENT,eye and headache). 5 ಶಲ್ಯ (surgery) 6. ದಂಷ್ಟ್ರಾ (texicology) 7. ಜರಾ (geriatrics) 8. ವೃಷ (infertility & impotency)

ದೇಹದಲ್ಲಿರುವ ವಿಷಯುಕ್ತ ಮಲಿನತೆಯನ್ನು ಹೊರಹಾಕುವ ಪಂಚಕರ್ಮದ ವಮನ, ವಿರೇಚನ, ಬಸ್ತಿ, ನಸ್ಯ, ರಕ್ತಮೋಕ್ಷಣ ಎಂಬ ಚಿಕಿತ್ಸಾ ಕ್ರಮಗಳು ಹಾಗೂ ದೇಹದ ಜೀವಕೋಶಗಳನ್ನು ಸುಸ್ಥಿತಿಯಲ್ಲಿಟ್ಟು ರೋಗ ನಿರೋಧಕ ಶಕ್ತಿ ಬೆಳೆಸುವ ರಸಾಯನ ಔಷಧಿಗಳನ್ನು, ಆರೋಗ್ಯವಂತ ಮಗುವನ್ನು ಪಡೆಯಲು ಅಗತ್ಯವಾದ ಪುರುಷ ಹಾಗೂ ಸ್ತ್ರೀಯರಿಗೆ ಸಂಬಂಧಿಸಿದ ಉಪಾಯಗಳನ್ನು, ಗರ್ಭಿಣಿ ಹಾಗೂ ತಾಯಿ ಮಗುವಿನ ಆರೋಗ್ಯ ಕಾಪಾಡಲು ಬೇಕಾದ ಉಪಯುಕ್ತ ಮಾಹಿತಿಗಳನ್ನು ಆಯುರ್ವೇದ ಶಾಸ್ತ್ರ ಒಳಗೊಂಡಿದ್ದು ಇವುಗಳನ್ನು ಕುರಿತು ಜನರಿಗೆ ಅರಿವು ಮೂಡಿಸಿ **'ಸರ್ವೇಜನಾಃ ಸುಖಿನೋ ಭವಂತು, ಸರ್ವೇಸಂತು ನಿರಾಮಯಃ'** ಎಂಬಂತೆ ಆರೋಗ್ಯಭಾಗ್ಯ ನಮ್ಮದಾಗಿಸಿಕೊಳ್ಳುವುದೇ ಆರೋಗ್ಯ ದಿನಾಚರಣೆಯ ಧ್ಯೇಯ.

ದಿನಾಂಕ 05-11-2018 ರಂದು ಬೆಳಿಗ್ಗೆ 10.00 ರಿಂದ ಸಂಜೆ4.00 ರ ವರೆಗೆ ಸ್ಥಳ: ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆ ಕಾರವಾರ ಇಲ್ಲಿ ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ ಈ ಶಿಬಿರದಲ್ಲಿ ಜಿಲ್ಲೆಯ ಆಯುಷ್ ತಜ್ಞವೈದ್ಯರುಗಳು ಭಾಗವಹಿಸಲಿದ್ದಾರೆ

## 2018-19 ರ ಸಾಲಿಗೆ ಲೆಕ್ಕ ಶೀರ್ಷಿಕೆ 2210-02-101-1-05 ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲಾ ಆಯುಷ್ ಇಲಾಖೆಗೆ ಹಂಚಿಕೆಯಾದ ಐ.ಇ.ಸಿ ಯೋಜನಾ ಕಾರ್ಯಕ್ರಮಗಳ ವಿವರಗಳು

| | |
|---|---|
| ಆರೋಗ್ಯ ಶಿಬಿರಗಳು | ಸಾಮಾನ್ಯ - 01<br>ಎಸ್.ಸಿ.ಪಿ - 15<br>ಟಿ.ಎಸ್.ಪಿ - 04<br>ಒಟ್ಟೂ - 20 |
| ಮನೆಮದ್ದು ಕಾರ್ಯಕ್ರಮಗಳು | ಸಾಮಾನ್ಯ - 04<br>ಎಸ್.ಸಿ.ಪಿ - 10<br>ಟಿ.ಎಸ್.ಪಿ - 04<br>ಒಟ್ಟೂ - 18 |
| ಆಯುಷ್ ಸೆಮಿನಾರ (ತಾಲೂಕಾ ಮಟ್ಟ) | ಎಸ್.ಸಿ.ಪಿ - 03<br>ಟಿ.ಎಸ್.ಪಿ - 01<br>ಒಟ್ಟೂ - 04 |
| ಆಯುಷ್ ಸೆಮಿನಾರ (ಜಿಲ್ಲಾ ಮಟ್ಟ) | ಎಸ್.ಸಿ.ಪಿ - 01<br>ಟಿ.ಎಸ್.ಪಿ - 01<br>ಒಟ್ಟೂ - 02 |

## ಒಟ್ಟೂ ಕಾರ್ಯಕ್ರಮಗಳ ವಿವರ

| | ಮುಗಿದಿರುವುದು | ಬಾಕಿ ಇರುವುದು |
|---|---|---|
| ಒಟ್ಟೂ ಆರೋಗ್ಯ ಶಿಬಿರ = 20 | 20 | 0 |
| ಒಟ್ಟೂ ಮನೆಮದ್ದು = 18 | 18 | 0 |
| ಜಿಲ್ಲಾ ಮಟ್ಟದ ಆಯುಷ್ ಸೆಮಿನಾರ = 02 | 02 | 0 |
| ಒಟ್ಟೂ ತಾಲೂಕ ಮಟ್ಟದ ಸೆಮಿನಾರ = 04 | 04 | 0 |

## ಉತ್ತರ ಕನ್ನಡ ಜಿಲ್ಲೆಯಲ್ಲಿ 2018–19 ನೇ ಸಾಲಿನಲ್ಲಿ ಹಂಚಿಕೆ ಆದ ಐಯಿಸಿ ಕಾರ್ಯಕ್ರಮಗಳ ಆಸ್ಪತ್ರೆ/ ಚಿಕಿತ್ಸಾಲಯಗಳ ವಿವರಗಳು

| ಕ್ರ.ಸಂ | ಆಸ್ಪತ್ರೆ/ಚಿಕಿತ್ಸಾಲಯ ಹೆಸರು | | ಆರೋಗ್ಯ ಶಿಬಿರ | ಮನೆಮದ್ದು |
|---|---|---|---|---|
| | | | ಹಂಚಿಕೆ | ಹಂಚಿಕೆ |
| 01 | ಕಾರವಾರ | ಎಸ್.ಸಿ.ಪಿ | 01 | 02 |
| | | ಟಿ.ಎಸ್.ಪಿ | – | – |
| 02 | ಶಿರೆಸಿ | ಎಸ್.ಸಿ.ಪಿ | 01 | 01 |
| | | ಟಿ.ಎಸ್.ಪಿ | 01 | |
| 03 | ಕುಮಟಾ | ಎಸ್.ಸಿ.ಪಿ | 01 | 03 |
| | | ಟಿ.ಎಸ್.ಪಿ | – | – |
| 04 | ಮುಂಡಗೊಡ | ಸಾಮಾನ್ಯ | 01 | – |
| | | ಎಸ್.ಸಿ.ಪಿ | 01 | 02 |
| | | ಟಿ.ಎಸ್.ಪಿ | – | – |
| 05 | ಅಚವೆ | ಎಸ್.ಸಿ.ಪಿ | 01 | 01 |
| | | ಟಿ.ಎಸ್.ಪಿ | – | – |
| 06 | ಹಿರೇಬೈಲ್ | ಸಾಮಾನ್ಯ | – | 01 |
| | | ಎಸ್.ಸಿ.ಪಿ | 01 | – |
| | | ಟಿ.ಎಸ್.ಪಿ | – | –– |
| 07 | ಜಾಲಿ | ಎಸ್.ಸಿ.ಪಿ | 01 | – |
| | | ಟಿ.ಎಸ್.ಪಿ | – | 01 |
| 08 | ಭೈರುಂಬೆ | ಎಸ್.ಸಿ.ಪಿ | 01 | 0 |
| 09 | ಮತ್ತಿಘಟ್ಟಾ | ಸಾಮಾನ್ಯ | – | 1 |
| | | ಎಸ್.ಸಿ.ಪಿ | 01 | – |
| 10 | ಹೆಗ್ಗರಣೆ | ಸಾಮಾನ್ಯ | –– | 1 |
| | | ಎಸ್.ಸಿ.ಪಿ | 1 | – |
| 11 | ಉಮ್ಮಚಗಿ | ಟಿ.ಎಸ.ಪಿ | 1 | 01 |
| 12 | ಹಿತ್ಲಳ್ಳಿ | ಎಸ್.ಸಿ.ಪಿ | 1 | – |
| | | ಟಿ.ಎಸ್.ಪಿ | 1 | 1 |
| 13 | ಬಿ.ಕೆ.ಹಳ್ಳಿ | ಎಸ.ಸಿ.ಪಿ | 1 | – |
| | | ಟಿ.ಎಸ.ಪಿ | 01 | 1 |
| 14 | ಜಗಲಪೇಟೆ | ಎಸ್.ಸಿ.ಪಿ | 02 | – |
| 15 | ಅನಮೋಡ | ಸಾಮಾನ್ಯ | – | 1 |
| | | ಎಸ್.ಸಿ.ಪಿ | 1 | 1 |

ಎಲ್ಲಾ ಐ.ಇ.ಸಿ ಕಾರ್ಯಕ್ರಮಗಳು ಯಶಸ್ವಿಯಾಗಿ ಪೂರ್ಣಗೊಂಡಿರುತ್ತದೆ.

## ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಉತ್ತರ ಕನ್ನಡ ಜಿಲ್ಲೆ ಕಾರವಾರ
## ಎಪ್ರಿಲ್ 2018 ರಿಂದ ಮಾರ್ಚ 2019 ರ ವಾರ್ಷಿಕ ಖರ್ಚುವೆಚ್ಚದ ಪ್ರಗತಿ ವರದಿ

ಜಿಲ್ಲೆ : ಉತ್ತರ ಕನ್ನಡ ರೂ. ಲಕ್ಷಗಳಲ್ಲಿ

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಕೇಂದ್ರ ಆಯುಕ್ತಾಲಯದಿಂದ ಬಿಡುಗಡೆಯಾದ ಅನುದಾನ | | ಜಿಲ್ಲಾ ಪಂಚಾಯತದಿಂದ ಬಿಡುಗಡೆಯಾದ ಅನುಪಾತ | | ಎಪ್ರಿಲ್ 2018 ರಿಂದ ಫೆಬ್ರವರಿ 2019 ರವರೆಗಿನ ಖರ್ಚು | | ಮಾರ್ಚ–2019 ತಿಂಗಳ ಖರ್ಚು | | ಒಟ್ಟೂ | | ಉಳಿಕೆ | |
|---|---|---|---|---|---|---|---|---|---|---|---|---|---|
| | | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ |
| 1. | 2210–00–101–0–29 (ಯೋಜನೇತರ) | 174.00 | 10.30 | 217.00 | 10.30 | 163.88 | 4.53 | 21.01 | 2.49 | 184.89 | 7.02 | 32.11 | 3.28 |
| 2. | 2210–00–101–0–35 (ಯೋಜನೇತರ) | 41.00 | 10.30 | 51.00 | 10.30 | 46.51 | 1.53 | 2.45 | 7.07 | 48.96 | 8.69 | 2.04 | 1.61 |
| 3. | 2210–00–101–0–37 ಔಷಧಿ & ರಾಸಾಯನಿಕ ಯೋಜನೇತರ | | 17.17 | | 17.17 | | | | 17.12 | | 17.12 | | 0.05 |
| 4. | 2210–00–105–0–38 (ಕಟ್ಟಡ) | | 25.00 | | 25.00 | | | | 25.00 | | 25.00 | | 0.00 |

## ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಉತ್ತರ ಕನ್ನಡ ಜಿಲ್ಲೆ ಕಾರವಾರ ಎಪ್ರಿಲ್ 2018 ರಿಂದ ಮಾರ್ಚ –2019 ರ ವಾರ್ಷಿಕ ವೇತನ ಹಾಗೂ ವೇತನೇತರ ಖರ್ಚುವೆಚ್ಚ ವರದಿ

| ಕ್ರ ಸಂ. | ಲೆಕ್ಕ ಶೀರ್ಷಿಕೆ | ಲಿಂಕ್ ಡಾಕ್ಯೂಮೆಂಟನಲ್ಲಿ ನಿಗದಿಪಡಿಸಿದ ಅನುದಾನ | | ಜಿಲ್ಲಾ ಪಂಚಾಯತದಿಂದ ಬಿಡುಗಡೆಯಾದ ಅನುಪಾತ | | ಎಪ್ರಿಲ್ – 2018 ರಿಂದ ಪೆಬ್ರವರಿ– 2019 ವರೆಗಿನ ಖರ್ಚು | | ಮಾರ್ಚ– 2019ತಿಂಗಳ ಖರ್ಚು | | ಒಟ್ಟೂ | | ಪ್ರಗತಿ ಶೇಕಡಾವಾರು |
|---|---|---|---|---|---|---|---|---|---|---|---|---|
| | | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | |
| 1 | 2210–00–101–0–29 (ಯೋಜನೇತರ) | 174.00 | 10.30 | 217.00 | 10.30 | 163.88 | 4.53 | 21.01 | 2.49 | 184.89 | 7.02 | 84.43% |
| 2 | 2210–00–101–0–35 (ಯೋಜನೇತರ) | 41.00 | 10.30 | 51.00 | 10.30 | 46.51 | 1.53 | 2.45 | 7.07 | 48.96 | 8.69 | 94.04% |
| 3 | **ಒಟ್ಟು** | **215.00** | **20.60** | **268.00** | **20.60** | **210.39** | **6.06** | **23.46** | **9.56** | **233.85** | **15.71** | |

## ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಉತ್ತರ ಕನ್ನಡ ಜಿಲ್ಲೆ ಕಾರವಾರ ಎಪ್ರಿಲ್ 2018 ರಿಂದ ಮಾರ್ಚ –2019 ರ ವಾರ್ಷಿಕ ಕಟ್ಟಡ ಕಾಮಗಾರಿಯ ಖರ್ಚುವೆಚ್ಚದ ವರದಿ

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿದ ಅನುದಾನ | | ಜಿಲ್ಲಾ ಪಂಚಾಯತದಿಂದ ಬಿಡುಗಡೆಯಾದ ಅನುಪಾತ | | ಎಪ್ರಿಲ್ – 2018 ರಿಂದ ಪೆಬ್ರವರಿ–2019 ವರೆಗಿನ ಖರ್ಚು | | ಮಾರ್ಚ–2019 ತಿಂಗಳ ಖರ್ಚು | | ಒಟ್ಟೂ | | ಪ್ರಗತಿ ಶೇಕಡಾವಾರು |
|---|---|---|---|---|---|---|---|---|---|---|---|---|
| | | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | |
| 1 | 2210–00–105–0–38 (ಕಟ್ಟಡ) | | 25.00 | | 25.00 | | | | 25.00 | | 25.00 | 99.92% |

## ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಉತ್ತರ ಕನ್ನಡ ಜಿಲ್ಲೆ ಕಾರವಾರ ಎಪ್ರಿಲ್ 2018 ರಿಂದ ಮಾರ್ಚ –2019 ರ ವಾರ್ಷಿಕ ಔಷಧಿ ರಾಸಾಯನಿಕ ಖರ್ಚು–ವೆಚ್ಚದ ವರದಿ

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿದ ಅನುದಾನ | | ಜಿಲ್ಲಾ ಪಂಚಾಯತದಿಂದ ಬಿಡುಗಡೆಯಾದ ಅನುದಾನ | | ಎಪ್ರಿಲ್ – 2018 ರಿಂದ ಪೆಬ್ರವರಿ–2019 ವರೆಗಿನ ಖರ್ಚು | | ಮಾರ್ಚ–2019 ತಿಂಗಳ ಖರ್ಚು | | ಒಟ್ಟೂ | | ಪ್ರಗತಿ ಶೇಕಡಾವಾರು |
|---|---|---|---|---|---|---|---|---|---|---|---|---|
| | | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | ವೇತನ ಲಕ್ಷ ರೂ.ಗಳಲ್ಲಿ | ವೇತನೇತರ ಲಕ್ಷ ರೂ.ಗಳಲ್ಲಿ | |
| 1 | **2210–00–101–0–37 (ಔಷಧಿ ರಾಸಾಯನಕ) ಯೋಜನೇತರ** | | 17.17 | | 17.17 | | | | 17.12 | | 17.12 | 99% |

# 2018–19 ನೇ ಸಾಲಿನ ಉತ್ತರ ಕನ್ನಡ ಜಿಲ್ಲೆಯ ಆಯುಷ್ ಇಲಾಖೆಯ ಕಟ್ಟಡ ಕಾಮಗಾರಿಯ ವರದಿ

**2018–19 ನೇ ಸಾಲಿನ ಕಟ್ಟಡ ಕಾಮಗಾರಿಯ ವಿವರ** **ಲೆಕ್ಕ ಶೀರ್ಷಿಕೆ: 2210–00–105–0–38(ಕಟ್ಟಡ)**

| ಕ್ರ. ಸಂ. | ಕಾಮಗಾರಿಯ ವಿವರ | ತಾಲೂಕ | 2018–19 ನೇ ಸಾಲಿನ ಲಿಂಕ್ ಡ್ಯಾಕ್ಯೂಮೆಂಟನಲ್ಲಿ ಬಿಡುಗಡೆಯಾದ ಅನುದಾನ | ಅಂದಾಜು ವೆಚ್ಚ (ರೂ ಲಕ್ಷಗಳಲ್ಲಿ) | 2018–19 ನೇ ಸಾಲಿಗೆ ಹಂಚಿಕೆ ಮಾಡಿದ ಅನುದಾನ | 2018–19 ನೇ ಸಾಲಿಗೆ ಖರ್ಚಾದ ವೆಚ್ಚ | ಪ್ರಗತಿ ಶೇಕಡಾವಾರು | ಅನುಷ್ಠಾನಾಧಿಕಾರಿಗಳು |
|---|---|---|---|---|---|---|---|---|
| 1 | ಸರ್ಕಾರಿ ಆಯುರ್ವೇದ ಆಸ್ಪತ್ರೆ ಕುಮಟಾ ಇಲ್ಲಿಗೆ ಯೋಗ ಹಾಲ ಕಟ್ಟಡ ನಿರ್ಮಾಣ ಮುಂದುವರೆದ ಕಾಮಗಾರಿ | ಕುಮಟಾ | 25.00 | 10.00 | 10.00 | 10.00 | 99.92% | ಪಿ.ಆರ್.ಇ ಕುಮಟಾ |
| 2 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಬೈರುಂಬೆ ಹೊಸ ಕಟ್ಟಡ ಮುಂದುವರೆದ ಕಾಮಗಾರಿ | ಶಿರಸಿ | | 30.00 | 15.00 | 14.98 | | ಪಿ.ಆರ್.ಇ ಶಿರಸಿ |

## Department of Ayush

## Statement Showing The Detpails of Budget Estimates 2018-19 Expenditure Incurred Upto 31-03-2019 and Savings To be Surrendered

*****

| Sl. No | Head of Account | Budget Estimates 2018-19 | Supplimentary Estima 2018-19 (1st, 2nd & 3r instalments) sanction re-appropriation |
|---|---|---|---|
| 1 | 2 | 3 | 4 |
| 1 | **2210-02-101-2-05** | 967800 | nil |
| 2 | 2210-02-101-2-04 | 150000 | nil |
| 3 | 2210-05-200-0-11 | 1200000 | nil |
| 4 | **2210-00-101-0-29** | **22700000** | nil |
| 5 | 2210-00-101-0-35 | 6130000 | nil |
| 6 | 2210-00-101-0-37 | 1717000 | nil |

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

2018–19 (2019–20) ನೇ ಸಾಲಿಗೆ ಆಯವ್ಯಯ ಭಾಷಣ :

## ಸಮಗ್ರ ಶಿಶು ಅಭಿವೃದ್ಧಿ ಯೋಜನೆ-22–11–00–102–0–22 :

ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಜಿಲ್ಲಾವಲಯದ ಯೋಜನೆಯಾಗಿದ್ದು, ಜಿಲ್ಲೆಯಲ್ಲಿ ಈ ಯೋಜನೆಯನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರೊಂದಿಗೆ ಸಹಾಯಕ ನಿರ್ದೇಶಕರು, ನಿರೂಪಣಾಧಿಕಾರಿಗಳ ಜೊತೆಯಲ್ಲಿ ಸಿಬ್ಬಂದಿಗಳು ಈ ಯೋಜನೆಯ ಅನುಷ್ಠಾನವನ್ನು ಜಿಲ್ಲಾ ಮಟ್ಟದಲ್ಲಿ ಮಾಡುತ್ತಿದ್ದಾರೆ. ತಾಲೂಕಾ ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಈ ಯೋಜನೆಯನ್ನು ಅನುಷ್ಠಾನವನ್ನು ಮಾಡುತ್ತಿದ್ದಾರೆ.

ಈ ಯೋಜನೆಯ ಮುಖ್ಯ ಉದ್ದೇಶವೇನೆಂದರೆ ಶಿಶು ಮರಣ, ಮಕ್ಕಳ ಮರಣವನ್ನು ತಪ್ಪಿಸುವುದು, ಗರ್ಭಿಣಿ–ತಾಯಂದಿರ ಮರಣವನ್ನು ತಡೆಗಟ್ಟುವುದು ಹಾಗೂ 06 ವರ್ಷದೊಳಗಿನ ಮಕ್ಕಳು, ಗರ್ಭಿಣಿ ಬಾಣಂತಿಯರು ಹಾಗೂ ಪ್ರಾಯ ಪೂರ್ವ ಬಾಲಕಿಯರ ಪೌಷ್ಟಿಕ ಮಟ್ಟ ಹೆಚ್ಚಿಸುವುದರಿಂದ ಅಪೌಷ್ಟಿಕ ಮಟ್ಟವನ್ನು ಕಡಿಮೆಗೊಳಿಸುವುದು ಆಗಿರುತ್ತದೆ. ಜೊತೆಯಲ್ಲಿ ಮಹಿಳೆಯರ ಮತ್ತು ಮಕ್ಕಳಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಇಲಾಖೆಯು ಅನುಷ್ಠಾನ ಮಾಡುತ್ತಿದೆ.

## ಪೂರಕ ಪೌಷ್ಟಿಕ ಆಹಾರ :

ಪ್ರತಿಯೊಬ್ಬ 06 ವರ್ಷದೊಳಗಿನ ಮಕ್ಕಳಿಗೆ ಗರ್ಭಿಣಿ/ ಬಾಣಂತಿಯರಿಗೆ ವಾರ್ಷಿಕವಾಗಿ 300 ದಿನಗಳ ಕಾಲ ಪೌಷ್ಠಿಕ ಆಹಾರ ನೀಡುವ ಗುರಿ ಹೊಂದಿದ್ದು ಮಕ್ಕಳಿಗೆ ಪ್ರತಿದಿನ ರೂ. 8, ಗರ್ಭಿಣಿ/ಬಾಣಂತಿಯರಿಗೆ ರೂ. 21 ಮೌಲ್ಯದ, ಹಾಗೂ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಪ್ರತಿನಿತ್ಯ ರೂ. 9 ನಷ್ಟು ಮೌಲ್ಯದ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. ಇದರಲ್ಲಿ ಪ್ರತಿನಿತ್ಯ 200 ಎಮ್. ಎಲ್ ಹಾಲು ಹಾಗೂ ವಾರಕ್ಕೆ 5 ಮೊಟ್ಟೆಗಳನ್ನು ನೀಡಲಾಗುತ್ತಿದೆ. ಬ್ರಿಟಾನಿಯಾ ಕಂಪನಿಯವರು ಜಿಲ್ಲೆಯ 3–6 ವರ್ಷದ ವಯೋಮಾನದ ಮಕ್ಕಳಿಗೆ Iron fortified ಬಿಸ್ಕಿಟಗಳನ್ನು ವಾರಕ್ಕೆ 5 ದಿನ ಉಚಿತವಾಗಿ ನೀಡುತ್ತಿದ್ದಾರೆ. 2017–18 ನೇ ಸಾಲಿಗೆ ಪೌಷ್ಠಿಕ ಆಹಾರಕ್ಕಾಗಿ 2216.69 ಲಕ್ಷವನ್ನು ಭರಿಸಲಾಗಿದುದ, 132977 ಫಲಾನುಭವಿಗಳು ಈ ಸೌಲಭ್ಯವನ್ನು ಪಡೆದಿರುತ್ತಾರೆ.

## ಸ್ತ್ರೀಶಕ್ತಿ ಯೋಜನೆ :

ಈ ಯೋಜನೆಯು 2000ನೇ ಇಸವಿಯಲ್ಲಿ ಜಾರಿಗೆ ಬಂದಿದ್ದು ಮಹಿಳೆಯರು ಮಹಿಳೆಯರ ಸಬಲೀಕರಣ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಮಾಡಿ ತಮ್ಮ ಸ್ವಂತ ಕಾಲ ಮೇಲೆ ನಿಲ್ಲುವಂತೆ ಮಾಡಲಾಗಿದೆ. ಪ್ರತಿಯೊಂದು ಗುಂಪಿನಲ್ಲಿ 15–20 ರಷ್ಟು ಮಹಿಳೆಯರಿದ್ದು ಬ್ಯಾಂಕಿನಲ್ಲಿ ಖಾತೆ ತೆರೆದಿರುತ್ತಾರೆ. ಇವರುಗಳು ಉಳಿತಾಯವನ್ನು ಮಾಡುತ್ತಿದು, ಜೊತೆಗೆ ತಮ್ಮ ಉಳಿತಾಯ ಹಾಗೂ ಬ್ಯಾಂಕ್ ಸಹಕಾರ ಪಡೆದು ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದರಲ್ಲಿ ಯಶಸ್ಸನ್ನು ಕೂಡ ಕಂಡಿರುತ್ತಾರೆ. ಗುಂಪುಗಳ ಸದಸ್ಯರು ತಾವು ಎದುರುಸುತ್ತಿರುವ ಸಾಮಾಜಿಕ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆ, ಸಾಮಾಜಿಕ, ಆರ್ಥಿಕ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಬ್ಯಾಂಕ್ ಸಹಕಾರದಿಂದ ಪ್ರಗತಿ ಕಾಣುತ್ತಿದ್ದಾರೆ. ಜಿಲ್ಲೆಯಲ್ಲಿ 2572 ಗುಂಪುಗಳು ಕಾರ್ಯ ನಿರ್ವಹಿಸುತ್ತಿದ್ದು ಒಟ್ಟಾರೆ 37844 ಮಹಿಳೆಯರು ಇದರ ಸದಸ್ಯರಾಗಿರುತ್ತಾರೆ. ಈ ಮಹಿಳೆಯರು ಮೀನುಗಾರಿಕೆ, ಹೈನುಗಾರಿಕೆ, ಸಿಹಿ ತಿಂಡಿ ತಯಾರಿಕೆ, ತರಕಾರಿ ಮಾರಾಟ ಹಾಗೂ ಟೈಲರಿಂಗ್ ಕೆಲಸಗಳನ್ನು ನಡೆಸುತ್ತಿದ್ದಾರೆ. ಈ ಗುಂಪುಗಳು

ಸಾಮಾಜಿಕ ಚಟುವಟಿಕೆಗಳಾದ ಪಲ್ಸ್ ಪೋಲಿಯೋ ಕಾರ್ಯಕ್ರಮ, ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಸೇರಿಸುವುದು ಹಾಗೂ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರೀಯರಾಗಿದ್ದಾರೆ.

### ಕ್ಷೀರಭಾಗ್ಯ ಯೋಜನೆ :

ಈ ಮಹೋನ್ನತ ಯೋಜನೆಯನ್ನು ಕರ್ನಾಟಕ ಸರ್ಕಾರ 01-08-2013 ರಿಂದ ಅಂಗನವಾಡಿಗಳಿಗೂ ವಿಸ್ತರಿಸಿದ್ದು ಇದರ ಸೌಲಭ್ಯವನ್ನು ಅಂಗನವಾಡಿಗೆ ಹಾಜರಾಗುವ ಮಕ್ಕಳಿಗೆ ವಿಸ್ತರಿಸಿದ್ದು ವಾರಕ್ಕೆ 5 ದಿನಗಳ ಕಾಲ ಪ್ರತಿನಿತ್ಯ 150 ಎಮ್.ಎಲ್. ಹಾಲನ್ನು ಸೇವಿಸುತ್ತಿದ್ದಾರೆ.

### ಅಂಗನವಾಡಿ ಕಟ್ಟಡಗಳು :

ಜಿಲ್ಲೆಯಲ್ಲಿ 2687 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 1902 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿರುತ್ತದೆ. ಈ ಸಾಲಿನಲ್ಲಿ 52 ಅಂಗನವಾಡಿ ಕಟ್ಟಡಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಇದಕ್ಕಾಗಿ ರೂ. 249.60 ಲಕ್ಷಗಳು ನಿಗದಿಯಾಗಿದ್ದು ಇದರಲ್ಲಿ ಅಂಗನವಾಡಿ ಕಟ್ಟಡ ಕಾಮಗಾರಿಗಳಿಗಾಗಿ 244.04 ಲಕ್ಷಗಳನ್ನು ನಗದೀಕರಿಸಿ ಅನುಷ್ಟಾನ ಏಜೆನ್ಸಿಗೆ ಒದಗಿಸಲಾಗಿದೆ. 11 ಕಟ್ಟಡಗಳ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ ಕಟ್ಟಡಗಳು ಪ್ರಾರಂಭಿಸಬೇಕಾಗಿದೆ. ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ 40 ಅಂಗನವಾಡಿ ಕಟ್ಟಡಗಳು ಜಿಲ್ಲೆಗೆ ಮಂಜೂರಾಗಿದ್ದು, 3 ಕಟ್ಟಡಗಳ ಕಾಮಗಾರಿ ಪ್ರಗತಿಯಲ್ಲಿದೆ. 2017-18 ನೇ ಸಾಲಿಗೆ ಶಾಸಕರ ಕ್ಷೇತ್ರಾಭಿವೃದ್ಧಿ ಯೋಜನೆಯಡಿ 29 ಅಂಗನವಾಡಿ ಕಟ್ಟಡಗಳಿಗೆ (ಶಿಥಿಲಾವಸ್ಥೆ) ಸೇರಿ ರೂ. 313.20 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

### ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರಿಗೆ ರಕ್ಷಣೆ :

ಶೀರ್ಷಿಕೆಯಲ್ಲಿ ತಿಳಿಸಿದಂತೆ, ಕೌಟುಂಬಿಕ ದೌರ್ಜನ್ಯ ಎದುರುಸುತ್ತಿರುವ ಮಹಿಳೆಯರಿಗೆ ಕೌಟುಂಬಿಕ ಸಲಹೆ, ಕಾನೂನಿನ ಸಹಾಯ ಹಾಗೂ ತುರ್ತು ವಾಸ್ತವ್ಯಕ್ಕೆ ಅಗತ್ಯಗಳನ್ನು ಒದಗಿಸಲಾಗುತ್ತಿದೆ. ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಸಂರಕ್ಷಣಾಧಿಕಾರಿಯಾಗಿ (ಪಿಡಬ್ಲ್ಯೂವಿ) ಕಾರ್ಯನಿರ್ವಹಿಸುತ್ತಿದ್ದು ಗೌರವಾನ್ವಿತ ನ್ಯಾಯಾಲಯಕ್ಕೆ ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸುತ್ತಿದ್ದಾರೆ.

### ಸಾಂತ್ವನ ಮಹಿಳಾ ಸಹಾಯವಾಣಿ :

ಜಿಲ್ಲೆಯಲ್ಲಿ 12 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಉಚಿತ ದೂರವಾಣಿ ನಂಬರ್ 1091 ಒದಗಿಸಲಾಗಿದೆ. ನೊಂದ ಮಹಿಳೆಯರಿಗೆ ಸಾಂತ್ವನ ಹೇಳುವುದು, ರಕ್ಷಣೆ ನೀಡುವುದು, ಕಾನೂನಿನ, ವೈದ್ಯಕೀಯ ಸೌಲತ್ತು ಒದಗಿಸುವುದು, ಅಗತ್ಯವಿದ್ದಾಗ ಆಶ್ರಯ ಒದಗಿಸುವ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

### ಭಾಗ್ಯಲಕ್ಷ್ಮೀ ಯೋಜನೆ :

ಕರ್ನಾಟಕ ಸರ್ಕಾರವು ಹೆಣ್ಣುಮಕ್ಕಳ ರಕ್ಷಣೆ ಹಾಗೂ ಕುಟುಂಬದಲ್ಲಿ ಸ್ಥಾನಮಾನ ಹೆಚ್ಚಿಸುವ ಬಗ್ಗೆ ಹಾಗೂ ಕುಟುಂಬದಲ್ಲಿ ಹೆಣ್ಣುಮಗುವನ್ನು ಸ್ವಾಗತಿಸಲು ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ 2 ಹೆಣ್ಣುಮಕ್ಕಳಿಗೆ ಈ ಸೌಲಭ್ಯ ಒದಗಿಸಲಾಗುತ್ತಿದ್ದು ಸರ್ಕಾರವು ಪ್ರಥಮ ಹೆಣ್ಣು ಮಗುವಿನ ಹೆಸರಿನಲ್ಲಿ ರೂ. 19300/- ಹಾಗೂ 2 ನೇ ಹೆಣ್ಣು ಮಗುವಿನ ಹೆಸರಿನಲ್ಲಿ ರೂ. 18350/- ನ್ನು ಎಲ್.ಐಸಿ. ಯಲ್ಲಿ ಜಮಾ ಮಾಡಲಾಗುತ್ತಿದ್ದು ಈ ಮಕ್ಕಳು 18 ವರ್ಷದಾಟಿದ ಬಳಿಕ

ಕೆಲವೊಂದು ಷರತ್ತನ್ನು ಪೂರೈಸಿದ್ದಲ್ಲಿ ನಿಗದಿಪಡಿಸಿದ ಮೊತ್ತವನ್ನು ನೀಡಲಾಗುತ್ತಿದೆ. ಇದರ ಜೊತೆಯಲ್ಲಿ ಕುಟುಂಬ ವಿಮೆ ಸೌಲಭ್ಯವನ್ನು ನೀಡಲಾಗುತ್ತಿದೆ. 2017–18 ರ ಸಾಲಿಗೆ 2170 ಭಾಗ್ಯಲಕ್ಷ್ಮೀ ಬಾಂಡಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ.

## ಪ್ರಾಯಪೂರ್ವ ಬಾಲಕಿಯರಿಗೆ ಸಬಲಾ ಯೋಜನೆ (ಆರ್.ಜಿ.ಎಸ್.ಇ.ಎ.ಜಿ) :

ಪ್ರಾಯಪೂರ್ವ ಬಾಲಕಿಯರ ಮಾನಸಿಕ, ದೈಹಿಕ, ಭಾವನಾತ್ಮಕ ಬೆಳವಣಿಗೆಗಾಗಿ ಈ ಯೋಜನೆಯು ಜಾರಿಗೆ ಬಂದಿದ್ದು ಕಿಶೋರಿಶಕ್ತಿ ಯೋಜನೆ ಹಾಗೂ ಪ್ರಾಯಪೂರ್ವ ಬಾಲಕಿಯರಿಗಾಗಿ ಪೌಷ್ಟಿಕ ಆಹಾರ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ 11–18 ವಯೋಮಾನದ ಶಾಲೆಬಿಟ್ಟ ಹೆಣ್ಣುಮಕ್ಕಳಿಗಾಗಿ ಪೂರಕ ಪೌಷ್ಟಿಕ ಆಹಾರ ಹಾಗೂ ಪೌಷ್ಟಿಕೇತರ ಸೇವೆಗಳಿಗಾಗಿ ಕಾರ್ಯಕ್ರಮ ರೂಪಿಸಲಾಗಿದೆ. ಈ ಹೆಣ್ಣುಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಮುಂದಿನ ಜೀವನೋಪಾಯಕ್ಕಾಗಿ ಅಗತ್ಯ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುತ್ತಿದೆ. ಜೊತೆಯಲ್ಲಿ ಕುಟುಂಬ ಯೋಜನೆ, ಮಗುವಿನ ಪಾಲನೆ, ಮನೆವಾರ್ತೆ, ಆರೋಗ್ಯಕರ ಲೈಂಗಿಕ ಶಿಕ್ಷಣ, ಸಂತಾನೋತ್ಪತ್ತಿ, ಕೌಶಲ್ಯ ತರಬೇತಿಗಳನ್ನು ನೀಡಲಾಗುತ್ತಿದೆ. ಈ ಹೆಣ್ಣುಮಕ್ಕಳಿಗಾಗಿ ಸ್ಯಾನಟರಿ ನ್ಯಾಪಕಿನ್ ಹಾಗೂ ಕಬ್ಬಿಣಾಂಶದ ಮಾತ್ರೆಗಳನ್ನು ನೀಡಲಾಗುತ್ತಿದೆ.

## ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ :

ಸರ್ಕಾರವು ಜಿಲ್ಲಾಮಟ್ಟದಲ್ಲಿ, ತಾಲೂಕ ಮಟ್ಟದಲ್ಲಿ ಹಾಗೂ ಗ್ರಾಮಪಂಚಾಯತ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವ ಸಂಬಂಧಿ ಸಮಿತಿ ರಚಿಸಲಾಗಿದ್ದು ಇದರಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರನ್ನೊಳಗೊಂಡ ಸಮಿತಿ ಕಾರ್ಯಾಚರಿಸುತ್ತಿದೆ. ಸಾರ್ವಜಿಕರಿಗೆ ಈ ಬಗ್ಗೆ ತಿಳುವಳಿಕೆ ನೀಡುವಂತಹ ಮಾಹಿತಿ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಪಂಚಾಯತನ ಜನಪ್ರತಿನಿಧಿಗಳಿಗೂ ತರಬೇತಿ ನೀಡಲಾಗುತ್ತಿದೆ.

## ನಿರ್ಗತಿಕ ಕುಟೀರಗಳು :

ಈ ಯೋಜನೆಯಡಿ ನಿರ್ಗತಿಕ ಮತ್ತು ಅನಾಥ ಮಕ್ಕಳಿಗಾಗಿ ಸ್ವಯಂಸೇವಾ ಸಂಸ್ಥೆಗಳ ಸಹಕಾರದಿಂದ ನಿರ್ಗತಿಕ ಕುಟೀರಗಳನ್ನು ನಡೆಸಲಾಗುತ್ತಿದೆ. ಒಂದು ಕುಟೀರದಲ್ಲಿ 25 ಮಕ್ಕಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ನಿಗದಿಪಡಿಸಿದ ವಾರ್ಷಿಕ ಅನುದಾನದ 90 ಶೇಕಡಾದಷ್ಟು ಮೊತ್ತವನ್ನು ಜಿಲ್ಲಾ ಪಂಚಾಯತ ಒದಗಿಸುತ್ತಿದ್ದು 10 ಶೇಕಡಾವನ್ನು ಸಂಸ್ಥೆಯು ಭರಿಸಬೇಕಾಗಿರುತ್ತದೆ. ನಿರ್ಗತಿಕ ಕುಟೀರ ನಡೆಸುವ ಸ್ವಯಂ ಸೇವಾ ಸಂಸ್ಥೆಯಲ್ಲಿರುವ ಪ್ರತಿ ಮಕ್ಕಳಿಗೆ ತಿಂಗಳಿಗೆ ರೂ. 1000 ದಂತೆ ಅನುದಾನ ನೀಡಲಾಗುತ್ತಿದೆ. (ಇದರೊಳಗೆ ಸಿಬ್ಬಂದಿ ಸಂಬಳ, ಬಾಡಿಗೆ ಹಾಗೂ ಇತರೆ ವೆಚ್ಚಗಳು ಸೇರುತ್ತವೆ). ಪ್ರಸ್ತುತ ಜಿಲ್ಲೆಯಲ್ಲಿ 3 ನಿರ್ಗತಿಕ ಕುಟೀರಗಳು ಕಾರ್ಯನಿರತವಾಗಿವೆ. 2017–18 ರಲ್ಲಿ 75 ನಿರ್ಗತಿಕ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ.

1) ತೌಹಿದ ಎಜ್ಯುಕೇಶನ್ ಸೊಸೈಟಿ, ಕಾರವಾರ– (2 ನಿರ್ಗತಿಕ ಕುಟೀರ)
2) ಪ್ರಗತಿ ಎಜ್ಯುಕೇಶನ್ ಸೊಸೈಟಿ, ಭರತನಹಳ್ಳಿ, ಯಲ್ಲಾಪುರ

## ಬಾಲಸ್ನೇಹಿ ಯೋಜನೆ :

ಈ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳು ಇಷ್ಟಪಡುವಂತಹ ಹೂ, ಹಣ್ಣು, ಅಕ್ಷರಮಾಲೆ, ಪ್ರಾಣಿ, ಪಕ್ಷಿಗಳ ಚಿತ್ರಗಳು ಅಂಕಿ–ಸಂಖ್ಯೆಗಳು ಇತ್ಯಾದಿಗಳನ್ನು 220 ಅಂಗನವಾಡಿ ಕೇಂದ್ರಗಳಲ್ಲಿ ಬಿಡಿಸಲು

ಉದ್ದೇಶಿಸಿದ್ದು ಈಗಾಗಲೇ 172 ಅಂಗನವಾಡಿ ಕೇಂದ್ರಗಳಲ್ಲಿ ಚಿತ್ರಗಳನ್ನು ಬಿಡಿಸಲಾಗಿದೆ. ಉಳಿದ ಕೇಂದ್ರಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಇದಕ್ಕಾಗಿ ಜಿಲ್ಲೆಗೆ ರೂ. 50.00 ಲಕ್ಷ ಮಂಜೂರಾಗಿರುತ್ತದೆ.

## ಅಂಗನವಾಡಿ ಕೇಂದ್ರಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಸಹಕಾರ :

ಬ್ರಿಟಾನಿಯಾ ಬಿಸ್ಕಿಟ್ ಕಂಪನಿಯವರು ಜಿಲ್ಲೆಯ ಎಲ್ಲಾ 2687 ಅಂಗನವಾಡಿ ಕೇಂದ್ರಗಳಲ್ಲಿ ಹಾಜರಾಗುವ 43000 ದಷ್ಟು ಮಕ್ಕಳಿಗೆ ವಾರದಲ್ಲಿ 5 ದಿನ Iron fortified ಬಿಸ್ಕಿಟಗಳನ್ನು ಏಪ್ರಿಲ್–2017 ರಿಂದ ಮಾನ್ಯ ಉಸ್ತುವಾರಿ ಸಚಿವರ ಸೂಚನೆಯಿಂದ ಒದಗಿಸುತ್ತಿದ್ದಾರೆ. ಈ ಬಿಸ್ಕಿಟ್ ಸೇವನೆ ಮಕ್ಕಳ ರಕ್ತದಲ್ಲಿನ ಹಿಮೋಗ್ಲೋಬಿನ್ ಅಂಶ ಹೆಚ್ಚಳದ ಬಗ್ಗೆ ಆರೋಗ್ಯ ಇಲಾಖೆಯು ಪರಿಶೀಲನೆ ನಡೆಸಿದ್ದು ಉತ್ತಮ ವರದಿ ಕಂಡಿರುತ್ತದೆ.

## ಅಂಗನವಾಡಿ ಕೇಂದ್ರಗಳಿಗೆ ಆಟಿಕೆ ಸಾಮಾಗ್ರಿಗಳು :

ಟೊಯೊಟಾ, ಮೈಸೂರ ಪೇಂಟ್ಸ್ & ವಾರನಿಷ್ ಕಂಪನಿ ಲಿಮಿಟೆಡ್, ಅರಣ್ಯ ವಸತಿ ಮತ್ತು ವಿಹಾರಧಾಮ ಬೆಂಗಳೂರು ಇವರುಗಳು ತಮ್ಮ ಸಿ.ಎಸ್.ಆರ್ ನಿಧಿಯಡಿ 899 ಅಂಗನವಾಡಿ ಕೇಂದ್ರಗಳಿಗೆ ಆಟಿಕೆ ಸಾಮಾಗ್ರಿ ಒದಗಿಸಿರುತ್ತಾರೆ. ಈ ಆಟಿಕೆ ಸಾಮಾಗ್ರಿಗಳನ್ನು ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಸಿದ್ದಾಪುರ, ಯಲ್ಲಾಪುರ, ಹಳಿಯಾಳ ಹಾಗೂ ಜೋಯಿಡಾ ತಾಲೂಕುಗಳಿಗೆ ಒದಗಿಸಲಾಗಿದೆ.

## ಸಂಕಷ್ಟದಲ್ಲಿರುವ ಮಹಿಳೆಯರಿಂದ ಚಿಕ್ಕಿ ತಯಾರಿಕೆ :

ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಹಾಗೂ ಜಿಲ್ಲಾ ಪಂಚಾಯತ ಎನ್.ಆರ್.ಎಲ್.ಎಮ್ ಯೋಜನೆಯ ಆರ್ಥಿಕ ಸಹಕಾರದೊಂದಿಗೆ ಜಿಲ್ಲೆಯಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರಿಗಾಗಿ ಚಿಕ್ಕಿ ತಯಾರಿಕಾ ಘಟಕಗಳನ್ನು ಅಂಕೋಲಾ, ಶಿರಸಿ ಮತ್ತು ಕಾರವಾರಗಳಲ್ಲಿ ಸ್ಥಾಪಿಸಲಾಗಿದೆ. ಈ ಮಹಿಳೆಯರು ತಯಾರಿಸಿದ ಚಿಕ್ಕಿಗಳನ್ನು ಎಮ್.ಎಸ್.ಪಿಟಿ.ಸಿ ಕಾರವಾರ, ಶಿರಸಿ, ಹೊನ್ನಾವರ, ಕುಮಟಾ ಎಮ್.ಎಸ.ಪಿ.ಟಿ.ಸಿ.ಗಳಿಗೆ ನೀಡಲಾಗುತ್ತಿದೆ. ಈ ಚಿಕ್ಕಿಗಳನ್ನು ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಒದಗಿಸಲಾಗುತ್ತಿದ್ದು ಕೇಂದ್ರಕ್ಕೆ ಹಾಜರಾಗುವ ಮಕ್ಕಳಿಗೆ, ಗರ್ಭಿಣಿ/ಬಾಣಂತಿಯರಿಗೆ ಪ್ರತಿದಿನ ನೀಡಲಾಗುತ್ತಿದೆ. ಇದರಲ್ಲಿ ದುಡಿಯುವಂತಹ ಮಹಿಳೆಯರು ಸ್ವಾವಲಂಬಿಯಾಗಿದ್ದು ತಾವು ಸಾಮಾಜಿಕ ಅನುಭವಿಸಿದ ಬಡತನದಿಂದ ಮೇಲೆ ಬರಲು ಕಾರಣವಾಗಿದ್ದು ಅವರಲ್ಲಿ ಆತ್ಮವಿಶ್ವಾಸ ಬೆಳೆದಿರುತ್ತದೆ. ಈ ಚಿಕ್ಕಿ ಘಟಕಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಉಮಾ ಮಹಾದೇವನ್ ಐಎಎಸ್ ಇವರು ಕಾರವಾರ ಚಿಕ್ಕಿ ಘಟಕಕ್ಕೆ ಭೇಟಿ ನೀಡಿದ್ದು ಸಂಕಷ್ಟದಲ್ಲಿರುವ ಮಹಿಳೆಯರ ತಯಾರಿಸುವ ಚಿಕ್ಕಿಯರನ್ನು ಪರಿಶೀಲಿಸಿ ಅವರ ಕಾರ್ಯದ ಬಗ್ಗೆ ಶ್ಲಾಘಿಸಿರುತ್ತಾರೆ. ಸಂಕಷ್ಟದಲ್ಲಿರುವ ಮಹಿಳೆಯರನ್ನು ಒಟ್ಟುಗೂಡಿಸಿ ಅವರಿಗೆ ಉದ್ಯೋಗ ನೀಡುವಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರೇರಕ ಶಕ್ತಿಯಾಗಿರುತ್ತಾರೆ.

*****

ಮಾಹಿತಿ ಮೂಲ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರವಾರ

# ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

**ಇಲಾಖೆಯ ಮುಖ್ಯ ಉದ್ದೇಶ:**

ಹಲವಾರು ಕಾರಣಗಳಿಂದ ಒಂದಲ್ಲಾ ಒಂದು ನ್ಯೂನ್ಯತೆಯಿಂದ ಬಳಲುತ್ತಿರುವ ವಿಕಲಚೇತನರೂ ಸಹ ಸಮಾಜದ ಅವಿಭಾಜ್ಯ ಅಂಗ. ಅವರು ಕೂಡ ಸೃಷ್ಠಿಯ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಬೇಕು, ಸ್ವಾವಲಂಭಿಗಳಾಗಿ ಬಾಳಬೇಕು, ಸುಂದರ ಸದೃಢ ಸಮಾಜದ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕು. ಈ ನಿಟ್ಟಿನಲ್ಲಿ ವಿಕಲಚೇತನ ವ್ಯಕ್ತಿಗಳ ಸರ್ವತೋಮುಕ ಅಭೀವೃದ್ಧಿಗೆ ಮತ್ತು ಅಭ್ಯುದ್ದಯಕ್ಕೆ ಶಿಕ್ಷಣ, ಉದ್ಯೋಗ, ಸಾಮಾಜಿಕ ಭದ್ರತೆ ಮತ್ತು ಪುನರ್ವಸತಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 1988ರಲ್ಲಿ ಅಂಗವಿಕಲರ ಕಲ್ಯಾಣ ಇಲಾಖೆ ಸ್ಥಾಪನೆಗೊಂಡು ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವಿಕಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣಾಧಿಕಾರಿಗಳು ಇಲಾಖೆಯ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದಾರೆ.

### ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

* **ವಿಕಲಚೇತನರ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ :**

1 ನೇ ತರಗತಿಯಿಂದ 5 ನೇ ತರಗತಿಯವರೆಗೆ ರೂ. 1000/–, 6 ರಿಂದ 10 ನೇ ತರಗತಿವರೆಗೆ ರೂ.2000/– ಪಿ.ಯು.ಸಿ. ರೂ. 3000/– ಬಿ.ಎ., ಬಿ.ಕಾಂ., ಬಿ.ಎಸ್.ಸಿ, ಇತರೇ ಪದವಿ ವಿದ್ಯಾರ್ಥಿಗಳಿಗೆ ರೂ. 4000/– ಮಾಹೆಯಾನ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

* **ಸಾಧನ ಸಲಕರಣೆ :**

ವಿಕಲಚೇತನರ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾಗಿರುವ ಸಾದಾ ತ್ರಿಚಕ್ರ ವಾಹನಗಳು, ಗಾಲಿ ಖುರ್ಚಿಗಳು, ಶ್ರವಣ ಸಾಧನಗಳು, ಕೃತಂಗ ಅಂಗಾಂಗಗಳು, ದೃಷ್ಠಿದೋಷವುಳ್ಳವರು ಉಪಯೋಗಿಸುವ ಬ್ರೈಲ್ ಗಡಿಯರ ಹಾಗೂ ಬಿಳಿ ಕೋಲುಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

* **ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆ :**

ವಿಕಲಚೇತನರಿಗೆ ಸ್ವಯಂ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಆಧಾರ ಯೋಜನೆಯಡಿಯಲ್ಲಿ ನಿರ್ವಹಣಾ ಬಂಡವಾಳ ರೂ. 1,00,000/– ಗಳನ್ನು ಶೇ. 50 ರಷ್ಟು ಬ್ಯಾಂಕ್ ಸಾಲ ಮತ್ತು ಶೇ. 50 ರಷ್ಟು ಸಬ್ಸಿಡಿ ಮಂಜೂರಿ ಮಾಡಲಾಗುತ್ತಿದೆ. ಈ ಮಂಜೂರಾತಿ ಮಾಡಿದ ಪ್ರಕಾರ ಹಂಚಿಕೆ ಮಾಡಿ ಫಲಾನುಭವಿಗಳಿಗೆ ನೀಡುವ ವ್ಯವಸ್ಥೆ ಮಾಡಲಾಗಿದೆ.

| ಅ.ನಂ. | ವರ್ಷ | ವಿಕಲಚೇತನ ವಿದ್ಯಾರ್ಥಿ ವೇತನ | |
|---|---|---|---|
| | | ಆರ್ಥಿಕ | ಭೌತಿಕ |
| 1 | 2018–19 | 9.25 | 537 |

* **ಟಾಕಿಂಗ್ ಲ್ಯಾಪ್‌ಟಾಪ್ :**

ಎಸ್.ಎಸ್.ಎಲ್.ಸಿ ಹಾಗೂ ನಂತರದ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಲು ಟಾಕಿಂಗ್ ಲ್ಯಾಪ್‌ಟಾಪ್ ವಿತರಿಸಲಾಗುತ್ತಿದೆ. 2018-19 ನೇ ಸಾಲಿನಲ್ಲಿ ಪ್ರಧಾನ ಕಛೇರಿಯಿಂದ ಮಂಜೂರಿ ಮಾಡಿದ್ದು ಇರುವುದಿಲ್ಲ.

* **ಯಂತ್ರಚಾಲಿತ ದ್ವಿಚಕ್ರವಾಹನ :**

20 ರಿಂದ 60 ವಯೋಮಾನದಲ್ಲಿರುವ ತೀವ್ರತರನಾದ ದೈಹಿಕ ವಿಕಲಚೇತನರಿಗೆ ವಾರ್ಷಿಕ ವರಮಾನ 2.00 ಲಕ್ಷಕ್ಕಿಂತ ಕಡಿಮೆ ಇರುವ ದೈಹಿಕ ವಿಕಲಚೇತನರು ಅಂದರೆ ಸೊಂಟದ ಕೆಳಭಾಗದ ಪೂರ್ಣ ಸ್ವಾಧೀನವಿಲ್ಲದ ಶೇ. 100 ರಷ್ಟು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಅಂದರೆ ಶೇ. 70 ಕ್ಕಿಂತ ಹೆಚ್ಚಿಗೆ ಇರುವ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ನೀಡಲಾಗುತ್ತಿದೆ.

* **ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ :**

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ಕಾರ್ಯಾಲಯ ಕಾರವಾರದಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಮಾನ್ಯ ಉಸ್ತುವಾರಿ ಸಚಿವರಿಂದ ಹಿರಿಯ ನಾಗರಿಕರ ಸಹಾಯವಾಣಿ ಉದ್ಘಾಟನೆಯಾಗಿರುತ್ತದೆ.

* **ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆ :**

ಈ ಯೋಜನೆಯಡಿಯಲ್ಲಿ ವಿಕಲಚೇತನರು ಇರುವ ಸ್ಥಳದಲ್ಲಿಯೇ ವಿವಿಧ ಇಲಾಖೆಯ ಸೌಲಭ್ಯಗಳನ್ನು ಅವರ ಮನೆಬಾಗಿಲಿಗೆ ವಿಕಲಚೇತನರ ಮುಖಾಂತರ ತಲುಪಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯನ್ನು ಜಿಲ್ಲೆಯ ಎಲ್ಲಾ 11 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮೀಣ ಪುರ್ನವಸತಿ ಕಾರ್ಯಕರ್ತರನ್ನು ಹಾಗೂ ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ವಿವಿಧೋದ್ದೇಶ ಪುರ್ನವಸತಿ ಕಾರ್ಯಕರ್ತರನ್ನು ಗೌರವಧನದ ಆಧಾರದ ಮೇಲೆ ನೇಮಕ ಮಾಡಲಾಗಿರುತ್ತದೆ. ಈ ಯೋಜನೆಯಲ್ಲಿ 199 ಸಮರ್ಥ ವಿಕಲಚೇತನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ.

* **ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ :**

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ 2013-14 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯು ಜಾರಿಗೆ ಬಂದಿದ್ದು, ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ, ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಯೋಜನೆಗೆ ಅರ್ಹರಾಗಿರುತ್ತಾರೆ.

* **ವೈದ್ಯಕೀಯ ಪರಿಹಾರ ನಿಧಿ ಯೋಜನೆ :**

ಈ ಯೋಜನೆಯಡಿಯಲ್ಲಿ ಅರ್ಹ ವಿಕಲಚೇತನ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸುಸಜ್ಜಿತ ಖಾಸಗಿ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆ ಹಾಗೂ ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಗರಿಷ್ಠ ರೂ. 1.00 ಲಕ್ಷಗಳವರೆಗೆ ಧನಸಹಾಯ ನೀಡುವ ಸೌಲಭ್ಯವಿದೆ. 2018-19ನೇ ಸಾಲಿಗೆ 2 ಫಲಾನುಭವಿಗಳಿಗೆ ರೂ. 1,54,024/- 3.50 ಲಕ್ಷ ಸಂದಾಯ ಮಾಡಲಾಗಿದೆ.

*     **ವಿವಾಹ ಪ್ರೋತ್ಸಾಹ ಧನ:**

ವಿಕಲಚೇತನ ಯುವಕ / ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ / ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ವ್ಯಕ್ತಿಯ ಹೆಸರಿನಲ್ಲಿ ರೂ. 50,000/– ಗಳನ್ನು ಹೂಡಿಕೆಯ ರೂಪದಲ್ಲಿ ನೀಡಿ ವಿಕಲಚೇತನರನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನ ವ್ಯಕ್ತಿಗಳು ಜಂಟಿಯಾಗಿ 05 ವರ್ಷಗಳ ಅವಧಿಗೆ ಭದ್ರತಾ ಠೇವಣಿಯಲ್ಲಿಟ್ಟು ಇದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರಿಸಬಹುದು. ಈ ಯೋಜನೆಯನ್ನು ದಿ. 29–08–2013 ರಿಂದ ಜಾರಿಗೊಳಿಸಿದೆ.

*     **ಶಿಶು ಕೇಂದ್ರಿಕೃತ ಯೋಜನೆ :**

ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿರುವ ವಿಶೇಷ ಶಾಲೆಗಳ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸಹಾಯಾನುದಾನ ನೀಡಲು 2010–11 ನೇ ಸಾಲಿನಲ್ಲಿ ಅಂಗವಿಕಲ ಮಕ್ಕಳ ಶಿಶು ಕೇಂದ್ರಿಕೃತ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ವಸತಿಯುತ ಪ್ರತಿ ಮಗುವಿಗೆ ಮಾಹೆಯಾನ ರೂ. 6200/– ರಂತೆ ವರ್ಷದಲ್ಲಿ ಹತ್ತು ತಿಂಗಳ ಅವಧಿಗೆ ಅನುದಾನ ನೀಡಲಾಗುತ್ತಿದೆ. ಈ ಅನುದಾನದಲ್ಲಿ ಶಿಕ್ಷಕರ ಗೌರವಧನ ಮತ್ತು ಕಟ್ಟಡದ ಬಾಡಿಗೆ ಒಳಗೊಂಡಿರುತ್ತದೆ.

| ಅ. ನಂ. | ವರ್ಷ | ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆ | | ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ | | ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ | | ವಿವಾಹ ಪ್ರೋತ್ಸಾಹ ಧನ | | ಶಿಶು ಕೇಂದ್ರಿಕೃತ ಯೋಜನೆ | |
|---|---|---|---|---|---|---|---|---|---|---|---|
| | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1 | 2018–19 | 76.89 | 199 | 2.96 | 56 | 6.15 | 05 | 2.50 | 50 | 155.57 | 326 |

*     **ನಿರಾಮಯ ಆರೋಗ್ಯ ವಿಮಾ ಯೋಜನೆ :**

ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಪ್ರತಿ ವ್ಯಕ್ತಿಗೆ ಒಂದು ಬಾರಿಗೆ ರೂ. 250/ – ಗಳನ್ನು ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ. 1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

*     **ಶಿಶುಪಾಲನಾ ಭತ್ಯೆ :**

ದೃಷ್ಟಿ ದೋಷವುಳ್ಳ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ 2 ಹೆರಿಗೆಯವರೆಗೆ ಪ್ರತಿ ಹೆರಿಗೆಯ ನಂತರ 2 ವರ್ಷ ಅವಧಿಗೆ ತಿಂಗಳಿಗೆ ರೂ. 2,000/– ಗಳ ಶಿಶುಪಾಲನಾ ಭತ್ಯೆಯನ್ನು ನೀಡಲು ಯೋಜನೆ ಜಾರಿಗೊಳಿಸಿದೆ. ಅವರುಗಳ ಕುಟುಂಬದ ವಾರ್ಷಿಕ ಆದಾಯ ರೂ. 25.20 ಲಕ್ಷಗಳ ಒಳಗಿರಬೇಕು. ಶಿಶುಪಾಲನ ಭತ್ಯೆಯುನ್ನು ಮಗುವಿನ ಆರೋಗ್ಯ, ಪೌಷ್ಠಿಕ ಆಹಾರ ಮತ್ತು ಪಾಲನೆಗೆ ಮಾತ್ರ ಬಳಸಬೇಕಾಗುವುದು. 2018–19ನೇ ಸಾಲಿಗೆ 4 ಫಲಾನುಭವಿಗೆ ರೂ. 96,000/– ಖರ್ಚು ಭರಿಸಲಾಗಿದೆ.

*   **ಅರಿವಿನ ಸಿಂಚನ ಯೋಜನೆ :**

ವಿಕಲಚೇತನರ ಪೋಷಕರಿಗೆ / ಸಮುದಾಯಕೆ ಅರಿವು, ಸ್ಫೂರ್ತಿ ಮೂಡಿಸುವ ಕಾರ್ಯಕ್ರಮ ಎಂಬ ಹೊಸ ಯೋಜನೆ ಘೋಷಿಸಲಾಗಿದೆ. ವಿಕಲಚೇತನರಿಗೆ ಪೋಷಕರ, ಶಿಕ್ಷಕರ ಹಾಗೂ ಸಮಾಜದ ಬೆಂಬಲ ಅಗತ್ಯತೆ ಇದ್ದು ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು ಯೋಜನೆಯ ಉದ್ದೇಶವಾಗಿರುತ್ತದೆ. 2016–17ನೇ ಸಾಲಿಗೆ ಘೋಷಣೆಯಾಗಿರುತ್ತದೆ.

*   **ಸ್ಪರ್ಧಾ ಚೇತನ ಯೋಜನೆ :**

2016–17 ನೇ ಸಾಲಿಗೆ ವಿಶೇಷ ಸಾಮರ್ಥ್ಯವುಳ್ಳ ಭಿನ್ನ ಸಾಮರ್ಥ್ಯದ ವಿದ್ಯಾವಂತ ನಿರುದ್ಯೋಗಿ ಅಂಗವಿಕಲ ವ್ಯಕ್ತಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಸಹಾಯಧನ ನೀಡುವ ಯೋಜನೆಯನ್ನು ಘೋಷಿಸಿರುತ್ತಾರೆ.

*   **ಸಾಧನೆ ಮತ್ತು ಪ್ರತಿಭೆ :**

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ **"ಪ್ರತಿಭೆ"** ಎಂಬ ಯೋಜನೆಯನ್ನು ಹಾಗೂ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಂಡ ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು **"ಸಾಧನೆ"** ಎಂಬ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

*   **ಜಿಲ್ಲಾ ವಿಕಲಚೇತನ ಪುನರ್ವಸತಿ ಕೇಂದ್ರ ಯೋಜನೆ :**

